
ದುಡಿವ ಜನರ ಪ್ರಾಣ ಮಿತ್ರ


ಐಕ್ಯರಂಗ


ಸಂಪುಟ 26 ಸಂಚಿಕೆ 49 ಡಿಸೆಂಬರ್ 05, 2004 ಬೆಲೆ ರೂ. 3.00



ಮಹಿಳಾ ಚಳುವಳಿಗೆ ಸ್ಪಷ್ಟ ದಿಕ್ಕು ತೋರಿದ ಸಮ್ಮೇಳನ







ಕಾಶ್ಮೀರ - ಈಶಾನ್ಯ ಭಾರತದ ಪ್ರಶ್ನೆಗಳು

ಸ್ವಾಗತಾರ್ಹ ಬದಲಾವಣೆ

ಬೀದಿಗಿಳಿಯುತ್ತಿರುವ ಜನ ದೆಹಲಿ ಯಾತ್ರೆಗೆ ಮೈತ್ರಿಕೂಟ



- ದಕ್ಷಿಣ ಅಮೆರಿಕದಲ್ಲಿ ಎಡ ಪರ್ಯಾಯ
- ಸ್ವಾಮಿಗಳ ಅಸಲಿ-ನಕಲಿ ಸಭೆ
- ಆರೋಗ್ಯ ರಕ್ಷಣೆ: ಆರ್ಥಿಕತೆ-ರಾಜಕಾರಣ

ಪರಿವಾರದಿಂದ ಕಾನೂನು ತಿರಸ್ಕಾರ

ಶ್ರಮಜೀವಿ ವರ್ಗದ ವಿಮೋಚನೆಗೆ ಸಮರ್ಪಿತ ಬದುಕು

ಮಹಾನ್ ಕ್ರಾಂತಿಕಾರಿ ಕಾಂ. ಬಿ.ಟಿ.ಆರ್.

ಎಂ.ಕೆ.ಪಂಧೆ

ಈಗ ಮಹಾನ್ ಕ್ರಾಂತಿಕಾರಿ ಬಿ.ಟಿ.ರಣದಿವೆಯವರ ಜನ್ಮಶತಮಾನೋತ್ಸವ ವರ್ಷ. (ಡಿಸೆಂಬರ್ 19) ಹಾಗೆ ಕಾಂ.ಎಕೆಜಿಯವರದ್ದು. ಈ ಸಂದರ್ಭದಲ್ಲಿ ದೇಶದಾದ್ಯಂತ ವೈವಿಧ್ಯಮಯವಾಗಿ ಆಚರಿಸಲಾಗುತ್ತಿದೆ. ಕಾಂ. ಎ.ಕೆ.ಜಿ.ಯವರನ್ನು ಪರಿಚಯಿಸುವ ಹಲವು ಗ್ರಂಥ, ಬರಹಗಳಿವೆ. ಆದರೆ ಕಾಂ. ಬಿ.ಟಿ.ಆರ್. ರವರ ಬಗ್ಗೆ ಇರುವುದು ತೀರಾ ಅಪರೂಪ. ಕಾಂ. ಬಿ.ಟಿ.ಆರ್. ರವರ ಬಗ್ಗೆ ಕಿರುಹೊತ್ತಿಗೆ ಬರೆದಿರುವ ಸಿಐಟಿಯು ರಾಷ್ಟ್ರ ಅಧ್ಯಕ್ಷರಾದ ಕಾಂ. ಎಂ.ಕೆ.ಪಂಧೆಯವರಿಂದ ಬದುಕಿನ ವಿವರಗಳತ್ತ ಒಂದು ಇಣುಕು ನೋಟ.

ಕಾಂ. ಬಿ.ಟಿ.ರಣದಿವೆಯವರ ಜೀವನ ಚರಿತ್ರೆಯನ್ನು ಬರೆಯುವ ಸಾಹಸಕ್ಕೆ ಕೈಯಿಟ್ಟ ಯಾರಾದರೂ, ಅವರ ಬದುಕಿನ ಹಲವಾರು ಸಂಕೀರ್ಣ ವಿಷಯಗಳನ್ನು ಎದುರಿಸಬೇಕಾಗುತ್ತದೆ. ಕಾಂ. ರಣದಿವೆಯವರು ಆರು ದಶಕಗಳಷ್ಟು ದೀರ್ಘ ಕಾಲ ಭಾರತದ ಕಮ್ಯೂನಿಸ್ಟ್ ಚಳುವಳಿಯಲ್ಲಿ ನಡೆದಿರುವ ಎಲ್ಲ ರಾಜಕೀಯ ಚರ್ಚೆಗಳಲ್ಲಿ ಅಗ್ರ ಪಾತ್ರ ವಹಿಸಿದ್ದಾರೆ. ಸಹಜವಾಗಿಯೇ ಚರಿತ್ರಕಾರರಿಗೆ ಎಲ್ಲಾ ವಿವಾದಾಸ್ಪದ ವಿಷಯಗಳನ್ನು ಕೈಗೆತ್ತಿಕೊಳ್ಳುವ ಸಾಹಸಯುಕ್ತ ಕಾರ್ಯನಿರ್ವಹಿಸಬೇಕಾಗುತ್ತದೆ. ಹಾಗೂ ಚರಿತ್ರಾಕಾರನಿಗೆ ಅವರ ಜೀವನ ಹಾಗೂ ಜೀವನಕಾಲದ ಕಾರ್ಯವೈಖರಿಯನ್ನು ಪರಿಶೀಲಿಸುವಾಗ ಯಾವುದೇ ಅಭಿಪ್ರಾಯವನ್ನು ಮಂಡಿಸಲು ಅತೀವ ಕಷ್ಟವೆನಿಸುತ್ತದೆ.

ವಿಶ್ವವಿದ್ಯಾಲಯದ ಪ್ರತಿಭಾನ್ವಿತ ವಿದ್ಯಾರ್ಥಿಯಾಗಿದ್ದ ಕಾಂ. ರಣದಿವೆಯವರು ಮಾರ್ಕ್ಸಿಸ್ಟ್ ಸಾಹಿತ್ಯದ ಸಂಪರ್ಕಕ್ಕೆ ಬಂದರು ಹಾಗೂ ಮಾರ್ಕ್ಸಿಸ್ಟ್ ಸಿದ್ಧಾಂತಕ್ಕೆ ಆಕರ್ಷಿತರಾದರು. 20 ರದಶಕದಲ್ಲಿ ಮಾರ್ಕಿಸ್ಟ್ ಸಾಹಿತ್ಯವು ದುರ್ಲಭವಾಗಿದ್ದಾಗಿಯೂ ರಣದಿವೆಯವರು ದೇಶದಲ್ಲಿ ಲಭ್ಯವಿದ್ದ ಸಾಹಿತ್ಯವನ್ನು ರಹಸ್ಯ/ಗುಪ್ತವಾಗಿ ಎದಿದರು. ಜೀವನದುದ್ದಕ್ಕೂ ಅವರು ಮಾರ್ಕ್ಸ್‌ವಾದ, ಲೆನಿನ್ ವಾದದ ನಿಯಮಗಳಿಗೆ ಬದ್ಧವಾಗಿದ್ದದ್ದೇ ಅಲ್ಲದೆ ಸೈದ್ಧಾಂತಿಕ ತತ್ವಗಳನ್ನು ಜಾರಿಗೊಳಿಸಲು ಅತ್ಯಂತ ಸಮರ್ಪಣೆ ಮತ್ತು ವಿಧೇಯತೆಯಿಂದ ಕೆಲಸ ಮಾಡಿದರು.

ಅವರೆಂದೂ ನಿಯಮಗಳನ್ನು ಪಾಲಿಸುವಲ್ಲಿ ರಾಜಿ ಮಾಡಿಕೊಳ್ಳಲಿಲ್ಲ. ಮತ್ತು ಯಾವುದೇ ವಿಷಯದಲ್ಲೂ ಅವರು ತೆಗೆದುಕೊಂಡ ನಿಲುವುಗಳನ್ನು ನೇರವಾಗಿ ಹಾಗೂ ದೃಢ ನಿಶ್ಚಯದಿಂದ ಹೇಳುತ್ತಿದ್ದರು. ಅವರು ತಪ್ಪು ಎಂದು ಪರಿಗಣಿಸಿದ್ದನ್ನು ಮತ್ತು ಪ್ರಗತಿವಿರೋಧಿ ಎಂದು ಕಂಡದ್ದನ್ನು ಖಂಡಿಸುವಲ್ಲಿ ನಿಷ್ಕರುಣೆಯಿಂದಿರುತ್ತಿದ್ದರು. ಅವರು ಶೋಷಣೆ ಹಾಗೂ ಸಾಮಾಜಿಕ ಅಂಧಶ್ರದ್ಧೆಯ ವಿರುದ್ಧದ ಪ್ರತಿ ಹೋರಾಟವನ್ನು ಅತ್ಯುತ್ಸಾಹದಿಂದ ಸ್ವಾಗತಿಸುತ್ತಿದ್ದರು.

ಬಿ.ಟಿ.ಆರ್. ದೈನಂದಿನ ವಿಷಯಗಳನ್ನು ಅಂತಿಮ ಗುರಿಯಾದ ಸಾಮಾಜಿಕ ಪರಿವರ್ತನೆಯೆಡೆಗೆ ಬೆಸೆಯುವುದನ್ನು ಎಂದೂ ಮರೆಯಲಿಲ್ಲ. ಪ್ರತಿಕಾರ್ಮಿಕ ಸಂಘಗಳ ಸಭೆಯೇ ಆಗಲೀ ಅಥವಾ ಇತರೆ ಸಾಮೂಹಿಕ ಸಂಘಗಳ ಸಭೆಯನ್ನು ಕುರಿತು ಈ ದಿನನಿತ್ಯದ ಹೋರಾಟಗಳ ಅಂತಿಮ ಗುರಿಯ ಬಗ್ಗೆ ಹೇಳದೆ ಇರುತ್ತಿರಲಿಲ್ಲ.


ಕಮ್ಯೂನಿಸ್ಟ್ ಚಳುವಳಿಯಲ್ಲಿನ ಬಲ ಮತ್ತು ಎಡಪಂಥೀಯ ವಾದದ ವಿರುದ್ಧದ ರಾಜಿಯಾಗದ ಅವರ ಹೋರಾಟವು ಮಾರ್ಕಿಸ್ಟ್ ತತ್ವವನ್ನು, ಅವರೆಷ್ಟು ಕಾಳಜಿಯಿಂದ ಅವಲಂಬಿಸಿದ್ದರೆಂಬ ಅಂಶದಿಂದಲೇ ಅವರು ಪ್ರಸಿದ್ಧವಾದದ್ದು. ಅವರು ವಿಷಯಗಳನ್ನು ಸರಳ-ಸುಲಲಿತ ಭಾಷೆಯಿಂದ ಸಾಮಾನ್ಯ ಕಾಮ್ರೇಡ್‌ಗಳಿಗೆ ತಿಳಿಸಿ ಹೇಳುತ್ತಿದ್ದ ರೀತಿ ವಿಭಿನ್ನವೇ ಸರಿ. ಅವರು ಎಂತಹ ಕ್ಲಿಷ್ಟ ಸಮಸ್ಯೆಗಳನ್ನು ಕಾರ್ಯಕರ್ತರಿಗೆ ಸ್ಪಷ್ಟವಾಗಿ ಸರಳ ಭಾಷೆಯಲ್ಲೇ ತಿಳಿಸಿ ಕಾರ್ಯಕರ್ತರ ಅರ್ಥಮಾಡಿಕೊಳ್ಳುವ ಶಕ್ತಿಯನ್ನು ಹೆಚ್ಚಿಸುವಲ್ಲಿ ಸಹಾಯಕರಾಗುತ್ತಿದ್ದರು.

ಕಾಂ. ರಣದಿವೆಯವರು ಬ್ರಿಟಿಷ್ ಮತ್ತು ಕಾಂಗ್ರೆಸ್ ಆಡಳಿತಾವಧಿಯಲ್ಲಿ ಹಲವಾರು ಸಂದರ್ಭಗಳಲ್ಲಿ ಸೆರೆವಾಸವನ್ನು ಅನುಭವಿಸಬೇಕಾಗಿದ್ದೇ ಅಲ್ಲದೆ ಭೂಗತರಾಗಿಯೂ ಉಳಿಯಬೇಕಾಯಿತು. ಅವರನ್ನು ಆಡಳಿತಗಾರರು ಹಲವಾರು ಸಂದರ್ಭಗಳಲ್ಲಿ ಅತ್ಯಂತ 'ಅಪಾಯಕಾರಿ' ಕಮ್ಯೂನಿಸ್ಟ್ ಎಂದೇ ಪರಿಗಣಿಸಿದ್ದರು. ಹಾಗೂ ಅವರನ್ನು ಅವರ ರಾಜಕೀಯ ಶತ್ರುಗಳು ಅತ್ಯಂತ ಭಾವಾ ವೇಶದಿಂದ ಖಂಡಿಸುತ್ತಿದ್ದರು. ಅವರ ಇಡೀ ಜೀವನಕಾಲದಲ್ಲಿ ಚಾಚೂತಪ್ಪದೆ ಕಟ್ಟುನಿಟ್ಟಿನ ಸರಳತೆಯನ್ನು ಅಳವಡಿಸಿ ಕೊಂಡಿದ್ದರು. ಹಾಗೂ ಕೆಲವೊಮ್ಮೆ ತೀವ್ರ ಆರ್ಥಿಕ ತೊಂದರೆಯನ್ನನುಭವಿಸಿದರೂ ಎಂದೂ ಮುಚ್ಚುಮರೆಯಿಲ್ಲದ ನಿಚ್ಚಳ ಅಭಿಪ್ರಾಯವನ್ನು ಪ್ರಕಟಪಡಿಸಲು ಎದೆಗುಂದಲಿಲ್ಲ. ಇಂಡೋ-ಚೈನಾ ಯುದ್ಧಕಾಲದಲ್ಲಿ ಅವರನ್ನು 'ದೇಶ ವಿರೋಧಿ' ಎಂದು ಬಣ್ಣಿಸಲ್ಪಟ್ಟಿದ್ದರೂ ಅವರು ಗಡಿವಿವಾದವನ್ನು ಸಂಧಾನದ ಮೂಲಕವೇ ಬಗೆಹರಿಸಬೇಕೆಂಬ ದೃಢ ನಿಲುವಿಗೆ ಬದ್ಧರಾಗಿದ್ದರು. ಈ ಗಡಿ ವಿವಾದವು ಬ್ರಿಟಿಷ್ ಸಾಮ್ರಾಜ್ಯಶಾಹಿಯು ಬಿಟ್ಟುಕೊಟ್ಟ ಪೂರ್ವಾರ್ಜಿತ ಆಸ್ತಿಯಾಗಿದ್ದು ಇದನ್ನು ಪರಸ್ಪರ ಅರ್ಥಮಾಡಿಕೊಳ್ಳುವ ಮೂಲಕ ಸರಿಹೊಂದಿಸಬಹುದೆಂದು ಅವರು ದೃಢವಾಗಿ ವಾದಿಸುತ್ತಿದ್ದರು.

ಬಿ.ಟಿ.ಆರ್. ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದಾಗಲೂ ಎಂದೂ ತಮ್ಮ ತಪ್ಪನ್ನು ಮುಚ್ಚಿಡುವ ಪ್ರಯತ್ನ ಮಾಡದೆ ತಾವು ತಪ್ಪಾಗಿ ಗ್ರಹಿಸಿದ ನೀತಿಗಳನ್ನು ನಿಷ್ಕಪಟವಾಗಿ ಒಪ್ಪಿಕೊಳ್ಳುತ್ತಿದ್ದರು. ಅವರು ನಿರ್ದಿಷ್ಟ ಲಕ್ಷ್ಯದಿಂದ ಅವುಗಳನ್ನು ಪುನರ್ ಪರಿಶೀಲಿಸಿದರು ಮತ್ತು ತಮ್ಮ ಗ್ರಹಿಕೆಯನ್ನು ಸರಿಪಡಿಸಿಕೊಳ್ಳುವ ಗಂಭೀರ ಪ್ರಯತ್ನವನ್ನು ನಡೆಸಿದರು. ತಾತ್ವಿಕ ಗ್ರಹಿಕೆಯೆಡಗಿನ ಈ ವೈಜ್ಞಾನಿಕ ಹಾದಿಯೇ ಅವರನ್ನು ಪಕ್ಷದ ಎಲ್ಲಾ ಸ್ಥಾನಗಳಿಂದಲೂ ತೆಗೆದುಹಾಕಿದ್ದಾಗ್ಯೂ ಪುನಃ ಅಗ್ರಸ್ಥಾನಕ್ಕೇರಿಸಿದ್ದು, ಈ ಆದರ್ಶಪ್ರಾಯ ಗುಣದಿಂದಾಗಿಯೇ ಅವರನ್ನು ಅತ್ಯುತ್ಸಾಹದಿಂದ ಪಕ್ಷದ ನಾಯಕರನ್ನಾಗಿ ಒಪ್ಪಿಕೊಂಡಿದ್ದು.

ಬಿ.ಟಿ.ಆರ್. ರವರ ಜೀವನದ ಚಿತ್ರಣದಿಂದ ಸ್ಪಷ್ಟವಾಗಿ ಗುರುತಿಸಬಹುದಾದ ಅಂಶವೆಂದರೆ, ಅವರ ಮನದಲ್ಲಿ ಪಕ್ಷದ ಧ್ಯೇಯ ಮತ್ತು ದೇಶದ ಶ್ರಮಿಕರಿಗೆ ಸೇವೆ ಸಲ್ಲಿಸುವ ಇಚ್ಛೆಯನ್ನು ಬಿಟ್ಟು ಬೇರೇನನ್ನೂ ಮನದಲ್ಲಿಟ್ಟುಕೊಂಡಂತಿಲ್ಲವೆಂಬುದು. ಅವರ ಬಹಳಷ್ಟು ಪರಿಚಯಸ್ಥರು ಯಾವಾಗಲೂ ಹೇಳುವಂತೆ ಅವರ ಖಾಸಗಿ ಬದುಕು ಎಂಬುದೊಂದು ಇರಲೇ ಇಲ್ಲವೆಂಬುದು. ಅವರ ಸಾಂಸಾರಿಕ ಜೀವನವು ಒಂದು ತೆರೆದ ಪುಸ್ತಕದಂತಿದ್ದು ಅವರ ವಿರೋಧಿಗಳು ಸಹ ಯಾವುದೇ ತಪ್ಪನ್ನು ಕಾಣಲಾಗಲಿಲ್ಲ. ಕ್ರಾಂತಿಕಾರಿ ಚಳುವಳಿಯ ಆಸಕ್ತಿಗಳು ಎಂದೂ ಅವರಿಗಿಂತ ಎತ್ತರಕ್ಕೇ ಇದ್ದವು.

ಒಬ್ಬ ಸಾಚಾ ಶ್ರಮಿಕ ಅಂತರ್ರಾಷ್ಟ್ರೀಯವಾದಿಯಾಗಿ ಅವರು ಎಂದೆಂದೂ ಶ್ರಮಿಕವರ್ಗದ ಅಂತರ್ರಾಷ್ಟ್ರೀಯ ಐಕ್ಯ ಮತಕ್ಕೆ ಸಹಮತ ಸೂಚಿಸಿದರು. ಅವರು ಪ್ರತಿಯೊಂದು ಖಂಡದಲ್ಲಿಯೂ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಗಳ ಬಗ್ಗೆಯೂ ಬರೆದಿದ್ದಾರೆ. ಅವರು ಸೋವಿಯತ್ ಯೂನಿಯನ್ ಮತ್ತು ಚೈನಾದಲ್ಲಿ ನಡೆದ ಕ್ರಾಂತಿಗೆ ಬಲವಾದ ಐಕ್ಯಮತವನ್ನು



ಬಿ.ಟಿ.ರಣದಿವೆ

ಸೂಚಿಸಿದ್ದೇ ಅಲ್ಲದೆ ಆವೇಶಪೂರಿತವಾಗಿ ಸಮಾಜವಾದಿ ಶಿಬಿರ/ಪಾಳೆಯದ ಲಾಭವನ್ನು ಸಮರ್ಥಿಸಿಕೊಂಡರು. ಅವರು ಕ್ಯೂಬಾದ ಕ್ರಾಂತಿಯನ್ನು ವಿಶೇಷವಾಗಿ ಸಮರ್ಥಿಸಿಕೊಳ್ಳುತ್ತಾರೆ. ಏಕೆಂದರೆ, ಕ್ಯೂಬಾವು ಅತ್ಯಂತ ಭಯಾನಕ ಸಾಮ್ರಾಜ್ಯಶಾಹಿ ಶಕ್ತಿಗೆ ಅತ್ಯಂತ ಸನಿಹದಲ್ಲಿರುವ ರಾಷ್ಟ್ರವಾಗಿದೆ. ಕಾಂ. ರಣದಿವೆಯವರು ಭಾರತದ ಕಾರ್ಮಿಕವರ್ಗದ ಹಾಗೂ ಶ್ರಮಜೀವಿ ಸಮೂಹದ ಚಳುವಳಿಗಳನ್ನು ಪ್ರಪಂಚದಾದ್ಯಂತ ಜನರ ಕ್ರಾಂತಿಕಾರಿ ಚಳುವಳಿಯ ಭಾಗವೆಂದು ನಿರಂತರವಾಗಿ ಹೋಲಿಸಿದರು. ಇತರೆ ದೇಶಗಳಲ್ಲಿ ಸಂಭವಿಸಿದ ಮಹತ್ತರ ಬೆಳವಣಿಗೆಗಳಿಗೆ ಭಾರತದ ಕಾರ್ಮಿಕವರ್ಗವು ಸ್ಪಂದಿಸದಿರುವುದಕ್ಕೂ ಆಗಿಂದ್ದಾಗ್ಗೆ ಬಹಿರಂಗವಾಗಿ ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸುತ್ತಿದ್ದರು.

ಡಾ. ಬಿ.ಟಿ.ಆರ್. ರವರ ಅತ್ಯಂತ ಪ್ರಖರವಾದ ಗುಣವೆಂದರೆ, ಅವರು ಪಕ್ಷದ ಕಾರ್ಯಕರ್ತರಿಗೆ ಯಾವಾಗಲೂ ಲಭ್ಯವಿರುತ್ತಿದ್ದದು. ಬಹಳಷ್ಟು ಕಾರ್ಯಕರ್ತರು ಅವರನ್ನು ಪೂರ್ವಾನುಮತಿಯಿಲ್ಲದೆಯೇ ಭೇಟಿ ಮಾಡಬಹುದಿತ್ತು. ಅವರೇನಾದರೂ ಬರವಣಿಗೆಯ ಕಾರ್ಯವನ್ನು ಮಾಡುತ್ತಿದ್ದಲ್ಲಿ ಸಂದರ್ಶಕರನ್ನು ಕೆಲ ಸಮಯ ಕಾಯಲು ಹೇಳಿ ಅನಂತರ ಅವರನ್ನು ಕಾಣುತ್ತಿದ್ದರಷ್ಟೇ ಅಲ್ಲ, ಸಾಮಾನ್ಯ ಕಾರ್ಯಕರ್ತರನ್ನು ಮಾತನಾಡಲು ಸಮಯವನ್ನು ತೆಗೆದಿಡುತ್ತಿದ್ದರು. ಹಲವಾರು ಟ್ರೇಡ್ ಯೂನಿಯನ್ ಮೀಟಿಂಗ್‌ಗಳಲ್ಲಿ ಅವರು 'ಯಾವ ನಾಯಕರು ಸಾಮಾನ್ಯ ಕಾರ್ಯಕರ್ತರಿಂದ ಕಲಿಯಲು ನಿರಾಕರಿಸುತ್ತಾರೋ ಅವರೆಂದೂ ಒಳ್ಳೆಯ ನಾಯಕರಾಗಲೂ ಸಾಧ್ಯವಿಲ್ಲ' ಎಂದು ಹೇಳುತ್ತಿದ್ದರು. ಅವರು ಟ್ರೇಡ್ ಯೂನಿಯನ್ ನೌಕರ ಶಾಹಿಯನ್ನು ನೇರವಾಗಿ ಖಂಡಿಸುತ್ತಿದ್ದದಲ್ಲದೆ, ಟ್ರೇಡ್ ಯೂನಿಯನ್ ಪ್ರಜಾಪ್ರಭುತ್ವವನ್ನು ಕಾಪಾಡಲು ಅವಿರತ ಹೋರಾಡಿದರು. ಕಾರ್ಮಿಕವರ್ಗದ ಚಳುವಳಿಯು, ಟ್ರೇಡ್ ಯೂನಿಯನ್‌ಗಳು ಸ್ವತಂತ್ರ ಸಮೂಹ ಸಂಘಟನೆಗಳಾಗಿ ಕಾರ್ಯನಿರ್ವಹಿಸದೆ ಮುಂದೆ ಬರಲು ಸಾಧ್ಯವಿಲ್ಲ.

ಕಾಂ. ಬಿಟಿಆರ್‌ರವರು ಸಮಾಜದಲ್ಲಿ ಮಹಿಳೆಯರ ಮೇಲಿನ ಶೋಷಣಾ ನಿಲುವನ್ನು ಪ್ರಾಯಶಃ ಅತ್ಯಂತ ಹೆಚ್ಚಿನ ರೀತಿಯಲ್ಲಿ ಖಂಡಿಸುತ್ತಿದ್ದರು. ಅವರು ಮಹಿಳೆಯರನ್ನು ಪುರುಷರಿಗಿಂತ ಕೆಳದರ್ಜೆಯಲ್ಲಿ ವ್ಯವಹರಿಸುವುದರ ವಿರುದ್ಧ ನಿರಂತರವಾಗಿ ಹೋರಾಡಿದ್ದೇ ಅಲ್ಲದೆ, ಸಾಮಾಜಿಕ ಜೀವನದಲ್ಲಿ ಮಹಿಳೆಗೆ ಸಂಪೂರ್ಣ ಸಮಾನತೆಗಾಗಿ ಒಕ್ಕೊರಲಿನಿಂದ ಪ್ರಚಾರ ಮಾಡಿದರು. ಅವರು ವಿಶೇಷವಾಗಿ ದುಡಿಯುವ ಮಹಿಳೆಯರ ಸಮಸ್ಯೆಗಳನ್ನು ಸಂಘದ ಸಮಸ್ಯೆಯಾಗಿ ಪರಿಗಣಿಸಿ, ಮಹಿಳೆಯರನ್ನು ಟ್ರೇಡ್ ಯೂನಿಯನ್ ಚಳುವಳಿಯ ಮುಂಚೂಣಿ ಸ್ಥಾನಕ್ಕೆ ತಂದರು.

1990 ರ ನಂತರ ಚಳುವಳಿಗೆ ಸೇರಿದ ಹಲವಾರು ಕಾರ್ಯಕರ್ತರು ಕಾಂ. ಬಿ.ಟಿ.ಆರ್. ರ ಖಾಸಗಿ ಜೀವನದ ಮಾಹಿತಿಯನ್ನು ಪ್ರಯೋಜನಕಾರಿಯಾಗಿ ಕಾಣಬಹುದು. ಕಾಂ. ಬಿ.ಟಿ.ಆರ್. ರವರು ಬಿಟ್ಟುಹೋಗಿರುವ ಶ್ರೀಮಂತ ಆಸ್ತಿಯು ದೇಶದಲ್ಲಿ ಚಳುವಳಿಯನ್ನು ಕಟ್ಟಲು ಹೊಸ ಪೀಳಿಗೆಗೆ ಒಂದು ಬೆಲೆ ಕಟ್ಟಲಾಗದ ಆಸ್ತಿ.

ಯುಎಸ್‌ಎಸ್‌ಆರ್ ಮತ್ತು ಪೂರ್ವ ಯುರೋಪ್ ದೇಶಗಳಲ್ಲಿ ಸಮಾಜವಾದವು ಕುಸಿದ ಬಳಿಕ ಸಮಾಜವಾದಿ ತತ್ವವು ದಾಳಿಗೆ ಗುರಿಯಾಗಿರುವ ಈ ದಿನಗಳಲ್ಲಿ ಕಾಂ. ಬಿ.ಟಿ.ಆರ್. ರವರ ಜೀವನಚರಿತ್ರೆಯು ಸಮಾಜವಾದದ ಸಿದ್ಧಾಂತ ಮತ್ತು ಸಮಾಜವಾದದ ಅಂತಿಮ ವಿಜಯದಲ್ಲಿ ಭರವಸೆಯನ್ನು ಮೂಡಿಸುತ್ತದೆ.

○

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಡಿಸೆಂಬರ್ 1-7, 2004**
  ಕರಾವಳಿ ವಿಜ್ಞಾನ ಕಲಾ ಜಾಥಾ, ಕಾರವಾರದಿಂದ ಭಟ್ಕಳದವರೆಗೆ ಉತ್ತರ ಕನ್ನಡ ಜಿಲ್ಲೆ.
- **ಡಿಸೆಂಬರ್ 2, 2004**
  ಸಿಇಟಿ ಕೇಂದ್ರೀಯ ಶಾಸನಕ್ಕೆ ಒತ್ತಾಯಿಸಿ ಎಸ್‌ಎಫ್‌ಐನಿಂದ ಸಂಸತ್ ಚಲೋ
- **ಡಿಸೆಂಬರ್ 6-7, 2004**
  ಡಿವೈಎಫ್‌ಐ ಬೆಳ್ಳಿಹಬ್ಬ ಉದ್ಘಾಟನೆ
- **ಡಿಸೆಂಬರ್ 7, 2004**
  ಮುಷ್ಕರದ ಹಕ್ಕಿಗಾಗಿ ಒತ್ತಾಯಿಸಿ ೨ ಕೋಟಿ ಸಹಿಗಳ ಸಾಮೂಹಿಕ ಮನವಿ ಸಲ್ಲಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರ ಪಾರ್ಲಿಮೆಂಟ್ ಚಲೋ.
- **ಡಿಸೆಂಬರ್ 10, 2004**
  ಮಾನವ ಹಕ್ಕುಗಳ ದಿನ, ಉದ್ಯೋಗ ಖಾತರಿ ಮಸೂದೆ ಜಾರಿಗೆ ಒತ್ತಾಯಿಸಿ ರಾಷ್ಟ್ರೀಯ ಬೇಡಿಕೆ ದಿನ.
  ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ
- **ಡಿಸೆಂಬರ್ 10, 2004**
  ಉದ್ಯೋಗ ಖಾತರಿ ಮಸೂದೆ ಜಾರಿಗೆ ಒತ್ತಾಯಿಸಿ ರಾಜ್ಯಾದ್ಯಂತ ತಾಲ್ಲೂಕು ತಹಶೀಲ್ದಾರ್‌ಕಛೇರಿ ಎದುರು ಸಾಮೂಹಿಕ ಧರಣಿ - ಕೃಷಿಕೂಲಿಕಾರರ ಸಂಘದ ರಾಜ್ಯ ಸಮ್ಮೇಳನ ಕರೆ

ಬೀದಿಗಿಳಿಯುತ್ತಿರುವ ಜನ - ದೆಹಲಿ ಯಾತ್ರೆಗೆ ಮೈತ್ರಿಕೂಟ : ಅಲ್ಲಿಂದ ಎಲ್ಲಿಗೆ ?

ದೇವೇಗೌಡ ಮತ್ತು ಧರಂಸಿಂಗ್‌ರವರು ಪಟ್ಟಿ ಸಿದ್ಧಪಡಿಸಿಕೊಂಡು ದೆಹಲಿಗೆ ಹೋಗಿಬಂದಿದ್ದಾಯ್ತು. ಇದೇ 24 ರಂದು ಸಂಪುಟ ವಿಸ್ತರಣೆ ಖಚಿತವೆಂದು, ಅದು ಕೌತುಕದಿಂದ ಕೂಡಿರುತ್ತದೆಂದೂ ರೋಮಾಂಚಕ ಸುದ್ದಿಗಳು ಪ್ರಕಟವಾದವು. ಆದರೆ ಅಂತಹದ್ದೇನೂ ಸಂಭವಿಸಲಿಲ್ಲ. ಸಂಭವಿಸುವ ಪ್ರಸಂಗಗಳೂ ಕಡಿಮೆ. ಈಗ ಶುಭ ಮುಹೋರ್ತಗಳಿಗೆ ಹುಡುಕಾಟ ನಡೆದಿದ್ದು ಡಿಸೆಂಬರ್‌ನ ಈ ಚಳಿಗಾಲದಲ್ಲಿ ಅಂತಹ ಶುಭಮೂಹೋರ್ತ ಸಿಗುವುದು ದುರ್ಲಭವೆಂಬಂತೆ ಕಾಣುತ್ತದೆ. ಇಲ್ಲಿ ದಿನ ನಿಗದಿಪಡಿಸುವ ಅಸಲಿ ಜೋತಿಷಿಗಳು, ಅವರ ಹಕೀಕತ್ತು ಬೇರೆ! ಜನ ಹಿತಗಳಿಗಿಂತ ಜೇಬುಗಳಿಕೆ ಮತ್ತು ಭಾಗಿದಾರ ಪಕ್ಷಗಳ ತಳ್ಳಾಟಗಳೇ ಮೇಲುಗೈ ಸಾಧಿಸುತ್ತಾ ಬಂದಿರುವುದನ್ನು ಈ ಹಿಂದೆ ವಿವರಿಸಿಯಾಗಿದೆ.



ಧರಂಸಿಂಗ್‌ರವರೇ ನೀವು ಮುಖ್ಯಮಂತ್ರಿಯಾದ ಮೇಲೆ ಎಲ್ಲವೂ ನಿಮ್ಮ ಪರವಾಗಿಯೇ ಇದೆ. ಒಳ್ಳೆಯದಾಗಲಿ' ಹೀಗೆ ಹಾರೈಸಿದವರು ಪ್ರಜಾವಾಣಿಯ ಸಿದ್ದರಾಜು. ಉಭಯ ಕಮ್ಯುನಿಸ್ಟ್ ಪಕ್ಷಗಳೊಂದಿಗೆ ಸರ್ಕಾರದ ಉನ್ನತಾಧಿಕಾರಿಗಳ ಸಭೆ ಬಳಿಕ ಬಾಬಾ ಬುಡನ್‌ಗಿರಿ ಮತ್ತು ಕೋಮುಸೌಹಾರ್ದತೆ ವಿಷಯಗಳ ಚರ್ಚೆ ಬಳಿಕ ಕರೆದ ಮಾಧ್ಯಮಗೋಷ್ಠಿಯ ಬಳಿಕ 'ನಿಮ್ಮ ಕಾಲುಗುಣ ಚೆನ್ನಾಗಿದೆ. ದೇವರು ಒಳ್ಳೆಯದು ಮಾಡಲಿ ಎಂದು ಹಾರೈಸಿದರು ಕೇಂದ್ರದ ಒಬ್ಬ ಮಾಜಿ ಸಚಿವರು. ಇನ್ನೊಂದು ಪ್ರಸಂಗದಲ್ಲಿ ಇಂತಹ ಮಾತುಗಳನ್ನು ಕೇಳಿದ ಧರಂಸಿಂಗ್‌ರವರು ಇನ್ನೂ ಸ್ವಲ್ಪ ಅಗಲವಾದಂತೆ ಕಂಡರು. ಈ ಅಧಿಕಾರಸ್ಥರಿಗೆ ಇಂತಹ ಮಾತುಗಳು ಮುದವಾಗಬಹುದು. ಇಂತಹದ್ದೇ ತಿಳುವಳಿಕೆ - ಮಂಪರನ್ನು ಬಿತ್ತಲು ಮೈತ್ರೀಕೂಟದ ನಾಯಕರು ಸಾರ್ವಜನಿಕವಾಗಿ- ಸಭೆಗಳಲ್ಲಿಯೂ ಮಾತನಾಡಿದ್ದಾರೆ. ಗುಡಿಗುಂಡಾರ- ಗುಹೆಗಳನ್ನು - ಮಠಮಾನ್ಯಗಳನ್ನು ಸುತ್ತಿ ಬಂದದ್ದಾಗಿದೆ. ಜನರ ಸಂಕಟ- ಸಮಸ್ಯೆಗಳನ್ನು ಮೂಲಭೂತವಾಗಿ ಬಗೆಹರಿಸಲಾಗದೆ ಇರುವಾಗ ದುಃಖ ದುಮ್ಮಾನಗಳನ್ನು ಮರೆಮಾಚುವ ಮತ್ತಿನ ಮಾತುಗಳು ಆಳುವವರಿಗೆ ಅಗತ್ಯವಾಗಿರಬಹುದು.

ಈ ವರಸೆಗಳೇನಿದ್ದರೂ ತಮ್ಮ ಸಮಸ್ಯೆಗಳಿಗೆ ಪರಿಹಾರ ನೀಡುವ, ಸ್ಪಂದಿಸುವುದನ್ನೇ ಜನತೆ ಸರ್ಕಾರದಿಂದ ನಿರೀಕ್ಷಿಸುತ್ತಿದ್ದಾರೆ. ಮೊನ್ನೆ 21 ರಂದು ಉತ್ತರ ಕನ್ನಡದ ಹಳಿಯಾಳದಲ್ಲಿ ಬೆಳೆ ವಿಮೆ ಬಿಡುಗಡೆಗೆ ಆಗ್ರಹಿಸಿ ರೈತರು ಮೆರವಣಿಗೆ ಮಾಡುತ್ತಿರುವಾಗ ಅದು ವಿಕೋಪಕ್ಕೆ ತಿರುಗಿ ಗಲಭೆಯಾಗಿದೆ. ಗಲಭೆ ಮಾಡಿದವರು ದುಷ್ಕರ್ಮಿಗಳು ಎಂದು ಶಾಸಕ ದೇಶಪಾಂಡೆ ಕೈತೊಳೆದುಕೊಳ್ಳಲು ಯತ್ನಿಸಿದರು. ಈ ಘಟನೆ ಹಿಂದೆ ಮುಂದೆ ಏನಾದರೂ ಇರಬಹುದು. ಅದಕ್ಕಿಂತ ಮುಖ್ಯವಾಗಿ ನಾಲ್ಕು ಸಾವಿರಕ್ಕೂ ಅಧಿಕವಾಗಿ ರೈತರು ಯಾಕೆ ಬೀದಿಗಿಳಿದಿದ್ದಾರೆ ಎಂಬುದೇ ಪ್ರಶ್ನೆ. ಈ ಸಮಸ್ಯೆ ಆಧಾರದಲ್ಲೇ ತಿಂಗಳುಗಟ್ಟಲೆ ಸತತ ಚಳುವಳಿ ನಡೆದೇ ಇತ್ತು ಎಂಬುದನ್ನು ಗಮನಿಸಬೇಕು. ಇಂತಹುದೇ ಬೆಳೆ ವಿಮೆ ಬಿಡುಗಡೆಗಾಗಿ ರಾಜ್ಯದ ಹಲವಾರು ಕಡೆ ಚಳುವಳಿ ನಡೆದಿವೆ. ಪರಿಸ್ಥಿತಿ ವಿಕೋಪಕ್ಕೆ ತಿರುಗುವ ಮೊದಲೇ ಸಣ್ಣ ಕೇಳಿಕೆ ಧ್ವನಿ ಎದ್ದಾಗಲಾದರೂ ಎಚ್ಚೆತ್ತು ಪರಿಹಾರಕ್ಕೆ ಮುಂದಾಗಬಾರದೆ? ಈ ಸ್ಥಿತಿ ಕೇವಲ ವಿಮೆಗೆ ಮಾತ್ರವಲ್ಲ. ಇದೇ ಸೆಪ್ಟೆಂಬರ್ 2 ರಂದು ರಾಜ್ಯದ ಕಾರ್ಮಿಕವರ್ಗ ವಿವಿಧ ಜ್ವಲಂತ ಪ್ರಶ್ನೆಗಳಿಗಾಗಿ ಬೃಹತ್ ವಿಧಾನಸೌಧ ಚಲೋ ನಡೆಸಿತು. ನಂತರ ರೈತರ, ಕೂಲಿಕಾರರ ಚಲೋ, ಕಾರ್ಮಿಕ ಹೋರಾಟಗಳು, ವಿದ್ಯಾರ್ಥಿ-ಯುವಜನ- ಚಳುವಳಿ.. ಈ ವಿಭಾಗಗಳ ಪ್ರಶ್ನೆಗಳ ಇತ್ಯರ್ಥಕ್ಕೆ ತೀವ್ರ ಕ್ರಮ ಅಗತ್ಯವಿದೆ. ಆದರೆ ಸರ್ಕಾರದ ಪ್ರತಿಕ್ರಿಯೆ ಅಷ್ಟೊಂದು ಸ್ವಾಗತಾರ್ಹವಲ್ಲ.

ಹೀಗೆ ರೇಷನ್ ಕಾರ್ಡ್ ಹಾಗೂ ರೇಷನ್‌ಗಾಗಿ, ವಸತಿಗಾಗಿ, ಬೆಳೆದ ಫಸಲಿಗೆ ದರ ನಿಗದಿಯಾಗಿಸಲು(ತೊಗರಿ ಇತ್ಯಾದಿ) ಕಾರ್ಮಿಕರ ಹೋರಾಟಗಳನ್ನು ದಮನಿಸಲು ಪೊಲೀಸರ ಬಳಕೆ ವಿರುದ್ಧ, ನೀರಾವರಿ, ವಿದ್ಯುತ್ ಹೀಗೆ ಹತ್ತಾರು ಪ್ರಶ್ನೆಗಳಿಗೆ ಹೋರಾಟ ನಡೆದಿದೆ. ಇಂತಹ ಜನವಿಭಾಗಗಳ ಪ್ರಶ್ನೆಗಳನ್ನು ಇತ್ಯರ್ಥಪಡಿಸಲು ಜಿಲ್ಲೆಗಳಲ್ಲಿನ ಆಡಳಿತ ಚುರುಕಿನಿಂದ ಕಾರ್ಯನಿರ್ವಹಿಸಲು ವಿಫಲವಾದರೆ ಈ ಮೈತ್ರಿಕೂಟ ಸರ್ಕಾರದ ವಿರುದ್ಧವೇ ಜನರ ಅತೃಪ್ತಿ ತಿರಗಬಹುದು. ಇದನ್ನು ಬಿಜೆಪಿ ಬಳಸಲು ಯತ್ನಿಸುತ್ತಿದೆ. ಆದ್ದರಿಂದ ಈ ಮೈತ್ರಿಕೂಟ ಇನ್ನಾದರೂ ಪೂರ್ಣ ಪ್ರಮಾಣದಲ್ಲಿ ಆಡಳಿತ ನಡೆಸಲು ಮುಂದಾಗುವುದೇ?

ಈವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ವಿದ್ಯುತ್ ಕಡಿತ : ಕೃಷಿ ಉಳಿಸಲು ಗಂಭೀರ ಕ್ರಮ ಅಗತ್ಯ

ವಿದ್ಯುತ್ ಅಭಾವದ ಕಾರಣದಿಂದ ಇನ್ನು ಮುಂದೆ ವಿದ್ಯುತ್ ಕಡಿತವು ಅನಿವಾರ್ಯವೆಂದು ಸರ್ಕಾರ ಗ್ರಾಮೀಣ ಜನತೆಗೆ ಪೂರೈಸುತ್ತಿದ್ದ ವಿದ್ಯುತ್ ಪೂರೈಕೆಯನ್ನು ಕಡಿತಗೊಳಿಸಲು ನಿರ್ಧರಿಸಿದೆ. ಇದು ಪಂಪ್‌ಸೆಟ್ ಆಧಾರಿತ ರೈತರಲ್ಲಿ ಆತಂಕ ಮೂಡಿಸಿದೆ. ಕಳೆದ ಮೂರು ವರ್ಷಗಳಿಂದ ಸತತ ಬರಗಾಲ, ಸಾಲಗಳಿಂದ ಭಾದಿತರಾದ ರೈತರು ಈ ವರ್ಷವಾದರೂ ಮಳೆ ಉತ್ತಮವಾದ್ದರಿಂದ ಸ್ವಲ್ಪ ಚೇತರಿಸಿಕೊಳ್ಳಬಹುದು ಎಂದೇ ಭಾವಿಸಿದ್ದವರಿಗೆ ಕೈಗೆ ಬಂದದ್ದು ಬಾಯಿಗೆ ಬರದೆ ಹೋಗಿದ್ದು ಚಿಂತೆಯಲ್ಲಿ ಮುಳುಗಿದ್ದಾರೆ.

ವಿದ್ಯುತ್ ಉತ್ಪಾದನೆ ಲಭ್ಯತೆಗೆ ಮಿತಿಗಳಿವೆ ಎಂಬುದು ಇರಬಹುದು. ಆದರೆ ಈ ಸಮಸ್ಯೆ ಎದುರಿಸುವುದು ಹೇಗೆ ಎಂಬ ಬಗ್ಗೆ ಈ ವಿಭಾಗದ ಪ್ರತಿನಿಧಿಗಳೊಂದಿಗೆ ಪರಸ್ಪರ ಸಮಾಲೋಚನೆ - ಪರಿಹಾರ ಕಂಡುಕೊಳ್ಳುವುದು ಅಗತ್ಯವಿದೆ.

ಇಲ್ಲಿ ವಿದ್ಯುತ್ತಿನ ಕೊರತೆಗೆ ಮುಖ್ಯಕಾರಣ ರಾಜ್ಯದ ಬೇಡಿಕೆಗನುಗುಣವಾಗಿ ವಿದ್ಯುತ್ ಲಭ್ಯತೆ - ಉತ್ಪಾದನೆ ಇಲ್ಲದಿರುವುದು. ರಾಜ್ಯದಲ್ಲಿ ಜಲ ವಿದ್ಯುತ್ ಉತ್ಪಾದನೆಗೆ ಇರುವ ಅವಕಾಶ-ಸಂಪನ್ಮೂಲಗಳಲ್ಲಿ ಇನ್ನು ಶೇ 40 ರಷ್ಟನ್ನು ಬಳಸಿಲ್ಲ. ಅದರತ್ತ ಗಮನ ಅಗತ್ಯವಿದೆ. ಮುಖ್ಯವಾಗಿ ಸರ್ಕಾರ ಬೇಡಿಕೆ-ಕೊರತೆ ಹಾಗೂ ಉತ್ಪಾದನೆಗಾಗಿ ವಿದ್ಯುತ್ ಕ್ಷೇತ್ರದಲ್ಲಿ ಹಣ ಹೂಡಿಕೆ ಮಾಡುವುದನ್ನು ಕೈಬಿಟ್ಟಿದೆ. ಪ್ರತಿ ವರುಷವೂ ಹಂತಹಂತವಾಗಿ ಹಣಕಾಸಿನ ಕಡಿತ ಮಾಡುತ್ತಲೆ ಬಂದಿದೆ. ಅಂದರೆ ಖಾಸಗಿ ಬಂಡವಾಳ ಹೂಡಿಕೆ ಆಕರ್ಷಿಸಿ - ಈ ಕ್ಷೇತ್ರವನ್ನು ಅವರಿಗೊಪ್ಪಿಸಬೇಕೆಂಬ ನಿರ್ಧಾರವೇ ಇಂದಿನ ಕೊರತೆ - ಪರಿಸ್ಥಿತಿಗೆ ಕಾರಣ. ಈ ಹೊಣೆಯನ್ನು ಸರ್ಕಾರವೇ ಹೊರಬೇಕು.

ಹಿಂದಿನ ಸರ್ಕಾರದಂತೆ ಈ ಸರ್ಕಾರವೂ



ಕೇಂದ್ರದ ನೀತಿಯಂತೆ ವಿದ್ಯುತ್ ಕ್ಷೇತ್ರವನ್ನು ಖಾಸಗಿಯವರಿಗೆ ಒಪ್ಪಿಸುವ ಉದಾರೀಕರಣವನ್ನು ಬಿಡಬೇಕು. ವಿಶ್ವಬ್ಯಾಂಕ್‌ನ ಬಹುರಾಷ್ಟ್ರೀಯ ಕಂಪನಿಗಳನ್ನು ಎದುರಿಸುವ ಧೈರ್ಯ ಈ ಸರ್ಕಾರ ತೋರಿತೆ? ವಿದ್ಯುತ್ ಕಡಿತದಿಂದ ಅಂತರ್‌ಜಲ ಮಟ್ಟ ಹೆಚ್ಚುವುದು, ಪರಿಸರ ಸಮತೋಲನ ಕಾಯುವುದು ಎಂಬಂತಹ ಉಡಾಫೆ ಮಾತುಗಳನ್ನು ಆಡುವುದನ್ನು ಕೃಷಿ ಸಚಿವ ಶ್ರೀನಿವಾಸ ಗೌಡರು ಇನ್ನಾದರೂ ಬಿಡಬೇಕು. ಸರ್ಕಾರ ಈ ಪ್ರಶ್ನೆ ಬಗ್ಗೆ ಗಂಭೀರವಾಗಿ ಚಿಂತಿಸಿ, ಸಮಾಲೋಚಿಸಿ ಪರಿಹಾರ ರೂಪಿಸಿ ಭಾದಿತ ರೈತರನ್ನು ಉಳಿಸಬೇಕು.

ಸ್ವಾಮಿಗಳ ಅಸಲಿ-ನಕಲಿ ಸಭೆ

ಶಂಕರರಾಮನ್ ಕೊಲೆಯ ಆರೋಪಿ ಕಂಚಿ ಪೀಠದ ಜಯೇಂದ್ರ ಸ್ವಾಮಿ ಮೊಕದ್ದಮೆನ್ನು ಖಂಡಿಸಿ, ಖುಲಾಸೆ ಮಾಡುವಂತೆ ಆಗ್ರಹಿಸಿ ಬೆಂಗಳೂರಿನಲ್ಲಿ 'ದಕ್ಷಿಣ ಭಾರತದ ಮಠಾಧೀಶರ' ಸಭೆಯೊಂದು ಈಚೆಗೆ ನಡೆಯಿತು. 'ಜೀವನದ ಕಲೆ' ಕರತಾಲಮಲಕವಾಗಿಸಿಕೊಂಡಿರುವ ರವಿಶಂಕರ್ ಸ್ವಾಮಿ ಇದರ ವ್ಯವಸ್ಥಾಪಕರು. ರವಿಶಂಕರ್ ಎಷ್ಟೇಯಾಗಲಿ ಇದು ಮಠಾಧೀಶರ ಮನದಿಂದ ಬಂದ ನೋವಿನ ಬೇಡಿಕೆ ಎಂಬಂತೆ ತೋರಿಸಲೆತ್ನಿಸಿದರೂ ಇದು ಆರ್.ಎಸ್.ಎಸ್.ನ ಸೂಚಿತ ಅಜೆಂಡಾದ ವರಸೆ ಎಂಬುದನ್ನು ಅವರೂ ಅಲ್ಲಗಳೆಯಲಿಕ್ಕಿಲ್ಲ. ಉಡುಪಿ ಪೇಜಾವರರೂ ಸಹ

ಸಭೆಯೂ ಆಯಿತು, ಹೇಳಿಕೆಯೂ ಹೊರಟಿತು. ಆದರೆ ಇದರಲ್ಲಿ ಹಾಜರಾದವರು ಕೇವಲ ಕೆಲವೇ ಸ್ವಾಮಿಗಳು. ಪೇಜಾವರರು, ಆದಿಚುಂಚನಗಿರಿ,ತರಳಬಾಳು ಬಹುತೇಕ ಕರ್ನಾಟಕದವರೇ. ಅವರೂ ಕಡಿಮೆಯೇ. ಅಲ್ಲಿ ಹಿಂದೂ ಧರ್ಮದ ರಕ್ಷಣೆಯ ಬಗ್ಗೆ ಮಾತನಾಡಿದರೂ ಈ ಕೊಲೆ ಕೇಸಿಗೂ - ಅದಕ್ಕೂ ಎಂತಹ ಸಂಬಂಧವಿದೆ ಎಂದು ತೋರಿಸಲು, ಜನರಿಗೆ ಮನವರಿಕೆ ಮಾಡಲು ಸಾಧ್ಯವಾಗಲಿಲ್ಲ. ಇದು ಸಹ ವಿಶ್ವಹಿಂದೂ ಪರಿಷತ್ - ಬಿಜೆಪಿಯವರ ಭಾರತ ಬಂದ್‌ನಂತೆ ಪೂರ್ಣವಾಗಿ ವಿಫಲವಾಯಿತು. ದೇಶದ-ನಮ್ಮ ರಾಜ್ಯದ ಜನ ಇವರು ಹೇಳಿದ್ದಕ್ಕೆಲ್ಲಾ ಹೂಂಗುಟ್ಟುವುದಿಲ್ಲ ಎಂಬುದನ್ನು ಸ್ಪಷ್ಟವಾಗಿ ತೋರಿಸಿದ್ದಾರೆ. ಎಲ್ಲಾ ಕಾಲಕ್ಕೂ ಎಲ್ಲರನ್ನೂ ವಂಚಿಸಲು ಸಾಧ್ಯವಿಲ್ಲ ಅಲ್ಲವೇ? ಈ ಸಭೆ ಬಳಿಕ ಈ ಸ್ವಾಮೀಜಿಗಳ ಪೂರ್ವಾಪರಗಳ ಬಗ್ಗೆ ಯೋಜಿಸುತ್ತಿದ್ದಾರೆ ಎಂಬುದು ಸುಳ್ಳು ಸುದ್ದಿ ಇರಲಿಕ್ಕಿಲ್ಲವೇನೋ? ಈ ಸ್ವಾಮೀಜಿಗಳೂ ಕಾನೂನಿಗಿಂತ ಅತೀತರು ಎಂಬುದನ್ನು ಹೆಣಗಿದ ಈ ಸಭೆ ಗೊಣಗಾಟದಲ್ಲಿ ಮುಗಿದಿದೆ.



ಸಿಪಿಐ(ಎಂ) ಅಖಿಲ ಭಾರತ ಅಧಿವೇಶನ

ಸ್ವಾಗತ ಸಮಿತಿ ರಚನೆ

2005 ರ ಏಪ್ರಿಲ್ 6 ರಿಂದ 11 ರವರೆಗೆ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 18 ನೇ ಅಖಿಲ ಭಾರತ ಅಧಿವೇಶನವು ನವದೆಹಲಿಯಲ್ಲಿ ಜರುಗಲಿದ್ದು, ಇದಕ್ಕಾಗಿ 100 ಜನರ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಾದ ಜೋಗಿಂದರ್ ಶರ್ಮ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದು, ದೆಹಲಿ ರಾಜ್ಯ ಸಮಿತಿ ಕಾರ್ಯದರ್ಶಿ ಪುಷ್ಪೇಂದ್ರ ಗ್ರೆವಾಲ್ ಸ್ವಾಗತ ಸಮಿತಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲಿದ್ದಾರೆ. ಉಪಾಧ್ಯಕ್ಷರಾಗಿ ಕೇಂದ್ರ ಸಮಿತಿ ಸದಸ್ಯೆ ಬೃಂದಾಕಾರಟ್, ಖಜಾಂಚಿಯಾಗಿ ಮಹಿಂದರ್ ಸಿಂಗ್ ಅವರು ಸಮಿತಿಯಲ್ಲಿದ್ದಾರೆ.

ದೆಹಲಿ ರಾಜ್ಯ ಸಮಿತಿಯ ಸದಸ್ಯರು ಹಾಗೂ ಸಾಮೂಹಿಕ ಸಂಘಟನೆಗಳ ಮುಖಂಡರಲ್ಲದೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಗಣ್ಯರೂ ಸ್ವಾಗತ ಸಮಿತಿಯಲ್ಲಿದ್ದಾರೆ. ಅವರಲ್ಲಿ ಪತ್ರಕರ್ತರಾದ ಪ್ರಕಾಶ್ ಜೋಶಿ, ಗೀತಾ ಹರಿಹರನ್, ಅಸ್ಗರ್ ವಜಾಹತ್, ವಿವಾನ್ ಸುಂದರಂ, ಡಾ. ಎಂ.ಎಂ.ಎ.ಫರಿದಿ, ಮನಮನೋಹನ ಸಿಂಗ್ ಬಾಬಾ, ಅಶೋಕ ಶ್ರೀಧರ್, ಶುಬಾ ಮುದ್ಗಲ್, ಮದೂಲದ್ ಪ್ರಮುಖರಿದ್ದಾರೆ.

ಸಿಪಿಐ(ಎಂ) ನ ಪ್ರಧಾನ ಕಾರ್ಯದರ್ಶಿ ಹರ್‌ಕಿಷನ್ ಸಿಂಗ್ ಸುರ್ಜಿತ್, ಪಾಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್ ಮತ್ತು ಎಸ್.ರಾಮಚಂದ್ರನ್ ಪಿಳ್ಳೆ ಸಭೆಯಲ್ಲಿ ಉಪಸ್ಥಿತರಿದ್ದರು.

ಅಧಿವೇಶನವು ನವದೆಹಲಿಯ ತಲ್ಕತೋರಾ ಸ್ಟೇಡಿಯಂನಲ್ಲಿ ನಡೆಯಲಿದೆ.

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ವಿರೋಧಿಸಿ

ಕೇಂದ್ರ ಕಾರ್ಮಿಕ ಸಂಘಟನೆಗಳಿಂದ ರಾಜ್ಯಾದ್ಯಂತ ಪ್ರತಿಭಟನಾ ಧರಣಿ

ಕೇಂದ್ರ ಕಾರ್ಮಿಕ ಸಂಘಟನೆಗಳು ಹಾಗೂ ಅಖಿಲ ಭಾರತ ನೌಕರರ ಒಕ್ಕೂಟಗಳು ನವೆಂಬರ್ 9 ರಂದು ನವದೆಹಲಿಯಲ್ಲಿ ಸಭೇ ಸೇರಿ ಕೇಂದ್ರ ಸರ್ಕಾರವು ಡೀಸೆಲ್, ಪೆಟ್ರೋಲ್, ಅಡುಗೆ ಅನಿಲಗಳ ಬೆಲೆಗಳನ್ನು ತೀವ್ರವಾಗಿ ಏರಿಕೆ ಮಾಡಿರುವುದನ್ನು ಕೂಡಲೇ ಹಿಂತೆಗೆದುಕೊಳ್ಳಲು ಒತ್ತಾಯಿಸಿ ನವೆಂಬರ್ 24 ರಂದು ದೇಶಾದ್ಯಂತ ಪ್ರತಿಭಟನೆ ನಡೆಸಲು ಕರೆ ನೀಡಿದ್ದವು.

ಈ ಹಿನ್ನೆಲೆಯಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳು,ಇನ್ಸೂರೆನ್ಸ್, ಬ್ಯಾಂಕ್, ರಾಜ್ಯ ಸರ್ಕಾರಿ ನೌಕರರ ಸಂಘಟನೆಗಳು, ಕೇಂದ್ರ ಸರ್ಕಾರಿ ನೌಕರರ ಸಂಘಟನೆಗಳು ರಾಜ್ಯಾದ್ಯಂತ ನವೆಂಬರ್ 24 ರಂದು ಪ್ರತಿಭಟನೆ ನಡೆಸಿದವು.

ಬೆಂಗಳೂರು : ಬೆಂಗಳೂರಿನಲ್ಲಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ವತಿಯಿಂದ ಟೌನ್‌ಹಾಲ್ ಮುಂದೆ ಪ್ರತಿಭಟನೆಯನ್ನು ನಡೆಸಲಾಯಿತು. ಈ ಪ್ರತಿಭಟನೆಯಲ್ಲಿ ಸಿಐಟಿಯು ಮುಖಂಡರಾದ ವಿ.ಜೆ.ಕೆ.ನಾಯರ್‌ರವರು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ತೈಲದ ಮೇಲೆ ಹೆಚ್ಚು ಸುಂಕವನ್ನು ಹೇರುತ್ತಿದ್ದಾರೆ. ಹೊರಗಡೆಯಿಂದ ಬರುವ ತೈಲದಿಂದ ಹೆಚ್ಚು ಲಾಭಕಂಪನಿಗಳಿಗೆ ಹೋಗುತ್ತದೆ. ಜನರನ್ನು ಲೂಟಿ ಮಾಡುತ್ತಿದ್ದಾರೆ. ಸರ್ಕಾರವು ಆಮದು ಸುಂಕದ ಕಡಿದ ಹಾಗೂ ಅಬಕಾರಿ ಸುಂಕಗಳ ಹೊಂದಾಣಿಕೆಗಳಿಂದ ಮತ್ತು ಸಾರ್ವಜನಿಕ ಕ್ಷೇತ್ರದ ಕಂಪನಿಗಳು ಹಾಗೂ ಖಾಸಗಿ ಕಂಪನಿಗಳು ಲಾಭಾಂಶದಲ್ಲಿ ಹೊಂದಾಣಿಕೆ ಮಾಡಿ ಬೆಲೆ ಏರಿಕೆಯನ್ನು ನಿಯಂತ್ರಿಸಬೇಕು. ಅಡುಗೆ ಅನಿಲದ ಬೆಲೆಯನ್ನು ಏರಿಸುತ್ತಾ ಹೋಗಿ ಅದು ಖಾಸಗಿ ಅನಿಲಗಳ ಬೆಲೆಗೆ ಸಮನಾಗಿ ಬಂದು ನಿಲ್ಲುತ್ತಿದೆ. ಅವಾಗ ಸಬ್ಸಿಡಿ ಸಂಪೂರ್ಣ ನಿಂತುಹೋಗುತ್ತದೆ. ಖಾಸಗಿ ಅನಿಲ ಕಂಪನಿಗಳಿಗೆ ಹೆಚ್ಚು ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಇದರ ವಿರುದ್ಧ ಪ್ರಬಲ ಹೋರಾಟ ಅನಿವಾರ್ಯ ಎಂದರು.

ಎಐಟಿಯುಸಿನಿಂದ ದೀಪಕ್, ಹೆಚ್‌ಎಂಎಸ್‌ನಿಂದ ಎ.ಶ್ರೀನಿವಾಸಮೂರ್ತಿ, ಟಿಯುಸಿಸಿಯಿಂದ ಜೆ.ಆರ್.ಶಿವಶಂಕರ್, ಹೆಚ್.ಎಂ.ಕೆ.ಪಿ.ಯಿಂದ ಮೈಕೆಲ್ ಫರ್ನಾಂಡೀಸ್, ಟಿಯುಸಿಸಿ(ಎಲ್‌ಎಸ್)ನಿಂದ ಎಂ.ಎಸ್.ಪ್ರಕಾಶ್, ವಿಮಾ ನೌಕರರ ಸಂಘಟನೆಯಿಂದ ಗೀತಾ, ಬ್ಯಾಂಕ್ ಸಂಘಟನೆಯಿಂದ ವಸಂತ ರೈ, ಕೇಂದ್ರ ಸರ್ಕಾರಿ ನೌಕರರ ಸಂಘಟನೆಯಿಂದ ಪ್ರಸಾದ್ ಮಾತನಾಡಿದರು.

ಉತ್ತರ ಕನ್ನಡ: ಉತ್ತರ ಕನ್ನಡ ಜಿಲ್ಲೆಯಲ್ಲಿ ಮೂರು ಕಡೆ ಪ್ರತಿಭಟನೆ ನಡೆಯಿತು. ಹೊನ್ನಾವರದಲ್ಲಿ ಪ್ರತಿಭಟನಾಕಾರನ್ನು ಉದ್ದೇಶಿಸಿ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ತಿಲಕ್ ಚಟ್ಟಿಗೌಡ ಹಾಗೂ ಅಂಗನವಾಡಿ ನೌಕರರ ಜಿಲ್ಲಾ ಕಾರ್ಯದರ್ಶಿ ಯಮುನಾ ಗಾಂವ್ಕರ್ ಮಾತನಾಡಿದರು. ದಾಂಡೇಲಿಯಲ್ಲಿ ಟಿ.ಎಸ್.ನಾಯಕ್ ಮತ್ತು ಎಸ್.ವಿ.ಸಾವಂತ್, ಹೆಚ್.ಬಿ.ನಾಯಕ್ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.



ಭಟ್ಕಳದಲ್ಲಿ ಸುಭಾಷ ಕೊಪ್ಪಿಕರ್ ನೇತೃತ್ವದಲ್ಲಿ ಪ್ರತಿಭಟನೆ ನಡೆದು ತಹಶೀಲ್ದಾರರಿಗೆ ಮನವಿ ಅರ್ಪಿಸಲಾಯಿತು. ಪ್ರತಿಭಟನೆಯಲ್ಲಿ ಸಿಐಟಿಯು, ಬ್ಯಾಂಕ್,ಇನ್ಸೂರೆನ್ಸ್ ಕಾರ್ಯಕರ್ತರು ಭಾಗವಹಿಸಿದ್ದರು.

ತುಮಕೂರಿನಲ್ಲಿ ಜಿಲ್ಲಾಧಿಕಾರಿ ಕಛೇರಿ ಎದುರು ಸಿಐಟಿಯು, ಎಐಟಿಯುಸಿ ಮತ್ತು ಎಐಐಇಎ ಕಾರ್ಯಕರ್ತರು ಪ್ರತಿಭಟನೆಯನ್ನು ನಡೆಸಿದರು.

ಬೆಳಗಾಂ ನಲ್ಲಿ ಎಲ್‌ಐಸಿ, ಬ್ಯಾಂಕ್ ನೌಕರರು ತಮ್ಮ ಕಛೇರಿಯ ಮುಂದೆ ಪ್ರತಿಭಟನೆಯನ್ನು ನಡೆಸಿದರು.

ಮೈಸೂರು : ಸುಮಾರು 500 ಜನರು ಟೌನ್‌ಹಾಲ್‌ನಿಂದ ಕೆ.ಆರ್.ಸರ್ಕಲ್‌ವರೆ ಪ್ರತಿಭಟನೆ ನಡೆಸಿ ಬಹಿರಂಗ ಸಭೆಯನ ನಡೆಸಿದರು. ಬ್ಯಾಂಕ್, ಇನ್ಸೂರೆನ್ಸ್, ಅಂಗನವಾ ಸಿಐಟಿಯು ಕಾರ್ಯಕರ್ತರು ಪ್ರತಿಭಟನೆಯ ಪಾಲ್ಗೊಂಡಿದ್ದರು.

ಗುಲ್ಬರ್ಗಾ: ಬೆಳಿಗ್ಗೆ 12 ಗಂಟೆಗೆ ವಾಜೇಂ ಕುಲಕರ್ಣಿಯವರ ನೇತೃತ್ವದಲ್ಲಿ ಪ್ರತಿಭಟ ನಡೆಸಲಾಯಿತು. ಇದರಲ್ಲಿ ಗ್ರಾಮ ಪಂಚಾಯತ ನೌಕರರು, ಬಿಸಿ ಊಟ ಕೆಲಸಗಾರರು, ಔಷ ಪ್ರತಿನಿಧಿ ಮಾರಾಟಗಾರರ ಸಂಘದ ಕಾರ್ಮಿಕರು ರಾಜಶ್ರೀ ಸಿಮೆಂಟ್ ಕಾರ್ಮಿಕ ಸಂಘ ಕಾರ್ಮಿಕರು ಭಾಗವಹಿಸಿದ್ದರು. ಪ್ರತಿಭಟ ಯನ್ನುದ್ದೇಶಿಸಿ ಸಿಐಟಿಯು ರಾ ಸಹಕಾರ್ಯದರ್ಶಿ ಎಂ.ಬಿ.ನಾಡಗೌಡ, ಸಿಐಟಿಯ ರಾಜ್ಯಸಮಿತಿ ಸದಸ್ಯ ಹಾಗೂ ಜಿಲ ಸಂಚಾಲಕರಾದ ವಾಜೇಂದ್ರ ಕುಲಕರ್ಣಿ, ಗ್ರಾ ಪಂಚಾಯತಿ ನೌಕರರ ಮುಖಂಡರಾದ ಮಂಜೂ ಪಟೇಲ್, ಜಿಲ್ಲಾ ಮುಖಂಡರಾದ ಬಸವರಾ ಹೂಗಾರ ಮಾತನಾಡಿದರು.

ಪ್ರತ್ಯೇಕ ರಾಜ್ಯದ ವಿರುದ್ಧ ಡಿವೈಎಫ್‌ಐನ ಪ್ರತಿಭಟನೆ

ಇತ್ತೀಚಿಗೆ ಉತ್ತರ ಕರ್ನಾಟದ ಅಭಿವೃದ್ಧಿ ಆಗಿಲ್ಲ ಎನ್ನುವ ಕಾರಣ ಕೊಟ್ಟು ಪ್ರತ್ಯೇಕ ರಾಜ್ಯ ಮಾಡಬೇಕೆನ್ನುವ ಬೇಡಿಕೆಗಾಗಿ ಕೆಲವು ಹಿತಾಸಕ್ತಿಗಳು ಪ್ರತಿಭಟನೆಗೆ ತೊಡಗಿದ್ದವು. ರಾಜ್ಯೋತ್ಸವದ ದಿನದಂದು ಪ್ರತ್ಯೇಕ ಧ್ವಜ ಹಾರಿಸುವವರೆಗೂ ಮುಂದುವರಿದಿದ್ದಾರೆ. ನಿಜವಾದ ಅಭಿವೃದ್ಧಿಯ ಬೇಡಿಕೆಗಾಗಿ ನಡೆಯುತ್ತಿರುವ ಹೋರಾಟವನ್ನು ದಿಕ್ಕು ತಪ್ಪಿಸುವ, ರಾಜಕೀಯ ಉದ್ದೇಶಿತ ಈ ಪ್ರತ್ಯೇಕ ರಾಜ್ಯ ಹೋರಾಟವನ್ನು ವಿರೋಧಿಸಿ ರಾಯಚೂರಿನಲ್ಲಿ ಡಿವೈಎಫ್‌ಐ ಹೋರಾಟ ನಡೆಸುವ ಮೂಲಕ ಜನಸಮುದಾಯದ ಧ್ವನಿಯನ್ನು ಮೊಳಗಿಸಿದೆ.

ಹಾಗಾಗಿ ಹೈದ್ರಾಬಾದ್ ಕರ್ನಾಟಕ ಹಾಗೂ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯ ಬೇಡಿಕೆ ವಿರೋಧಿಸಿ ಹಾಗೂ ಹಿಂದುಳಿದ ಹೈ.ಕ. ಪ್ರದೇಶಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸುವ ಸಂವಿಧಾನದ 371 ನೇ ಪರಿಚ್ಛೇದ ತಿದ್ದುಪಡಿಗೆ ಆಗ್ರಹಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ ಕಾರ್ಯಕರ್ತರು ನಗರದ ಚಂದ್ರಮೌಳೀಶ್ವರ ವೃತ್ತದ ಬಳಿ ಮಾನವ ಸರಪಳಿ ನಿರ್ಮಿಸಿ ಪ್ರತಿಭಟನೆ ನಡೆಸಿದರು.

ಅಭಿವೃದ್ಧಿ ಹಿನ್ನಡೆಯ ನೆಪವೊಡ್ಡಿ ಕೆಲವರು ಎಬ್ಬಿಸಿರುವ ಪ್ರತ್ಯೇಕ ರಾಜ್ಯದ ಕೂಗಿನ ವಿರುದ್ಧ ತೀವ್ರ ವಿರೋಧ ವ್ಯಕ್ತಪಡಿಸಿದ ಸಂಘಟನೆ ಈ ವಿಚಾರವನ್ನು ಮುಂದಿಟ್ಟುಕೊಂಡು ವೃತ್ತದ ಬಳಿ ಕೆಲಕಾಲ ಪ್ರತಿಭಟನಾ ಧರಣಿಯನ್ನೂ ಸಹ ನಡೆಸಿ ಪ್ರತ್ಯೇಕತೆ ಕೂಗು ಎಬ್ಬಿಸಿದವರ ವಿರುದ್ಧ ಘೋಷಣೆಗಳನ್ನು ಹಾಕಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಸಂಘಟನೆ ಜಿಲ್ಲಾ ಕಾರ್ಯದರ್ಶಿ ಡಿ.ಎಸ್.ಶರಣಬಸವ ಅವರು, ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಕೆಲ ಹತಾಶ ರಾಜಕಾರಣಿಗಳು ಮುಂದಿಟ್ಟಿದ್ದು, ಇವರಿಗೆ ಈ ಭಾಗದ ಅಭಿವೃದ್ಧಿಗಿಂತ ತಮ್ಮ ಪ್ರಚಾರ ಹಾಗೂ ರಾಜಕೀಯ ಲಾಭವೇ ಮುಖ್ಯವಾಗಿದೆ ಎಂದು ದೂರಿದರು.

ಇಂತಹ ಪ್ರತ್ಯೇಕತಾವಾದಿಗಳ ಕೂಗನ್ನು ನಿರ್ಲಕ್ಷಿಸಿ ಹಿಂದುಳಿದ ಹಣೆಪಟ್ಟಿಯನ್ನು ಅಳಿಸಿ ಹಾಕುವ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ವಿರುದ್ಧ ನಡೆಯುವ ಹೋರಾಟಗಳನ್ನು ಬೆಂಬಲಿಸುವಂತೆ ಅವರು ಜನತೆಗೆ ಕರೆ ನೀಡಿದರು.

ಈ ಪ್ರದೇಶದ ಹಿಂದುಳಿಕೆಗೆ ಇದುವರೆಗೆ ಇಲ್ಲಿ ಚುನಾಯಿತರಾದ ಜನಪ್ರತಿನಿಧಿಗಳ ನಿರ್ಲಕ್ಷವೇ ಕಾರಣವಾಗಿದೆ ಎಂದು ಆರೋಪಿಸಿದ ಅವರು, ಅಸಮಾನತೆ ನಿವಾರಣೆಗೆ ರಾಜ್ಯ ಸರ್ಕಾರ ಆದ್ಯತೆಯ ಕ್ರಮಗಳನ್ನು ಈ ಭಾಗದಲ್ಲಿ ಹಮ್ಮಿಕೊಳ್ಳುವಂತೆ ಆಗ್ರಹಿಸಿದರು.

ಹೋರಾಟ ಬೆಂಬಲಿಸಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಗ್ರಾ.ಪಂ ನೌಕರರ ಸಂಘದ ಜಿಲ್ಲಾ ಘಟಕದ ಪ್ರಮುಖರಾದ ಜಿ.ಎಸ್.ಚನ್ನಬಸವ ಅವರು ಮಾತನಾಡಿ, ಪ್ರತ್ಯೇಕ ರಾಜ್ಯದ ಹೋರಾಟಗಳು ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಮಾರಕವಾಗಿವೆ. ಇಂತಹ ಪ್ರವೃತ್ತಿಗಳ ವಿರುದ್ಧ ಸಾಮೂಹಿಕ ಸಂಘಟನೆಗಳು ಜನಾಂದೋಲನ ರೂಪಿಸುವುದು ಅಗತ್ಯವಾಗಿದೆ ಎಂದರು. ಸಿಐಟಿಯು ಮುಖಂಡ ವೈ.ಈರಣ್ಣ,ಎಸ್.ಎಫ್.ಐ ಜಿಲ್ಲಾ ಕಾರ್ಯದರ್ಶಿ ಜಿ.ಬಿ.ಗೋಪಾಲ ನಾಯಕ, ಸಭೆಯಲ್ಲಿ ಮಾತನಾಡಿದರು. ಡಿವೈಎಫ್‌ಐ ಪದಾಧಿಕಾರಿಗಳು ಹಾಗೂ ಮುಖಂಡರು ಪ್ರತಿಭಟನೆ ನೇತೃತ್ವ ವಹಿಸಿದ್ದರು.



ಶ್ರೀರಾಮಪುರ ಪ್ರದೇಶದ ಸಮಗ್ರ ಅಭಿವೃದ್ಧಿಗಾಗಿ

ಸಿಪಿಐ(ಎಂ) 5ನೇ ಪ್ರದೇಶ ಸಮ್ಮೇಳನ

ಸಿಪಿಐ(ಎಂ) ಪಕ್ಷದ ಪ್ರದೇಶ ಸಮ್ಮೇಳನ ನವೆಂಬರ್ 15 ರಂದು ಯಶಸ್ವಿಯಾಗಿ ನಡೆಯಿತು ನವೆಂಬರ್ 14 ರಂದು ಸಂಜೆ ಬಂಡಿರೆಡ್ಡಿ ವೃತ್ತದಲ್ಲಿ ಉದ್ಘಾಟನಾ ಸಮಾರಂಭ ನಡೆಸಲಾಯಿತು. ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್ ಸಮ್ಮೇಳನದ ಮಹತ್ವವನ್ನು ವಿವರಿಸಿದರು. 5 ದಶಕಗಳ ಸ್ವಾತಂತ್ರ್ಯ ಭಾರತದಲ್ಲಿ ದೇಶದ ಜನರಿಗೆ ಪ್ರಜಾಪ್ರಭುತ್ವ ಅನುಭವಿಸಲು ಸಾಧ್ಯವಾಗಿಲ್ಲ. ಶಿಕ್ಷಣ ಉದ್ಯೋಗ, ಆರೋಗ್ಯ, ಜೀವನದ ಭದ್ರತೆ ಇಲ್ಲದಂತಾಗಿದೆ. ಶ್ರೀಮಂತರ ಪರವಾಗಿ ಈ ದೇಶದ ಆಸುವ ವರ್ಗಗಳು ನಡೆದುಕೊಂಡು ಬಂದಿವೆ. ಆದದರಿಂದ ನಿಜವಾದ ಪ್ರಜಾಪ್ರಭುತ್ವ ಜಾರಿಗೊಳಿಸಲು ಸಿಪಿಐ(ಎಂ) ಪಕ್ಷ ಜನತಾ ಪ್ರಜಾಪ್ರಭುತ್ವ ಕ್ರಾಂತಿ ನಡೆಸುವ ಗುರಿ ಹೊಂದಿದೆ ಎಂದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ಶ್ರೀರಾಮಪುರ ಪ್ರದೇಶ ಸಮಿತಿ ಕಾರ್ಯದರ್ಶಿ ಗೋಪಾಲಕೃಷ್ಣ ಅರಳಿಹಳ್ಳಿಯವರು ಮಾತನಾಡಿ ಶ್ರೀರಾಮಪುರ ಪ್ರದೇಶದಲ್ಲಿ ಸಿಪಿಐ(ಎಂ) ಪಕ್ಷ ನಡೆಸಿದ ಜರಪರ ಚಳುವಳಿಯನ್ನು ವಿವಸಿದರು. ಸಿಪಿಐ(ಎಂ) ಪಕ್ಷ ಮಾತ್ರ ಜನತೆಗೆ ಸ್ಪಂದಿಸುತ್ತದೆ ಎಂದು ತಿಳಿಸಿದರು.

ಸಭೆಯ ಅಧ್ಯಕ್ಷತೆಯನ್ನು ಶ್ರೀರಾಮಪು ಪ್ರದೇಶದ ಸಮಿತಿ ಸದಸ್ಯರಾದ ವಿಜಕುಮಾರ ಅಧ್ಯಕ್ಷತೆ ವಹಿಸಿದ್ದರು. ಸ್ಥಳೀಯ ಸಮಿ ಸದಸ್ಯರಾದ ಕೆ.ಎಸ್.ಶಾರದ ಸ್ವಾಗತಿಸಿದರು ಸ್ಥಳೀಯ ಸಮಿತಿ ಸದಸ್ಯರಾ ಕಾಂ.ಕೆ.ವೀರಮಣಿ ವಂದಿಸಿದರು.

ಪ್ರತಿನಿಧಿ ಅಧಿವೇಶನ ನಡೆ ಕಾರ್ಯದರ್ಶಿ ಮಂಡಿಸಿದ ವರದಿಯ ಮೇ ಪ್ರತಿನಿಧಿಗಳು ಚರ್ಚೆ ನಡೆಸಿದರು. ಪ್ರದೇಶದ ಪಕ್ಷವನ್ನು ಬಲಿಷ್ಟಗೊಳಿಸಲು ಹಲವಾ ಮಹತ್ವದ ತೀರ್ಮಾನಗಳನ್ನು ಕೈಗೊಂಡಿತು ಕೊನೆಯಲ್ಲಿ 7 ಜನರ ನೂತನ ಸಮಿತಿಯು ಆರಿಸಲಾಯಿತು.

ಗೋಪಾಲಕೃಷ್ಣ ಅರಳಿಹಳ್ಳಿ(ಕಾರ್ಯದರ್ಶಿ)
ಎಸ್.ಹೆಚ್.ವಿಜಯಕುಮಾರ್
ಕೆ.ಎಸ್.ಶಾರದ
ಪಿ.ಚಂದ್ರಯ್ಯ
ಎನ್.ಸುರೇಶ್
ಕೆ.ವೀರಮಣಿ
ಪಾರ್ಥಿಬನ್.ಎಸ್

ಕಾಶ್ಮೀರ, ಈಶಾನ್ಯ ಭಾರತದ ಪ್ರಶ್ನೆಗಳು

ಸರ್ಕಾರದ ನಿಲುವಿನಲ್ಲಿ ಸ್ವಾಗತಾರ್ಹ ಬದಲಾವಣೆ

ಹರ್ಕಿಶನ್ ಸಿಂಗ್ ಸುರ್ಜಿತ್

ಪ್ರಧಾನ ಮಂತ್ರಿ ಮನಮೋಹನ್ ಸಿಂಗ್‌ರವರು ಒಂದೆಡೆ ಜಮ್ಮು ಮತ್ತು ಕಾಶ್ಮೀರ ಹಾಗೂ ಇನ್ನೊಂದೆಡೆ ಈಶಾನ್ಯ ಭಾರತ ಕುರಿತಂತೆ ಕೈಗೊಂಡಿರುವ ಕ್ರಮಗಳು ಮೆಚ್ಚತಕ್ಕಂತವು. ನಿಜ, ಇದು ಎಂದೋ ಬರಬೇಕಿತ್ತು. ಏಕೆಂದರೆ ಇದು ದೇಶದ ಯಾವುದೋ ಒಂದು ಭಾಗದ ಬಗ್ಗೆ ಎಂದಿನ ಪ್ರಕಟಣೆಯೇನಲ್ಲ. ಈ ಕ್ರಮಗಳನ್ನು ಸರಿಯಾಗಿ ಅನುಸರಿಸಿದರೆ ಬುಡಮಟ್ಟದಲ್ಲಿ ಪರಿಸ್ಥಿತಿ ಸುಧಾರಿಸಬಹುದು.

ಈ ಪ್ರದೇಶಗಳನ್ನು ಬಹಳವಾಗಿ ಉಪೇಕ್ಷಿಸಲಾಗಿದೆ ಎಂದು ರಾಜಕೀಯ ತಿಳುವಳಿಕೆಯನ್ನು ಆಧರಿಸಿದ ಕ್ರಮಗಳಿವು. ಸತ್ಯಸಂಗತಿಯೆಂದರೆ ಸ್ವಾತಂತ್ರ್ಯದ ಮೊದಲು ಬ್ರಿಟಿಷರು, ಕಾಶ್ಮೀರದ ವಿಷಯದಲ್ಲಿ ಅಲ್ಲಿನ ಮಹಾರಾಜ ಉಪೇಕ್ಷಿಸಿದ್ದರು. ಸ್ವಾತಂತ್ರ್ಯದ ನಂತರ ಬಂದ ಸರ್ಕಾರಗಳ ಉಪೇಕ್ಷೆಯೂ ಕೊನೆಯಿಲ್ಲದ್ದು. ಪರಿಣಾಮವೆಂದರೆ ಅಲ್ಲಿನ ಜನತೆ ಬಡತನದಲ್ಲೇ ಬಾಳಿದರು, ಕೆಲವೇ ಉದ್ಯೋಗವಕಾಶಗಳು. ಇದರಿಂದ ಜನರಲ್ಲಿ ಅಸಂತೃಪ್ತಿ ಬೆಳೆಯಿತು. ಉಗ್ರಗಾಮಿ ಗುಂಪುಗಳು ಇದರ ಪ್ರಯೋಜನ ಪಡೆದವು. ಜತೆಗೆ ಈ ಹೆಚ್ಚಿನ ಗುಂಪುಗಳಿಗೆ ಸಾಮ್ರಾಜ್ಯಶಾಹಿ ಶಕ್ತಿಗಳ ಹಣ ಸಹಾಯವೂ ಇದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿಗಳ ಮುತುವರ್ಜಿಯನ್ನು ಕಾಣಬೇಕು.

ಜಮ್ಮು-ಕಾಶ್ಮೀರದಲ್ಲಿ


ನವೆಂಬರ್ 16 ಮತ್ತು 17 ರಂದು ಪ್ರಧಾನಮಂತ್ರಿಗಳು ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಿದರು. ತನ್ನ ಮೊದಲ ಭೇಟಿಯ ಮೊದಲೇ ಅವರು ರಾಜ್ಯದಲ್ಲಿ ಉಗ್ರಗಾಮಿಗಳನ್ನು ಎದುರಿಸಲು ನಿಲ್ಲಿಸಿದ್ದ ಸೇನಾಪತಿಗಳ ಸಂಖ್ಯೆಯನ್ನು ಇಳಿಸುವುದಾಗಿ ಪ್ರಕಟಿಸಿದ್ದಷ್ಟೇ ಅಲ್ಲ, ಅದು ಜಾರಿಯಾಗುವಂತೆಯೂ ಮಾಡಿದರು. ಪರಿಸ್ಥಿತಿ ಹತೋಟಿಯಲ್ಲಿದ್ದರೆ ಇನ್ನಷ್ಟು ಪಡೆಗಳನ್ನು ಒಂದಕ್ಕೆ ಕರೆಸಿಕೊಳ್ಳುವುದಾಗಿ ಕಾಶ್ಮೀರದ ಜನತೆಗೆ ಭರವಸೆ ನೀಡಿದರು.

ಅದೇ ದಿನ ಪ್ರಧಾನಮಂತ್ರಿಗಳು ಜಮ್ಮು-ಕಾಶ್ಮೀರದ ಹಿಂದುಳಿಕೆಯನ್ನು ಒಪ್ಪಿಕೊಳ್ಳುತ್ತಾ 24000 ಕೋಟಿ ರೂಪಾಯಿಗಳ ಪ್ಯಾಕೇಜನ್ನು ಪ್ರಕಟಿಸಿದರು. ಆದರೆ ಕಾಶ್ಮೀರಿ ಜನತೆಯ ಮನದಲ್ಲಿ ವಿದ್ಯುತ್ ಸಂಚಾರ ಹರಿಸಿದ್ದು ಇದಲ್ಲ, ಸೇನಾಪಡೆಗಳ ಕಡಿತದ ಪ್ರಕಟಣೆ ಮತ್ತು ಕಾಶ್ಮೀರಿಗಳ ವಿಶಿಷ್ಟ ಗುರುತನ್ನು, ಸಂಸ್ಕೃತಿಯನ್ನು ರಕ್ಷಿಸಲಾಗುವುದು ಎಂಬ ಭರವಸೆ. ಮರುದಿನ ಜಮ್ಮುವಿನಲ್ಲಿ ರಾಜ್ಯದ ಮೂರೂ ಪ್ರದೇಶಗಳಿಗೆ ಅಭಿವೃದ್ಧಿಯ ಸಮಾನ ಅವಕಾಶಗಳು ಸಿಗುತ್ತವೆ ಎಂಬ ಭರವಸೆ ನೀಡಿದರು.

ಪ್ರಧಾನಮಂತ್ರಿಗಳ ಈ ಭೇಟಿಯ ಪರಿಣಾಮವನ್ನು ಒಂದು ಸರಳ ಸಂಗತಿಯಿಂದ ಗ್ರಹಿಸಬಹುದು. ಅವರು ಶ್ರೀನಗರವನ್ನು ತಲುಪುವಾಗ ಉಗ್ರಗಾಮಿಗಳ ಬೆದರಿಕೆಯಿಂದಾಗಿ ಅಂಗಡಿ, ಮಾರುಕಟ್ಟೆಗಳು ಮುಚ್ಚಿದ್ದವು. ಪ್ರಧಾನಮಂತ್ರಿಗಳ ಆಗಮನದ ಸ್ವಲ್ಪವೇ ಮೊದಲು ಸಭೆಯ ಜಾಗದ ಸಾಕಷ್ಟು ಸಮೀಪವೇ ಉಗ್ರಗಾಮಿಗಳು ಮತ್ತು ಸೇನಾ ಪಡೆಗಳ ನಡುವೆ ಗುಂಡಿನ ಚಕಮಕಿ ನಡೆದು ಇಬ್ಬರು ಉಗ್ರಗಾಮಿಗಳು ಸತ್ತಿದ್ದರು. ಆದರೂ ಸ್ವಲ್ಪಸ್ವಲ್ಪ ವೇಳೆ ಅಂಗಡಿ, ಮಾರುಕಟ್ಟೆಗಳು ತೆರೆಯಲಾರಂಭಿಸಿದರು. ಜನರು ಪ್ರಧಾನಿಗಳ ಸಭೆಗೆ ಬರಲಾರಂಭಿಸಿ ದರು. ಸುಮಾರು 30 ರಿಂದ 35 ಸಾವಿರ ಜನ ಸೇರಿದರು ಎಂದು ಅಂದಾಜು ಮಾಡಲಾಗಿದೆ. ಅಲ್ಲಿನ ಪರಿಸ್ಥಿತಿಯಲ್ಲಿ ಇದು ಸಣ್ಣ ಸಂಖ್ಯೆಯೇನಲ್ಲ.

ಪಾಕಿಸ್ತಾನದ ಅಧ್ಯಕ್ಷ ಜನರಲ್ ಮುಷರ್ರಫ್ ಇತ್ತೀಚೆಗೆ ಇಡೀ ಕಾಶ್ಮೀರವನ್ನು, ಹತೋಟಿ ರೇಖೆಯ ಎರಡೂ ಕಡೆ, ಏಳು ವಲಯಗಳಾಗಿ ಮಾಡಬೇಕು, ಇದನ್ನು ಒಂದೊಂದಾಗಿ ಸೇನಾರಹಿತ ವಲಯಗಳಾಗಿ ಮಾಡಲು, ಅಗತ್ಯವಾದರೆ ವಿಶ್ವಸಂಸ್ಥೆಯ ಉಸ್ತುವಾರಿಯಲ್ಲಿ ಎರಡು ದೇಶಗಳು ಜಂಟಿ ಪ್ರಯತ್ನ ನಡೆಸಬೇಕು ಎಂದು ಪ್ರಸ್ತಾವವಿಟ್ಟಿದ್ದರು. ಅದನ್ನು ಶ್ರೀನಗರದಲ್ಲಿದ್ದಾಗ ಪ್ರಧಾನಮಂತ್ರಿಗಳು ಸ್ಪಷ್ಟವಾಗಿ ತಿರಸ್ಕರಿಸಿದರು. ದೇಶ ಒಂದು ವಿಭಜನೆಯಿಂದ ಸಾಕಷ್ಟು ನರಳಿದೆ, ಇನ್ನು ಯಾವ ವಿಭಜನೆಯೂ ಇರುವುದಿಲ್ಲ ಎಂದು ನೇರ ಮಾತಿನಲ್ಲೇ ಹೇಳಿದರು. ವಿಶ್ವಸಂಸ್ಥೆಯ ಉಸ್ತುವಾರಿಯಲ್ಲಿ ಜನಮತಗಣನೆ ಮಾಡಬೇಕು ಎಂದು ಮತ್ತೆ - ಮತ್ತೆ ಇಡಲಾಗುತ್ತಿರುವ ಪ್ರಸ್ತಾವವನ್ನೂ ತಿರಸ್ಕರಿಸಿದರು. ಅಂದರೆ ಭಾರತ ಮತ್ತು ಪಾಕಿಸ್ತಾನ ಶಿಮ್ಲಾ ಒಪ್ಪಂದಕ್ಕೆ ಬದ್ಧವಾಗಿರಬೇಕು, ಮೂರನೇಯವರ ಮಧ್ಯಸ್ಥಿಕೆಗೆ ಅವಕಾಶವಿರಬಾರದು ಎಂದು ಇದರರ್ಥ. ನಿಜ ಸಂಗತಿಯೆಂದರೆ, ಈ ರೀತಿಯಲ್ಲಿ ಸಾಮ್ರಾಜ್ಯಶಾಹಿಗಳು ಕಾಶ್ಮೀರ ಪ್ರಶ್ನೆಯನ್ನು ತಮ್ಮ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ದುರುಪಯೋಗ ಪಡಿಸಿಕೊಳ್ಳದಂತೆ ತಡೆಯಬಹುದು.

ಸರ್ಕಾರ ಬೇಷರತ್ ಮಾತುಕತೆಗೆ ಸಿದ್ಧರಿರುವಾಗ ಇತರರು ಮಾತುಕತೆಗೆ ಶರತ್ತು ಹಾಕುವುದು ಸರಿಯಲ್ಲ ಎಂದು ನೇರವಾಗಿ ಸರ್ವಪಕ್ಷ ಹುರಿಯತ್ ಕಾನ್ಫರೆನ್ಸ್‌ನ ಶರತ್ತುಗಳ ಪ್ರಸ್ತಾವ ಮಾಡಿದರು. ಭಾರತ ಮತ್ತು ಪಾಕಿಸ್ತಾನಿಗಳು ಶರತ್ತುಗಳನ್ನು ಹಾಕುವುದನ್ನು ಬಿಟ್ಟು ಮಾತುಕತೆಗಳನ್ನು ನಡೆಸಿದ್ದರಿಂದ ಪ್ರಗತಿ ಸಾಧಿಸಬಹುದಾದರೆ ಭಾರತ ಸರ್ಕಾರ ಮತ್ತು ಹುರಿಯತ್ ಕಾನ್ಫರೆನ್ಸ್ ತೆರೆದ ಮನದಿಂದ ಮುಂದುವರೆಯಲು ಯಾಕೆ ಸಾಧ್ಯವಾಗದು?



ಕಾಶ್ಮೀರದಲ್ಲಿ ಪ್ರಧಾನಿ

ಈಶಾನ್ಯ ಭಾರತದಲ್ಲಿ

ಜಮ್ಮು ಮತ್ತು ಕಾಶ್ಮೀರದಿಂದ ಹಿಂದಿರುಗಿದ ಕೂಡಲೇ ಪ್ರಧಾನಮಂತ್ರಿಗಳು ಇನ್ನೊಂದು ಸಮಸ್ಯೆಯ ಪ್ರದೇಶವಾದ ಈಶಾನ್ಯ ಭಾಗಕ್ಕೆ ಧಾವಿಸಿದರು. ದಟ್ಟ ಕಾಡುಗಳಿಂದ ಕೂಡಿದ ಈ ಪರ್ವತ ಪ್ರದೇಶ ಸಂಪೂರ್ಣ ಉಪೇಕ್ಷಿತ ಪ್ರದೇಶ - ಇದನ್ನು ನವೆಂಬರ್ 22 ರಂದು ಪ್ರಧಾನಮಂತ್ರಿಗಳು ನೇರವಾಗಿ ಒಪ್ಪಿಕೊಳ್ಳುತ್ತಾ ಈ ಪ್ರದೇಶವನ್ನು ದೇಶದ ಇತರ ಭಾಗಗಳೊಂದಿಗೆ ಸಮಗ್ರೀಕರಿಸಲು ಕೆಲಸ ಮಾಡುವುದಾಗಿ ಹೇಳಿದರು.

ಇದು ಮಹತ್ವದ ಸಂಗತಿ. ಏಕೆಂದರೆ ಇದು ದಶಕಗಳಿಂದ ಉಗ್ರಗಾಮಿಗಳ ಬೇಟೆಯ ಪ್ರದೇಶವಾಗಿ ಬಿಟ್ಟಿದೆ. ಜತೆಗೆ ಭಾರತದ ಛಿದ್ರೀಕರಣದ ಉದ್ದೇಶದಿಂದ ಸಾಮ್ರಾಜ್ಯಶಾಹಿಗಳು ಈ ಭಾಗದ ಮೇಲೆ ಕಣ್ಣಿಟ್ಟಿದ್ದಾರೆ. ಇಂತಹ ಒಂದು ಯೋಜನೆ 80 ರ ದಶಕದಲ್ಲಿ ಬಯಲಾಗಿತ್ತು.

ನವೆಂಬರ್ 22 ರಂದು ಗುವಾಹಟಿಯಲ್ಲಿ ಹಲವಾರು ವ್ಯಕ್ತಿಗಳನ್ನು ಸನ್ಮಾನಿಸಿದರು. ಇವರಲ್ಲಿ ಕೆಲವರು ಈ ಹಿಂದೆ ಕಾಂಗ್ರೆಸ್ ಮತ್ತು ಅದರ ಸರ್ಕಾರಗಳನ್ನು ವಿರೋಧಿಸಿದವರು. ಇದೊಂದು ಸಾಂಕೇತಿಕ ಘಟನೆ.

ಅದೇ ರೀತಿ ಮಣಿಪುರದಲ್ಲಿ ಐತಿಹಾಸಿಕ ಕಾಂಗ್ಲಾ ಕೋಟೆಯನ್ನು ರಾಜ್ಯ ಸರ್ಕಾರಕ್ಕೆ ಹಿಂದಿರುಗಿಸಿದ ಘಟನೆ ಕೂಡಾ. ಇದನ್ನು 1891 ರಲ್ಲಿ ಬ್ರಿಟಿಷರು ವಶಪಡಿಸಿಕೊಂಡಿದ್ದರು. 1915 ರಿಂದ ಇದು ಅಸ್ಸಾಂ ರೈಫಲ್ಸ್‌ನ ವಶದಲ್ಲಿದೆ. ಇದು ಮಣಿಪುರಿ ಹೆಮ್ಮೆಯ ಪ್ರತೀಕವಾಗಿದ್ದರಿಂದ ಅಸ್ಸಾಂ ರೈಫಲ್ಸ್ ಇದನ್ನು ತೆರವು ಮಾಡಬೇಕೆಂಬ ಅವರ ದೀರ್ಘಕಾಲದ ಬೇಡಿಕೆಯನ್ನು ಹಿಂದಿನ ಹಲವು ಸರ್ಕಾರಗಳು ನಿರಾಕರಿಸಿದ್ದವು. ಡಾ. ಸಿಂಗ್ ಇದನ್ನೀಗ ಮನ್ನಿಸಿ ಮಣಿಪುರಿ ಜನತೆಯ ಭಾವನೆಗಳಿಗೆ ಸಾಂತ್ವಾನ ನೀಡಿದ್ದಾರೆ. ಇದು ಜನಗಳ ದೂರುಗಳ ಸೌಹಾರ್ದಯುತ ಪರಿಹಾರಕ್ಕೆ ದಾರಿ ಮಾಡಿಕೊಡಲಾಯಿತು.

ಮಣಿಪುರದಲ್ಲಿದ್ದಾಗ ಪ್ರಧಾನಮಂತ್ರಿಗಳನ್ನು ಮಹಿಳೆಯರ ಒಂದು ಗುಂಪು ಭೇಟಿ ಮಾಡಿತು. ಅಸ್ಸಾಂ ರೈಫಲ್ಸ್‌ನ ಸೈನಿಕರು 32 ವರ್ಷದ ತಾಂಗ್ಜಂ ಮನೋರಮ ಎಂಬಾಕೆಯ ಅಮಾನುಷ ಬಲಾತ್ಕಾರ ನಡೆಸಿ ಕೊಲೆ ಮಾಡಿದ ಘಟನೆಯಿಂದ ಚಳುವಳಿ ನಡೆಸುತ್ತಿರುವ ಮಹಿಳೆಯರು ಇವರು. ಈ ಘಟನೆ ಇಡೀ ಮಣಿಪುರದಲ್ಲಿ ಬೆಂಕಿ ಹೊತ್ತಿಸಿತ್ತು. ಮಹಿಳೆಯರು ತಮ್ಮನ್ನು ಕೋಟೆಯ ಎದುರು ವಿವಸ್ತ್ರಗೊಳಿಸಿಕೊಂಡು ಪ್ರತಿಭಟನೆ ನಡೆಸಿ ತಮ್ಮ ನೋವನ್ನು ಪ್ರಕಟಿಸಿದ್ದರು. ಈ ಹಿನ್ನೆಲೆಯಲ್ಲಿ ಸಶಸ್ತ್ರ ಪಡೆಗಳ (ವಿಶೇಷ ಅಧಿಕಾರಗಳು) ಕಾನೂನನ್ನು ರದ್ದು ಮಾಡಬೇಕೆಂದು ಇಲ್ಲಿಯ ಜನ ಒತ್ತಾಯಿಸುತ್ತಿದ್ದಾರೆ. ಈಗ ಪ್ರಧಾನಮಂತ್ರಿಗಳು ಇದನ್ನು ಪರಿಶೀಲಿಸಲು ಒಂದು ವಿಶೇಷ ಸಮಿತಿ ರಚಿಸಿದ್ದಾರೆ. ಇದರಲ್ಲಿ ನಿವೃತ್ತ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಾಧೀಶರು, ನಿವೃತ್ತ ಸೈನ್ಯಾಧಿಕಾರಿಗಳು ಮತ್ತು ಇತರ ಅಧಿಕಾರಿಗಳಿದ್ದಾರೆ.

ನಾಗಾ ಪ್ರಶ್ನೆಯನ್ನು ಪರಿಶೀಲಿಸಲು ಕೆಲವು ಪ್ರಯತ್ನ ನಡೆಸಿದ್ದಲ್ಲದೆ ಪ್ರಧಾನಮಂತ್ರಿಗಳು ಉಲ್ಫಾ ಮತ್ತು ಈ ಪ್ರದೇಶದ ಇತರ ಉಗ್ರಗಾಮಿ ಗುಂಪುಗಳಿಗೆ ಮಾತುಕತೆ ನಡೆಸುವ ಆಹ್ವಾನ ನೀಡಿದರು. 'ಬಂದೂಕು ಕೈಗೆತ್ತಿಕೊಳ್ಳಬೇಡಿ, ನಿಮ್ಮ ಮಾತುಗಳಿಗೆ ಕಿವಿಗೊಡಲು ಸಿದ್ಧವಿರುವ ಒಬ್ಬ ಪ್ರಧಾನಮಂತ್ರಿ 'ಇದ್ದಾನೆ' ಎಂದು ಅವರು ಹೇಳಿರುವುದಾಗಿ ವರದಿಯಾಗಿದೆ.

ಸ್ವಾಗತಾರ್ಹ ನಿಲುವು

ಇವೆಲ್ಲಾ ಬಂಡುಕೋರತನ ಕುರಿತಂತೆ ಭಾರತ ಸರ್ಕಾರದ ನಿಲುವಿನಲ್ಲಿ ಒಂದು ಬದಲಾವಣೆ ಬಂದಿರುವುದನ್ನು ಸೂಚಿಸುತ್ತದೆ. ಈ ಸಮಸ್ಯೆ ಮೂಲತಃ ರಾಜಕೀಯವಾದದ್ದು, ಆಯಾಯ ಪ್ರದೇಶದ ಹಿಂದುಳಿಕೆಯಿಂದ ಬಂದದ್ದು, ಆದ್ದರಿಂದ ಅದನ್ನು ರಾಜಕೀಯವಾಗಿಯೇ ಬಗೆಹರಿಸಬೇಕು ಎಂದು ಎಡಪಕ್ಷಗಳು ಹಲವಾರು ಬಾರಿ ಹೇಳಿದ್ದವು. ಆದರೆ ಸರ್ಕಾರ ಅದು ಮೂಲತಃ ಕಾನೂನು ಮತ್ತು ವ್ಯವಸ್ಥೆಯ ಪ್ರಶ್ನೆಯೆಂಬಂತೆ ವರ್ತಿಸುತ್ತಾ ಬಂದಿತ್ತು. ಆದರೆ ಕಳೆದ ಕೆಲವು ದಶಕಗಳ ಅನುಭವವನ್ನು ನೋಡಿದರೆ ಸರ್ಕಾರಗಳ ಈ ನಿಲುವಿನಿಂದ ಏನೂ ಪ್ರಯೋಜನವಾಗಿಲ್ಲ, ಬದಲಾಗಿ ಪರಿಸ್ಥಿತಿ ಹದಗೆಟ್ಟಿದೆ. ಭದ್ರತಾ ಪಡೆಗಳು ಆ ಪ್ರದೇಶಗಳಲ್ಲಿ ಅತ್ಯಾಚಾರಗಳನ್ನು ನಡೆಸುತ್ತಿವೆ ಎಂಬ ಆಪಾದನೆಗೊಳಗಾಗಿದೆ. ಇವು ಅಲ್ಲಿಯ ಜನರನ್ನು ಮತ್ತಷ್ಟು ದೂರತಳ್ಳಿ ದೇಶದ ಐಕ್ಯತೆ ಮತ್ತು ಸಮಗ್ರತೆಗೇ ಬೆದರಿಕೆ ತಂದಿವೆ.


ಆದ್ದರಿಂದ ಈ ಬದಲಾವಣೆಯನ್ನು ಸ್ವಾಗತಿಸದಿರಲು ಸಾಧ್ಯವಿಲ್ಲ. ಹಲವಾರು ಟಿಪ್ಪಣಿಕಾರರು ಹೇಳಿರುವಂತೆ ಬಂಡುಕೋರತನ ಸಮಸ್ಯೆಗೆ ಪರಿಹಾರ ಇರುವುದು ಆರ್ಥಿಕ ಬೆಳವಣಿಗೆ, ಸಾಮಾಜಿಕ-ಸಾಂಸ್ಕೃತಿಕ ಪ್ರಗತಿ ಮತ್ತು ರಾಕೀಯ ಸ್ವಾಯತತ್ತೆಯಲ್ಲಿ. ನಿಜ, ಕಾಶ್ಮೀರ ಮತ್ತು ಈಶಾನ್ಯ ಭಾರತದಲ್ಲಿ ಪ್ರಧಾನಮಂತ್ರಿಗಳ ಈ ಪ್ರಯತ್ನಗಳಿಗೆ ಎಲ್ಲೆಡೆ ಮೆಚ್ಚುಗೆ ವ್ಯಕ್ತಪಟ್ಟಿದ್ದರೂ, ಸರ್ಕಾರ ತನ್ನ ಹಳೆಯ ವಿಫಲ ನಿಲುವಿಗೆ ಅಂಟಿಕೊಳ್ಳಬೇಕು ಎಂದು ಹೇಳುವ ದನಿಗಳೂ ಅಲ್ಲಲ್ಲಿ ಕೇಳಬಂದಿವೆ. 'ಯಾವುದೇ ರಾಷ್ಟ್ರ-ವಿರೋಧಿ ಚಟುವಟಿಕೆಯನ್ನು ಸಹಿಸಬಾರದು' ಎನ್ನುತ್ತಾ ಅವರು ತಮ್ಮ ವಾದವನ್ನು ಸಮರ್ಥಿಸಿಕೊಳ್ಳುತ್ತಾರೆ.

ರಾಷ್ಟ್ರ-ವಿರೋಧಿ ಚಟುವಟಿಕೆಯನ್ನು ಸಹಿಸಿಕೊಳ್ಳಬೇಕು ಎಂದು ಯಾವ ದೇಶಪ್ರೇಮಿ ಭಾರತೀಯನೂ ಹೇಳುವುದಿಲ್ಲ. ಇಂತಹ ಚಟುವಟಿಕೆಗಳನ್ನು ನಡೆಸುವುದರ ವಿರುದ್ಧ ಕಠಿಣ ಕ್ರಮಗಳು ಅಗತ್ಯ ಎಂಬುದು ನಿಜ. ಆದರೆ ಇಂತಹವರ ಸಂಖ್ಯೆ ಬಹಳ ಕಡಿಮೆ. ನಿಜವಾಗಿ ಮಾಡಬೇಕಾದ ಕೆಲಸವೆಂದರೆ ಇವರನ್ನು ಜನರಿಂದ ದೂರಮಾಡುವುದು. ಇಲ್ಲಿಯೇ ಒಂದು ರಾಜಕೀಯ ನಿಲುವಿನ ಅಗತ್ಯವನ್ನು ಪೂರ್ಣವಾಗಿ ಮನಗಾಣಬಹುದು. ಅದರ ಬದಲು ಹಿಂದಿನ ನಿಲುವನ್ನೇ ಅನುಸರಿಸಿದರೆ ಅದು ಅಲ್ಲಿನ ಜನಗಳನ್ನು ಭಾರತ ಸಂಘದಿಂದ ದೂರ ತಳ್ಳಿ ಸಮಸ್ಯೆಯನ್ನು ಇನ್ನಷ್ಟು ಕ್ಲಿಷ್ಟಗೊಳಿಸುತ್ತದೆ.

ಇತ್ತೀಚಿನ ಪ್ರಕಟಣೆಗಳು ಎಷ್ಟು ಕಾರ್ಯರೂಪಕ್ಕೆ ಬರುತ್ತವೆ ಎಂಬ ಬಗ್ಗೆ ಸಂದೇಹಗಳೂ ವ್ಯಕ್ತವಾಗಿವೆ. ಇದು ಸಹಜವೇ ಏಕೆಂದರೆ ಹಲವು ಪ್ರಧಾನಮಂತ್ರಿಗಳು ಹಲವು ಜನವಿಭಾಗಗಳಿಗೆ ಹಲವಾರು ಪ್ರಕಟಣೆಗಳನ್ನು, ಪ್ಯಾಕೇಜುಗಳನ್ನು ನೀಡಿರುವುದನ್ನು ಈ ದೇಶ ಕಂಡಿದೆ. ಅವನ್ನು ಜಾರಿಗೆ ತಂದದ್ದು ಇಲ್ಲವೇ ಇಲ್ಲ ಎನ್ನಬಹುದು. ಆದರೆ ಈ ಅಂಶವೇ ಯುಪಿಎ ಸರ್ಕಾರ ಕೇವಲ ಮಾತಿಗೆ ಸೀಮಿತವಾಗುಳಿಯದೆ ದೃಢ ಕಾರ್ಯಾಚರಣೆ ನಡೆಸುವ ಅಗತ್ಯವನ್ನು ಎತ್ತಿ ತೋರುತ್ತದೆ. 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕಾ ಸಂಪಾದಕೀಯ ಹೇಳಿದಂತೆ ಕಾರ್ಯದಲ್ಲಿ ನಿರ್ದಿಷ್ಟ ಪ್ರಗತಿಯೇ ಜನಗಳ ಪರಕೀಯ ಭಾವಕ್ಕೆ ಏಕೈಕ ಮದ್ದು. ಒಂದು ಉತ್ತಮ ಆರಂಭಕ್ಕೆ ನೆಲ ಹದ ಮಾಡಲಾಗಿದೆ. ಈ ಅವಕಾಶ ಕಳೆದುಹೋಗಲು ಬಿಡಬಾರದು.

ಮಹಿಳಾ ಚಳುವಳಿಗೆ
7ನೇ ರಾಷ್ಟ್ರೀಯ ಸಮ್ಮೇಳ

(ಸುಶೀಲಾ ಗೋಪಾಲನ್ ನಗರ-ಮಂಗಳಾ ಹೋತಿಗಿ ವೇದಿಕೆ, ಭುವ





ಸಾರ್ವ... ಸಭೆಯಲ್ಲಿ

ಯಾವ ಗಳಿಗೆಯಲ್ಲಿ ಆತಂಕವಾದಿಗಳು ಎಲ್ಲಿಂದ ಬಂದೆರಗುವರೋ ಎಂಬ ಭಯದ ನೆರಳಲ್ಲಿಯೇ ನಾವು ಬದುಕುತ್ತೇವೆ', 'ಜನವಾದಿಯ ಸದಸ್ಯತ್ವದ ಹಣವನ್ನು ಹಾಲಿನ ಪ್ಯಾಕೆಟ್‌ನಲ್ಲಿಯೋ, ತರಕಾರಿ ಬುಟ್ಟಿಯಲ್ಲಿಯೋ ಮಹಿಳೆಯರು ಬಚ್ಚಿಟ್ಟು ಹೋಗುತ್ತಾರೆ', 'ಸರ್ಕಾರ ಮತ್ತು ಜನರ ಪ್ರಯತ್ನದಿಂದಾಗಿ ಪರಿಸ್ಥಿತಿ ಸುಧಾರಿಸುತ್ತದೆ'.

ಜನವಾದಿ ಮಹಿಳಾ ಸಂಘಟನೆಯ 7ನೇ ರಾಷ್ಟ್ರೀಯ ಸಮ್ಮೇಳನದಲ್ಲಿ ತ್ರಿಪುರಾದ ಪ್ರತಿನಿಧಿ. ಕೇವಲ ಸಂಖ್ಯೆಯಿಂದಾಗಿ ಮಾತ್ರವಲ್ಲ ಬದಲಿಗೆ ಸೈದ್ಧಾಂತಿಕ, ರಾಜಕೀಯ, ಸಂಘಟನಾತ್ಮಕ ನೆಲೆಗಳಲ್ಲಿ ಜನವಾದಿ ಭಾರತದ ಮಹಿಳಾ ಚಳುವಳಿಯ ಮುಂಚೂಣಿಯಲ್ಲಿದೆ ಎಂಬುದು ಮತ್ತೊಮ್ಮೆ ಸಾಬೀತಾಗಿದ್ದು ಶಿಲ್ಪಕಲೆಗಳ ನೆಲ ಭುವನೇಶ್ವರದಲ್ಲಿ ಒಂದೆಡೆ ವಿಶ್ವ ವಿಖ್ಯಾತ ಕೆತ್ತನೆಯ ದೇವಾಲಯುಗಳೆಂಬ ಖ್ಯಾತಿ, ಮತ್ತೊಂದೆಡೆ ಜನ ತರಗೆಲೆಗಳನ್ನು ತಿಂದು ಬದುಕುವ ಮಟ್ಟಿನ ಬಡತನದ ಪರಾಕಾಷ್ಟೆಯ ಕಾಳಹಂದಿಯನ್ನೂ ಹೊಂದಿರುವ ಒರಿಸ್ಸಾದಲ್ಲಿ ನವೆಂಬರ್ 18-21 2004 ರಲ್ಲಿ ನಡೆದ 7ನೇ ರಾಷ್ಟ್ರೀಯ ಸಮ್ಮೇಳನ ಇಡೀ ರಾಷ್ಟ್ರೀಯ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ಮಹಿಳಾ ಚಳುವಳಿಯ ಸಾಧನೆಗಳು, ಮುಂದಿರುವ ಸವಾಲುಗಳನ್ನು ಕುರಿತು ವಿಶ್ಲೇಷಿಸಿ, ಅರ್ಥಪೂರ್ಣ ಚರ್ಚೆ ನಡೆಸಿತು.

ಕೆ.ಎಸ್.ವಿಮಲ

ಸಮ್ಮೇಳನವೆಂದರೆ ಬರೀ ಸಾಂಕೇತಿಕ ಚರ್ಚೆಗಳಲ್ಲ, ಮಹಿಳೆಯರೆಂದೂ ಪರಿಸ್ಥಿತಿಯ ಬಲಿಪಶುಗಳಲ್ಲ ಸಾಧನೆಗಳನ್ನು ಎತ್ತಿತೋರಿಸುವ, ದೋಷಗಳನ್ನು ಸರಿಪಡಿಸಿಕೊಳ್ಳುವ, ದೌರ್ಜನ್ಯಗಳನ್ನು ಮೆಟ್ಟನಿಲ್ಲುವ ಪ್ರತೀಕಗಳೆಂಬುದನ್ನು ಜನವಾದಿಯ ಸಮ್ಮೇಳನ ಮತ್ತೊಮ್ಮೆ ತೋರಿಸಿತು.

17.11.2004 ರಂದು ಭುವನೇಶ್ವರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ, ನಂತರ ಬಹಿರಂಗ ಸಭೆ ನಡೆಸಲಾಯಿತು. ಬಹಿರಂಗ ಸಭೆಯನ್ನುದ್ದೇಶಿಸಿ, ಸಾಧನೆಗಳ ಸಾಕಾರ ಮೂರ್ತಿ ಪ.ಬಂಗಾಲ ರಾಜ್ಯದಲ್ಲಿ ಇರುವ ಮಹಿಳೆಯರ ಪರವಾದ ನೀತಿಗಳ ಕುರಿತು, ಅಲ್ಲಿನ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯರವರು ಸವಿಸ್ತಾರವಾಗಿ ವಿವರಿಸುತ್ತಿದ್ದಾಗ ನಮ್ಮ ರಾಜ್ಯದಲ್ಲಿ ನಾವೆಂದು ಎಡರಂಗ ಸರ್ಕಾರವನ್ನು ತಂದೇವೆಂದು ಕೆಲವರಿಗಾದರೂ ಅನಿಸಿರಬೇಕು. ವರ್ಣರಂಜಿತ ಮೆರವಣಿಗೆಯನ್ನು ಮುನ್ನಡೆಸಿದ್ದು ಒರಿಸ್ಸಾದ ಆದಿವಾಸಿ ಮಹಿಳೆಯರು 'ಒಬ್ಬರಿಗೊಬ್ಬರು ಕೈ ಸೇರಿಸಿ, ಒಟ್ಟಿಗೇ ಮುನ್ನಡೆದರೆ ಗೆಲುವು ಎಂದಿಗೂ ನಮ್ಮದೇ' ಎಂಬ ಹಾಡುಗಳ ಮೂಲಕ ಚಿತ್ತಾಕರ್ಷಕ ಆದಿವಾಸಿ ಸಂಸ್ಕೃತಿಯ ಗೋಲಾಕಾರದ ನರ್ತನ ಮಾಡುತ್ತ ಅವರು ಮುನ್ನಡೆದಾಗ ನಮ್ಮ ಭವಿಷ್ಯಕ್ಕೆ ನೀಡಿದ ಸಂದೇಶವದಾಗಿತ್ತು.

ಕಳೆದೆರಡು ಸಮ್ಮೇಳನಗಳಿಂದ ಜನವಾದಿ ಒಂದು ವಿಶಿಷ್ಟ ರೀತಿಯಲ್ಲಿ ಸಮ್ಮೇಳನ ನಡೆಸುತ್ತಿದೆ. ಸಮ್ಮೇಳನವನ್ನೇ 3 ಭಾಗಗಳಾಗಿ ವಿಂಗಡಿಸಿ ಉದ್ಘಾಟನೆ, ಹೋರಾಟಗಳ ಅಧಿವೇಶನ, ಸಂಘಟನಾ ಅಧಿವೇಶಗಳಾಗಿ ನಡೆಸಲಾಗುತ್ತದೆ.

ಹಳೆ ಬೇರಿನ ಕೆಚ್ಚು, ಹೊಸ ಚಿಗುರಿಗೆ ಮೆಚ್ಚು - ಉದ್ಘಾಟನಾ ಅಧಿವೇಶನ

ಉದ್ಘಾಟನಾ ಅಧಿವೇಶನದಲ್ಲಿ ಇಡೀ ಸಮ್ಮೇಳನಕ್ಕೆ ಸ್ಫೂರ್ತಿ ತುಂಬಿದ ಮಹಾನ್ ಚೇತನ ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ 91ರ ಹರೆಯದಲ್ಲಿಯೂ ಬತ್ತದ ಸ್ಫೂರ್ತಿ, ಕುಗ್ಗದ ಉತ್ಸಾಹ, ಸ್ಪಷ್ಟ ಸಂಘಟನಾ ದೃಷ್ಟಿಕೋನಗಳ ಚೈತನ್ಯದ ಸೆಲೆ ಉದ್ಘಾಟನೆಗೆಂದು ಬಂದು ನಿಂತಾಗ ಪ್ರತಿನಿಧಿಗಳು ಎದ್ದು ನಿಂತು ಕರತಾಡನ ಮಾಡಿದ ದೃಶ್ಯ ರೋಮಾಂಚನವಾಗಿತ್ತು. ಅಂತೆಯೇ 82ರ ಅಹಲ್ಯಾ, 84ರ ಕನಕ್ ಮುಖರ್ಜಿ, ಪಾಪಾ ಉಮಾನಾಥ್, ಮಂಗಳೇಶ್ವರಿ ದೇವ್ ಬರ್ಮನ್ ರವರುಗಳು ಪ್ರತಿನಿಧಿ ವೃಂದಕ್ಕೆ ಶುಭಾಶಯ ಕೋರಲು ಬಂದಾಗ 'ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು ಹೊಸ ಯುಕ್ತಿ, ಹಳೆ ತತ್ವದೊಡಗೂಡೆ ಧರ್ಮ' ಎಂಬ ಡಿ.ವಿ.ಜಿ.ಯವರ ಕವನದ ಸಾಲುಗಳ ಜೀವಂತ ಸಾಕ್ಷಿಯದಾಗಿತ್ತು.

ಸ್ಫೂರ್ತಿಯ ಸೆಲೆಗಳ ಸಾಧನೆಗಳನ್ನು ಸಾಕ್ಷೀಕರಿಸಿದ - ಹೋರಾಟಗಳ ಅಧಿವೇಶನ

7ನೇ ಸಮ್ಮೇಳನ - ಹೋರಾಟಗಳ ಸಾಧನೆಯನ್ನು ಸಾಕ್ಷೀಕರಿಸಿದ್ದು ಹೀಗೆ -

ಸದಾ ಆತಂಕವಾದಿಗಳ ದೌರ್ಜನ್ಯ, ಕೇಂದ್ರ ಸರ್ಕಾರಗಳ ಮಲತಾಯಿ ಧೋರಣೆಯಲ್ಲಿಯೇ ಬದುಕುತ್ತಿರುವ ತ್ರಿಪುರಾದಲ್ಲಿ ನಿರಂತರ ಸೆಣಸುತ್ತಿರುವ ಮಹಿಳೆಯರ ಯಶೋಗಾಥೆಗಳನ್ನು ಸಮ್ಮೇಳನದಲ್ಲಿ ತೆರೆದಿಡಲಾಯಿತು. ಎಡರಂಗ ಸರ್ಕಾರದ ನಿರಂತರ ಪ್ರಯತ್ನದಿಂದ, ತ್ರಿಪುರಾದ ಮಹಿಳೆಯರ ನಿರಂತರ ಹೋರಾಟದಿಂದ ಆತಂಕವಾದಿಗಳ ಮಧ್ಯೆ ಸ್ವಲ್ಪ ಮಟ್ಟಿನ ವಿಶ್ವಾಸ ಗಳಿಸಲು ಸಾಧ್ಯವಾಗಿದೆ. ಅಂತಹ ಒಂದು ಯಶಸ್ಸಿನ ಸಾಕ್ಷಿ ಸತ್ಯವತಿ ಜಮಾತಿಯಾ. 'ನನಗೆ ತುಂಬ ಓದಬೇಕೆಂಬ ಆಸೆ ಇತ್ತು. ಆದರೆ ಕಡುಬಡತನದಿಂದಾಗಿ ತಂದೆ ನನ್ನನ್ನು ಶಾಲೆಯಿಂದ ಬಿಡಿಸಿದರು. ಪ್ರಕ್ಷುಬ್ಧ ಮನಸ್ಸಿನಿಂದಿದ್ದ ನನ್ನನ್ನು ಸೆಳೆದಿದ್ದು - ತ್ರಿಪುರಾವೊಂದು ಪ್ರತ್ಯೇಕ ರಾಷ್ಟ್ರವಾದರೆ ನಮ್ಮ ಎಲ್ಲ ಸಮಸ್ಯೆಗಳೂ ಪರಿಹಾರವಾಗುತ್ತದೆಂಬ ಮಾತುಗಳು. ಆದರೆ ಅಲ್ಲಿ ಹೋದಾಗ ಕಣ್ಣೆದುರಿಗೆ ತೆರೆದುಕೊಂಡ ವಾಸ್ತವ - ಬಾಂಗ್ಲಾದೇಶದ ಸರ್ಕಾರದೊಡನೆ ನಿರಂತರ ಸಂಪರ್ಕ ಹೊಂದಿದ ಉಗ್ರವಾದಿಗಳ ನಾಯಕರು ಬಾಂಗ್ಲಾದಲ್ಲಿ ಕೋಟಿಗಟ್ಟಲೆ ಬೆಲೆಬಾಳುವ ಬಂಗ್ಲೆಗಳನ್ನು ಹೊಂದಿ, ಐಷಾರಾಮೀ ಜೀವನ ನಡೆಸುವವರು. ಸ್ವಾತಂತ್ರ್ಯದ ಬಗ್ಗೆ ಮಾತನಾಡುವ ಅವರಿಗೆ ತಮ್ಮದೇ ಗುಂಪಿನಲ್ಲಿ ಪರಸ್ಪರ ಪ್ರೀತಿಸಿ ಮದುವೆಯಾಗಬಯಸಿದ ಯುವ ಜೋಡಿಯೊಂದನ್ನು ಗುಂಡಿಕ್ಕಿ ಕೊಂದ ಘಟನೆ, ಪ್ರತಿನಿತ್ಯ ತಮ್ಮದೇ ಗುಂಪಿನವರಿಂದ ಹತರಾಗುವ ತಮ್ಮದೇ ಸಹವರ್ತಿಗಳು ಇವೆಲ್ಲವೂ ಮನಸ್ಸನ್ನು ಘಾಸಿಗೊಳಿಸುತ್ತಿತ್ತು. ಸ್ವಾತಂತ್ರ್ಯಕ್ಕಾಗಿ ಹೋರಾಟವೆಂಬ ಹುಸಿ ಭರವಸೆಯೊಂದಿಗೆ ಸೇರಿಸಿಕೊಂಡು ನಂತರದಲ್ಲಿ ಸತ್ಯವತಿಯನ್ನು ಬಳಸಿಕೊಂಡಿದ್ದು ಸಂಘದ ನಾಯಕರ ಮಗಳ ದೇಖರೇಖೆಗೆ ಮತ್ತು ಅವರು ಕಗ್ಗೊಲೆ ನಡೆಸುತ್ತಿರುವುದು ಗಡಿಪ್ರದೇಶದ ಮುಗ್ಧ ಜನರನ್ನು ಪ್ರತ್ಯೇಕರಾಷ್ಟ್ರ ಬೇಡಿಕೆ ಜನರ ಸಮಸ್ಯೆ ಪರಿಹಾರ ಮಾಡಲಾರದೆಂಬ ಸತ್ಯದ ಅರಿವು ಸತ್ಯವತಿಗೆ ಬಂದಿದ್ದು ಆಗ. ಈಗ ಆಕೆ ಜನವಾದಿಯ ಸಕ್ರಿಯ ಕಾರ್ಯಕರ್ತೆ. ಸಮ್ಮೇಳನದ ವೇದಿಕೆಯಿಂದ ಆಕೆ ಎಲ್ಲ ಆತಂಕವಾದಿಗಳಿಗೆ ಕರೆ ಕೊಟ್ಟಿದ್ದು ಹಿಂತಿರುಗಿ ಬರಲು. ಸಮ್ಮೇಳನ ಚರ್ಚಿಸಿ ತೀರ್ಮಾನಿಸಿದ್ದು ಭಯೋತ್ಪಾದನೆಯ ನಿಗ್ರಹ ಪ್ರತಿ ಭಯೋತ್ಪಾದನೆಯಲ್ಲ. ಬದಲಿಗೆ ರಾಜಕೀಯ ಇಚ್ಛಾಶಕ್ತಿ ಮತ್ತು ಮಧ್ಯಪ್ರವೇಶ ಎಂದು ಅಭಿಪ್ರಾಯಪಟ್ಟಿತು.

ಹೀಗೆ ಹೋರಾಟಗಳ ಅಧಿವೇಶನದಲ್ಲಿ 'ಮಾರಿಯಂ ಬೀಬಿ ತನ್ನ ಮಗುವಿನೊಂದಿಗೆ ಮರಾಟ್‌ನ ತನ್ನ ಮನೆಗೆ ಹಿಂದಿರುಗಿದಳು. ದುರ್ಗಾವಾಹಿನಿಯ ಹೆಂಗಸರು ಅವಳ ಮನೆಗೆ ಅವಳೇ ಬರಲಾರದಂತೆ ತಡೆದರು. ಬಾಯಾರಿ ಅಳುತ್ತಿದ್ದ ಮಗುವಿಗೆ ಹನಿ ನೀರೂ ಕೊಡದೇ ಸತಾಯಿಸಿದರು. ಕೋಮು ಭಾವನೆ ಮಹಿಳೆಯರ ಮನಸಲ್ಲಿ ಹೊಕ್ಕರೆ ಅದೆಷ್ಟು ಕ್ರೂರ' ಇವುಗಳ ವಿರುದ್ಧ ಹೋರಾಡಿದ ವೀರ ಸಂಗಾತಿ ಕೇರಳದ ಸಲ್ಮಾರೆಹಮಾನ್.



ಬಹಿರಂಗ ಸಭೆಯ ವೇದಿಕೆಯಲ್ಲಿ ಬುದ್ಧದೇವ್ ಸೇರಿದಂತೆ ಮಹಿಳಾ ಮುಖಂಡರು

ಮತಾಂಧತೆಯ ವಿರುದ್ಧ ಆಕೆ ನಡೆಸಿದ ಹೋರಾಟವನ್ನು ಮನ ಮುಟ್ಟುವಂತೆ ವಿವರಿಸಿದಾಗ ಭಾರತದ ನೆಲದಲ್ಲಿ ಆಳವಾಗಿ ಬೇರೂ... ಬಯಸುತ್ತಿರುವ ಕೋಮುವಾದವನ್ನು ಮೂಲೋಚ್ಚಾಟನೆ ಮಾಡುವ ಕ್ರಿಯೆಗೆ ಎಷ್ಟು ಒತ್ತು ಕೊಟ್ಟರು ಸಾಲದೆಂಬ ಕ್ರೂರ ಸತ್ಯವನ್ನು ಅಥ... ಮಾಡಿಸಿತು.

ಕೋಕಾ ಕೋಲಾ ದಂತಹ ಖೂಳರು ದೇಶ... ಜಲ ಸಂಪತ್ತನ್ನು ಕೊಳ್ಳೆ ಹೊಡೆಯುತ್ತಿರು... ಸಂದರ್ಭದಲ್ಲಿ ಮಹಿಳೆಯರ ನೀರಿನ ಹಕ್ಕಿಗಾ... ಹೋರಾಟ ನಡೆಸಿದ ತಮಿಳ್ನಾಡಿನ ದಲಿತ ಮಹಿ... ದಮಯಂತಿ, ಜಾತಿ ಪಂಚಾಯ್ತಿಗಳ ದ... ಕಾರುಬಾರಾಗಿ, ತಮ್ಮ ಜಾತಿ, ಅಧಿಕಾರ... ದರ್ಪಗಳಿಂದ ಮಹಿಳೆಯರ ಬದುಕಿನ ಹಕ್ಕ... ಕಸಿದು ಕೊಳ್ಳುತ್ತಿರುವ ಹರ್ಯಾಣದಲ್ಲಿ ಎದು... ನಿಂತು ಸೆಣಸಿದ ಶೀಲಾ, ಕೇವಲ ದೌರ್ಜನ್ಯಗ... ಎದುರು ಸೆಣಸಿದ ಘಟನೆಗಳು ಮಾತ್ರವ... ಪ್ರಜಾಸತ್ತಾತ್ಮಕವಾಗಿ ಗಳಿಸಿದ ಅಧಿಕಾ... ಸದುಪಯೋಗದಿಂದ ಕಳೆದ 5 ಅವಧಿಯಿ... ನಿರಂತವಾಗಿ ಅಧ್ಯಕ್ಷರಾಗಿ ಆಯ್ಕೆಗೊ... ಪ.ಬಂಗಾಳದ ಪಶ್ಚಿಮ ಮೇಧಿನಿ ಜಿಲ್ಲೆಯ ಸಬ... ಪೂರ್ಣ ಮಹಿಳಾ ಪಂಚಾಯತ್‌ನ ಅದಿವ... ಮಹಿಳೆ ಗೀತಾ ಹನ್ಸದರ್. ಈ ಅವಧಿಯ... ಸಾಧಿಸಿದ ಸಾಕ್ಷರತಾ ಪ್ರಮಾಣದಲ್ಲಿ ಹೆಚ್ಚ... ಸಾರಾಯಿ ವಿರುದ್ಧ ಮಹಿಳೆಯರು ನಡೆ...

ಸಾರ್ವಜನಿಗ ಸಭೆಯಲ್ಲಿ ಹಿರಿಯ ಚೇತನ ಲಕ್ಷ್ಮೀ ಸೆಹಗಲ್





ಬಹುತೇಕ ದೇಶಗಳಲ್ಲೂ ವೇತನ ಅಸಮಾನತೆ ಕಂಡುಬರುತ್ತದೆ. ಅಮೇರಿಕೆಯಲ್ಲಿ ಕಂಡುಬಂದ ಆರ್ಥಿಕ ಮುಗ್ಗಟ್ಟನ್ನು ತಾನು ತಪ್ಪಿಸಿಕೊಂಡಿದ್ದೇನೆಂದು ಬಡಾಯಿ ಕೊಚ್ಚುವ ಬ್ರಿಟನ್‌ನಲ್ಲೂ ಸಹ ಅರೆಕಾಲಿಕ ಮಹಿಳಾ ನೌಕರರು ಅರೆಕಾಲಿಕ ಪುರುಷ ನೌರರಿಗಿಂತ ಶೇ.40 ರಷ್ಟು ಕಡಿಮೆ ವೇತನ ಪಡೆಯುತ್ತಾರೆ. ಪೂರ್ಣಕಾಲಿಕ ಮಹಿಳಾ ನೌಕರರ ಸಂಬಳ ಶೇ.19 ರಷ್ಟು ಕಡಿಮೆ. ಈ ವೇತನ ತಾರತಮ್ಯವನ್ನು ಪರಿಶೀಲಿಸಿ ನಿವಾರಣಾ ಕ್ರಮ ಕೈಗೊಳ್ಳಲು ಆಯೋಗವೊಂದನ್ನು ರಚಿಸಲಾಗಿದೆ.

ಈ ವರದಿಯ ಈ ಅಂಶ ಅಭಿವೃದ್ಧಿ ಹೊಂದಿದ ಎನಿಸಲ್ಪಟ್ಟ ರಾಷ್ಟ್ರಗಳಲ್ಲಿನ ಬೊಗಳೆ ಅಭಿವೃದ್ಧಿಯನ್ನು ಬಯಲಿಗೆಳೆಯುತ್ತದೆ.

'ಸಮಾಜವಾದೀ ಕ್ಯೂಬಾ ಚೈನಾಗಳಲ್ಲಿ ಮಹಿಳೆಯರಿಗೆ ಸಮಾನ ವೇತನ ಲಭ್ಯವಿದೆ. ಆದರೆ ಅದೇ ಸಂಧರ್ಭದಲ್ಲಿ ಉದರೀಕರಣಕ್ಕೆ ಚೀನಾ ತೆರೆದುಕೊಂಡ ಕಾರಣದಿಂದ ಖಾಸಗೀ ಉದ್ದಿಮೆಗಳಲ್ಲಿ ಕೆಲಸದ ಪರಿಸ್ಥಿತಿಗಳಲ್ಲಿ ಕುಸಿತವುಂಟಾಗಿದೆ. ಆದರೆ ಇಂದಿಗೂ ಸರ್ಕಾರ ಆರೋಗ್ಯ, ಮಕ್ಕಳ ಪಾಲನೆ ಶಿಕ್ಷಣ ಮುಂತಾದ ಸವಲತ್ತುಗಳನ್ನು ಸಕಾರವೇ ಭರಿಸುತ್ತದೆ- - ಇದು ಸಮಾಜವಾದೀ ರಾಷ್ಟ್ರಗಳಲ್ಲಿ ಇಂದಿಗೂ ಇರುವ ಸಕಾರಾತ್ಮಕ ಅಂಶಗಳೊಂದಿಗೆ ನಾಳೆ ಎದುರಾಗ ಬಹುದಾದ ಸಮಸ್ಯೆಗಳ ಮುನ್ಸೂಚನೆಯನ್ನೂ ನೀಡುತ್ತದೆ.

...ಷ್ಟ ದಿಕ್ಕು ತೋರಿದ

ಆಂದೋಲನಗಳನ್ನು ವಿವರಿಸುತ್ತ ಪ.ಬಂಗಾಲದಲ್ಲಿ ಸಂಪೂರ್ಣ ಮಹಿಳೆಯರೇ ಆಯ್ಕೆಗೊಂಡ ಮಹಿಳಾ ಪಂಚಾಯತ್‌ಗಳಿವೆ ಎನ್ನುವಾಗ ಅಭಿಮಾನ ತುಂಬಿ ತುಳುಕುತ್ತಿತ್ತು.

ಅಂತೆಯೇ ಮಣಿಪುರದಲ್ಲಿ ಒಂದೆಡೆ ವಿಚ್ಛಿದ್ರಕಾರಿಗಳು, ಇನ್ನೊಂದೆಡೆ ಅರೆ ಮಿಲಿಟರಿ ಪಡೆಗಳ ದೌರ್ಜನ್ಯಕ್ಕೆ ಒಳಗಾಗಿರುವ ಮಣೀಪುರದ ರಮೀಲಾ ರವರು ಹೀಗೆ ಹೋರಾಟದ ಹಲವು ಮುಖಗಳು ಇಡೀ ಸಮ್ಮೆಳನಕ್ಕೆ ನೀಡಿದ್ದು ತಾವು ದೌರ್ಜನ್ಯದ ಬಲಿಗಳಲ್ಲ. ಮೆಟ್ಟಿ ನಿಲ್ಲುವ ಕಲಿಗಳು ಎಂಬ ಸ್ಪಷ್ಟ ಸಂದೇಶ.

ಮಹಿಳೆಯರ ಸ್ಥಾನಮಾನಗಳು : ಜಾಗತೀಕರಣ ಉದಾರೀಕರಣ ಪ್ರಕ್ರಿಯೆಗಳು ಇಡೀ ವಿಶ್ವಕ್ಕೆ ತಂದಿತ್ತಿರುವ ದಾರಣ ಪರಿಸ್ಥಿತಿ. ಒಂದೆಡೆ ಪಿತೃಪ್ರಧಾನ ಮೌಲ್ಯಗಳಿಂದ ನಿರಂತರ ಹೊಡೆತ, ಇನ್ನೊಂದೆಡೆ ದಾರಿದ್ರ್ಯದ ದವಡೆಗೆ ನೂಕುತ್ತಿರುವ ಸುಧಾರಣಾ ಪ್ರಕ್ರಿಯೆ ಇವುಗಳಿಗೆ ನೇರ ಬಲಿಯಾಗುತ್ತಿರುವ ಮಹಿಳೆಯರ ಕುರಿತು ವಿಸ್ತಾರವಾದ ಚರ್ಚೆಗಾಗಿ ಮಹಿಳೆಯರ ಸ್ಥಾನಮಾನಗಳನ್ನೇ ಚರ್ಚಿಸುವ ಅಧಿವೇಶನವಾಗಿ ವರದಿಯ ಪ್ರಥಮ ಭಾಗ ಮಂಡಿತವಾಯಿತು.

ಸುಧಾರಣೆಯೆಂಬ ಬೊಗಳೆ ಮತ್ತು ಮಹಿಳೆಯರು : ಅಭಿವೃದ್ಧಿ ಹೊಂದಿರುವ

ಮಹಿಳೆಯರನ್ನು ಕಾಡುತ್ತಿರುವ ಮೂಲಭೂತವಾದದ - ಪೆಡಂಭೂತ : 'ನೇಪಾಳದಲ್ಲಿ 2003ರಲ್ಲಷ್ಟೇ ಗರ್ಭಪಾತವನ್ನು ಕಾನೂನು ಬದ್ಧಗೊಳಿಸಲಾಯಿತು. ಆದರೆ ಒಂದು ವರದಿಯ ಪ್ರಕಾರ ಅಲ್ಲಿ ಜೈಲಿನಲ್ಲಿರುವ ನೂರು ಮಹಿಳೆಯರಲ್ಲಿ ಪ್ರತಿ ಐವರಲ್ಲಿ ಒಬ್ಬಳು ಗರ್ಭಪಾತ ಮಾಡಿಸಿಕೊಂಡ ಅಪರಾಧಕ್ಕಾಗಿ ಜೈಲಿನಲ್ಲಿದ್ದಾಳೆ' - ಈ ಅಂಶ ಮೂಲಭೂತವಾದ ಅಂತರರಾಷ್ಟ್ರೀಯ ಮಟ್ಟದಲ್ಲಿ ಕೂಡ ಹೊಂದಿರುವ ತೀವ್ರತೆಯನ್ನು ದೃಢೀಕರಿಸುತ್ತದೆ. ನೇಪಾಳವೊಂದು ಹಿಂದೂ ರಾಷ್ಟ್ರವಾಗಿದ್ದು ಪರಿಸ್ಥಿತಿ ಹೀಗಿದ್ದರೆ - 'ಬಹುಸಂಖ್ಯೆಯಲ್ಲಿ ಮುಸ್ಲಿಂ ಸಮುದಾಯವನ್ನು ಹೊಂದಿರುವ ಮಾಲ್ಡೀವ್ಸ್ ಮಹಿಳೆಯರ ಹಕ್ಕುಗಳ ರಕ್ಷಣೆಗಾಗಿ ಒಂದು ತೀವ್ರವಾದ ಶಾಸನವನ್ನು ತಂದಿದೆ. ಅದು ತ್ರಿವಳಿ ತಲಾಖ್ ಹಾಗೂ ಬಹುಪತ್ನಿತ್ವದ ಆಚರಣೆಯನ್ನು ರದ್ದು ಮಾಡಿದೆ. ಇತ್ತೀಚಿಗೆ ಅಂಗೀಕರಿಸಿದ ಕಾನೂನು ವಿವಾಹ ವಿಚ್ಛೇದನೆ ಮತ್ತು ಮಕ್ಕಳ ಸುಪರ್ದಿಯಲ್ಲೂ ಸಮಾನ ಹಕ್ಕುಗಳನ್ನು ನೀಡುತ್ತದೆ'. ಹೀಗೆ ಮೂಲಭೂತವಾದಿಗಳನ್ನು ಮಟ್ಟ ಹಾಕುವ ಅಲ್ಲೊಂದಿಲ್ಲೊಂದು ಬೆಳ್ಳಿರೇಖೆಗಳ ಮಧ್ಯೆ ಕಣ್ಣಿಗೆ ರಾಚುವುದು ಗುಜರಾತಿನ ನರಮೇಧಗಳು. 'ಸಾಕ್ಷಿಸುರಕ್ಷಾ ಕಾನೂನು')Witness Protection Act) ಲಭ್ಯವಿಲ್ಲದ ಕಾರಣದಿಂದ ಬೆಸ್ಟ್ ಬೇಕರಿ ಪ್ರಕರಣದ ಸಾಕ್ಷಿಗಳು ತಿರುಗಿ ಬಿದ್ದ ಘಟನೆ ನಮ್ಮ ಮುಂದೆ ಜೀವಂತವಿದೆ. ಹಿಂದೂ ಮೂಲಭೂತವಾದದ ವಿರುದ್ಧ ನಡೆಸುತ್ತಿರುವ ತೀವ್ರ ಚಳುವಳಿ ಇನ್ನಷ್ಟು ಹೆಚ್ಚಿಸಬೇಕೆನ್ನುವ ಒತ್ತಡದೊಂದಿಗೆ ಮುಸ್ಲಿಂ ಮೂಲಭೂತವಾದದ ವಿರುದ್ಧ ಹೋರಾಟ, ಮುಸ್ಲಿಂ ಮಹಿಳೆಯರ ಹಕ್ಕುಗುಳ ರಕ್ಷಣೆಗಾಗಿ ನಿರಂತರ ಪ್ರಯತ್ನ. ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯೊಂದಿಗೆ ನಡೆಸಬೇಕಾದ ಗಂಭೀರ ಚರ್ಚೆಗಳ ಕುರಿತು ಸಮ್ಮೇಳನ ನಿರ್ದಿಷ್ಟವಾಗಿ ಚಚಿರಸಿತು.

ಜನ ವಿರೋಧಿ ಆರ್ಥಿಕ ಚೌಕಟ್ಟು : 'ನನಗೆ ಒಂದು ತಿಂಗಳೀಗೆ 27 ಸಾವಿರ ರೂಗಳ ಬಿಲ್ ನೀಡಲಾಗಿದೆ. ಇದರ ವಿರುದ್ಧ ನಾನು ಹೋರಾಟ ನಡೆಸುತ್ತಿದ್ದೇನೆ. ಈಗ ನಾನು ಕಾನೂನು ಸಮರ ನಡೆಸುತ್ತಿದ್ದೇನೆ. ಆದರೆ ಈಗ ನನ್ನ ಮನೆಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗಿದೆ. 'ಹರ್ಯಾಣದ ಪ್ರತಿನಿಧಿ'

ಇದು ಕೇವಲ ಹರ್ಯಾಣದ ಅನುಭವವಲ್ಲ. ಕರ್ನಾಟಕದಲ್ಲಿಯೂ ಇಂಥಹುದೇ ನೂರು ಅನುಭವಗಳನ್ನು ವಿವರಿಸಬಹುದು. ಆದರೆ ಸುಧಾರಣಾ ನೀತಿ ಜನಸಾಮಾನ್ಯರಿಗೆ ಇತ್ತ ಬಳುವಳಿಯೆಂಬುದಕ್ಕೆ ಒಂದು ಉದಾಹರಣೆ.

ಪಡಿತರ, ವಸತಿ, ಕುಡಿಯುವ ನೀರು, ಕೆಲಸ, ಕೂಲಿ.... ಹೀಗೆ ಸವಿಸ್ತಾರವಾಗಿ ಎಲ್ಲ ಸಮಸ್ಯೆಗಳ ಕುರಿತು ಪ್ರತಿನಿಧಿಗಳು ವರದಿಯನ್ನು ಆಧರಿಸಿ ಚರ್ಚಿಸಿದರು. ಸಮ್ಮೇಳನದಿಂದ ಸಮ್ಮೆಳನಕ್ಕೆ ವರದಿಯ ಹಲವು ಮಗ್ಗುಲುಗಳು ತೀವ್ರ ಚರ್ಚೆಗೆ, ಗಂಭೀರ ವಿಮರ್ಶೆಗೆ ಸಮ್ಮೇಳನದಿಂದ ಸಮ್ಮೇಳನಕ್ಕೆ ಗುಣಾತ್ಮಕವಾಗಿ ಬೆಳೆದ ಸಂಘಟನೆ 7ನೇ ಸಮ್ಮೇಳನದಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಹಿಳೆಯರ ಸಾಧನೆ ಮತ್ತು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಸವಿಸ್ತಾರವಗಿ ಚರ್ಚಿಸಿತು.

ಉದಾರೀಕರಣ ನೀತಿಯ ಪರಿಣಾಮ ಕೇವಲ ಆರ್ಥಿಕ ನೆಲೆಗಳಲ್ಲಿ ಮಾತ್ರವಲ್ಲದೇ ಉದಾರೀಕರಣ ನೀತಿಯ ಪರಿಣಾಮ ಕೇವಲ ಆರ್ಥಿಕ ನೆಲೆಗಳಲ್ಲಿ ಮಾತ್ರವಲ್ಲದೇ ಸಾಮಾಜಿಕ, ಸಾಂಸ್ಕೃತಿಕ, ಕೌಟುಂಬಿಕ ನೆಲೆಗಳಲ್ಲಿ ಸೃಷ್ಟಿಸಿದ ಸಮಸ್ಯೆಗಳನ್ನು ದೇಶದ ಎಲ್ಲ ರಾಜ್ಯಗಳನ್ನು ಪ್ರತಿನಿಧಿಸಿ ಬಂದ 863 ಪ್ರತಿನಿಧಿಗಳು ಚರ್ಚಿಸಿದರು.

ಲಿಂಗಾನುಪಾತ

ಕಳೆದ ಕೆಲವು ವರ್ಷಗಳಿಂದ 'ಪುತ್ರಾಪೇಕ್ಷೆಯ ಪಿಡುಗು ಸಾರ್ವತ್ರೀಕರಣಗೊಂಡ ಹಿನ್ನೆಲೆಯಲ್ಲಿ ಗಣನೀಯಾಗಿ ಕೆಳಗಿಳಿದ ಲಿಂಗಾನುಪಾತದ ಕುರಿತು ಸಮ್ಮೇಳನ ತೀವ್ರ ಕಳವಳ ವ್ಯಕ್ತಪಡಿಸಿತು. 1901ರಲ್ಲಿ ಲಿಂಗ ಪರಿಮಾಣದಲ್ಲಿದ್ದ 30 ಲಕ್ಷದ ಕೊರತೆ ಈಗ 3 ಕೋಟಿ 60 ಲಕ್ಷಕ್ಕೆ ಮುಟ್ಟಿದೆ. 2001ರ ಜನಗಣತಿಯ ಪ್ರಕಾರ ಬಾಲಲಿಂಗಾನುಪಾತದಲ್ಲಿ 0-6 ರ ವಯೋಮಾನದ ಹೆಣ್ಣು ಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆ ಯಾಗಿದ್ದು ಮುಂದಿನ ದಿನಗಳಲ್ಲಿ ಇಡೀ ದೇಶ ಎದುರಿಸಬೇಕಾದ ಅಪಾಯದ ಸೂಚನೆ ನೀಡಿದೆ.

ಈ ಅಂಶಗಳ ಕುರಿತು ಚರ್ಚಿಸಿದ ಸಮ್ಮೇಳನ ಪಂಜಾಬ್, ಹರ್ಯಾಣಗಳಲ್ಲಿ ಈಗಾಗಲೇ ಚಾಲ್ತಿಯಲ್ಲಿರುವ ಕೊಂಡು ತಂದ ಹೆಂಡತಿ (bought wives) ಯಂತಹ ಸಮಸ್ಯೆಗಳ ಕುರಿತು ಗಂಭೀರವಾಗಿ ಚರ್ಚಿಸಿತು. ಈ ಹೊಸ ಪರಂಪರೆಗೆ ಇತರ ದೂರದ ರಾಜ್ಯಗಳ ಬಡ ಹೆಣ್ಣುಮಕ್ಕಳು, ಕುಟುಂಬದವರಿಂದ 10,15 ಸಾವಿರಗಳಿಗೆ ಮಾರಲ್ಪಟ್ಟು, ಅಸಹಾಯಕ, ಮೂಕ ಪಶುಗಳಂತೆ ಬಲಿಯಾಗುತ್ತಿದ್ದಾರೆ. ಆಧುನಿಕ ಮಹಾಭಾರತದ ಪಾಂಡವ, ಪಾಂಚಾಲಿಗಳ ಪರಂಪರೆಗೆ ಇದು ಕರಾಳ ನಾಂದಿಯಾಗಲಿದೆ. ತಕ್ಷಣ ಸರ್ಕಾರ ಈ ಕುರಿತು ಎಚ್ಚೆತ್ತುಕೊಳ್ಳುವ ಅವಶ್ಯಕತೆಯನ್ನು ಸೂಚಿಸಿದ ಸಮ್ಮೇಳನ

1. ಭ್ರೂಣ ಲಿಂಗ ಪತ್ತೆಯನ್ನು ಕಡ್ಡಾಯವಾಗಿ ನಿಷೇಧಿಸುವ
2. ಪುತ್ರ ಸಂತಾನವನ್ನು ವೈಭವೀಕರಿಸುವ ಎಲ್ಲ ಪರಂಪರೆ, ಸಂಪ್ರದಾಯ, ಪ್ರವೃತ್ತಿಗಳನ್ನು ನಿಗ್ರಹಿಸುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದೆ.

ಈ ನಿಟ್ಟಿನಲ್ಲಿ ಚೈನಾ ದೇಶದ ಮಾದರಿಯನ್ನಿಲ್ಲಿ ಉದಾಹರಿಸಬಹುದು. ಜನಸಂಖ್ಯಾ ನಿಗ್ರಹಕ್ಕಾಗಿ

ಪುಟ 8 ಕ್ಕೆ

ಮತೀಯವಾದ ನೀಡುತ್ತಿರುವ ಭಯೋತ್ಪಾದನೆಯ ಬಗ್ಗೆ ಗಂಭೀರ ಚರ್ಚೆ ನಡೆಸಿ. ಕರ್ನಾಟಕದಲ್ಲಿಯೂ ನೆಲೆಯಾಗುತ್ತಿರುವ ಹಿಂದೂ ಮೂಲಭೂತವಾದದ ಪ್ರತಿ ಕಾರ್ಯಾಚರಣೆಗೆ ಯೋಜನೆ ರೂಪಿಸುತ್ತಿದ್ದ ಕರ್ನಾಟಕದ ಪ್ರತಿನಿಧಿಗಳು ಸಂಘ ಪರಿವಾರದ - ಕ್ರೂರ ಮುಖಗಳಲ್ಲೊಂದಾದ ವಿ.ಎಚ್.ಪಿ.ಯಿಂದ ನೇರ ಧಾಳಿಯನ್ನು ಸಮ್ಮೇಳನದ ಗುಂಗಿನಲ್ಲಿರುವಾಗಲೇ ಎದುರಿಸಬೇಕಾಗಿ ಬಂತು. ಕೊಲೆಗಾರರನೆಂದು ಆಪಾದಿತರಾಗಿ ಬಂಧಿಸಲ್ಪಟ್ಟ ಕಂಚಿ ಶಂಕರಾಚಾರ್ಯರ ಬಂಧನ ಪ್ರತಿಭಟಿಸಿ ವಿ.ಎಚ್.ಪಿ. ಕರೆ ನೀಡಿದ ಬಂದ್‌ಗಾಗಿ ನಡೆಸುತ್ತಿದ್ದ ರಾಸ್ತ ರೋಖೋ ಸಂದರ್ಭದಲ್ಲಿ ಕೊನಾರ್ಕ್‌ನಿಂದ ಭುವನೇಶ್ವರಕ್ಕೆ ಬರುವ ಮಾರ್ಗದಲ್ಲಿ ಕರ್ನಾಟಕದ ಪ್ರತಿನಿಧಿಗಳು ಪ್ರಯಾಣಿಸುತ್ತಿದ್ದ ಕಾರನ್ನು ಅಡ್ಡಗಟ್ಟಿ ಪೆಟ್ರೋಲ್ ಸುರಿದು ಬೆಂಕಿ ಹಚ್ಚುವ ಬೆದರಿಕೆಗೆ ಪ್ರತಿರೋಧ ಒಡ್ಡಿ ಪಾರಾಗಿ ಬಂದ ಘಟನೆ - 7ನೇ ರಾಷ್ಟ್ರೀಯ ಸಮ್ಮೇಳನ ಅವಿಸ್ಮರಣೀಯಗೊಳಿಸಿತು.



ಕರ್ನಾಟಕದ ಪ್ರತಿನಿಧಿ ಸಂಗಾತಿಗಳು

ನೂತನ ಸಮಿತಿ



ಸುಭಾಷಿಣಿ ಅಲಿ



ಸುಧಾ

ಹಲವು ಹತ್ತು ಸಮಸ್ಯೆಗಳ ಕುರಿತು ಸವಿಸ್ತಾರವಾದ ಚರ್ಚೆ ನಡೆಸಿ ತೀರ್ಮಾನಗಳನ್ನು ಕೈಗೊಂಡ ಸಮ್ಮೇಳನ ನಾಯಕತ್ವದ ನಿರಂತರತೆಯನ್ನು ಉಳಿಸಿಕೊಳ್ಳುತ್ತದೆ. ಹೊಸ ನಾಯಕರನ್ನೂ ಆಯ್ಕೆ ಮಾಡಿದೆ. ಸಂಘಟನೆಯ ಚಲನಶೀಲತೆಯನ್ನು ದೃಢ ಪಡಿಸಿದೆ. ಸಮ್ಮೇಳನ ಮುಂದಿನ ಅವಧಿಗೆ ರಾಷ್ಟ್ರೀಯ ಕಾರ್ಯದರ್ಶಿಗಳಾಗಿದ್ದ ತಮಿಳ್ನಾಡಿನ ಸುಧಾ ಸುಂದರ ರಾಮನ್‌ರವರನ್ನು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳನ್ನಾಗಿ ಆಯ್ಕೆ ಮಾಡಿದೆ. ಸುಭಾಷಿಣಿ ಅಲಿಯವರು ಅಧ್ಯಕ್ಷರಾಗಿಯೂ ಶ್ಯಾಮಲೀ ಗುಪ್ತ ಕಾರ್ಯಾಧ್ಯಕ್ಷರಾಗಿಯೂ, ಹಿಂದಿನ ಅವಧಿಯ ಪ್ರಧಾನ ಕಾರ್ಯದರ್ಶಿ ಬೃಂದಾ ಕಾರಟ್ ರವರನ್ನೂ ಸೇರಿದಂತೆ 9 ಜನ ಉಪಾಧ್ಯಕ್ಷರುಗಳು, 6 ಕಾರ್ಯದರ್ಶಿಗಳು, ಹೊಸದಾಗಿ ನಾಯಕತ್ವಕ್ಕೆ ಮಾನ್ಯತೆ ನೀಡುವ ನಿಟ್ಟಿನ ಹೆಜ್ಜೆಯಾಗಿ ಸೇರ್ಪಡೆಯಾದ 5 ಸಹ ಕಾರ್ಯದರ್ಶಿಗಳು - ಸಮ್ಮೇಳನದಲ್ಲಿ ಆಯ್ಕೆಯಾದರು. ಸಂಘಟನೆಯ ಸಂಸ್ಥಾಪಕ ಸದಸ್ಯರುಗಳಾದ 80, 90 ವರ್ಷಗಳ ವಯೋಮಾನದ ಕ್ಯಾಪ್ಟನ್ ಸೆಹಗಲ್, ಅಹಲ್ಯ ರಂಗ್ನೇಕರ್, ಪಾಪಾ ಉಮಾನಾಥ್, ಕನಕ ಮುಖರ್ಜಿ, ಮಂಜರಿ ಗುಪ್ತ, ಅಂಜಲಿ ದೇಬ್ ಬರ್ಮನ್ ರವರುಗಳು ಸಮ್ಮೇಳನದಲ್ಲಿ ಪಾಲ್ಗೊಂಡು ತಮ್ಮ ದಣಿವರಿಯದ, ಸೆಲೆ ಬತ್ತದ ಸ್ಪೂರ್ತಿಯ ಸಂದೇಶಗಳನ್ನು ನೀಡಿದರು.

ಕಾನೂನು ಜಾರಿಗೆ ಸಂಘ ಪರಿವಾರದ ತಿರಸ್ಕಾರ

ಜನರಿಂದ ನೀರಸ ಪ್ರತಿಕ್ರಿಯೆ ಬಂದಾಗ್ಯೂ ಕೂಡಾ, ತನ್ನ ರಾಜಕೀಯ ಮುಖವಾದ ಬಿಜೆಪಿಯೂ ಸೇರಿದಂತೆ, ಆರ್‌ಎಸ್‌ಎಸ್‌ನ ಎಲ್ಲಾ ಸಂಘಟನೆಗಳು ಕಂಚಿಮಠದ ಮುಖ್ಯಸ್ಥರಾದ ಜಯೇಂದ್ರ ಸರಸ್ವತಿಯವರ ಬಂಧನವನ್ನು ವಿರೋಧಿಸಿ ರಾಷ್ಟ್ರವ್ಯಾಪಿ ಪ್ರತಿಭಟನೆಯನ್ನು ನಡೆಸುವುದಾಗಿ ಘೋಷಿಸಿವೆ. ಬಿಜೆಪಿಯ ಮೂವರು ಉನ್ನತ ನಾಯಕರುಗಳು ಬಂಧನವನ್ನು ವಿರೋಧಿಸಿ ರಾಜಧಾನಿಯಲ್ಲಿ ಇಡೀ ದಿನ ಧರಣಿಯನ್ನು ನಡೆಸಿದರು.

ಬರ್ಬರ ಹತ್ಯೆಯ ಬಲಿಷ್ಠ ಸಾಕ್ಷಿಯಾಗಿ ರೂಪುಗೊಂಡ ಈ ಬಂಧನವು ಸ್ಪಷ್ಟವಾಗಿ, ಆರ್‌ಎಸ್‌ಎಸ್/ ಬಿಜೆಪಿಗೆ ಯಾವುದೇ ಪರಿಣಾಮವಾಗಲಿಲ್ಲ. ದೇಶದ ಕಾನೂನು ಅವರು ಹೊಂದಿರುವ ಸ್ಥಾನಮಾನಕ್ಕೆ ಸಂಬಂಧವಿಲ್ಲದೆ, ಎಲ್ಲರಿಗೂ ಸಮನಾಗಿ ಅನ್ವಯವಾಗುತ್ತದೆ ಎಂಬುದು ಕೂಡಾ ಈ ಖಾವಿ ಪಡೆಗಳಿಗೆ ಹೊಳೆಯಲಿಲ್ಲ!. ಯಾರೊಬ್ಬರೂ ಕಾನೂನಿಗಿಂತ ಮಿಗಿಲಲ್ಲ ಎಂಬುದು ಯಾವುದೇ ಪ್ರಜಾಪ್ರಭುತ್ವ ನಾಗರಿಕ ಸಮಾಜದಲ್ಲಿನ ಪ್ರಾಥಮಿಕ ತತ್ವವಾಗಿರುತ್ತದೆ. ಕೋಮುವಾದ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಉದ್ದೇಶದಿಂದ ಏಕರೂಪ ನಾಗರಿಕ ಸಂಹಿತೆ ಬೇಕೆಂದು ಬೊಬ್ಬಿಡುತ್ತಿರುವವರು ಜಾಗತಿಕ ಅಪರಾಧ ಸಂಹಿತೆಯನ್ನು ಸ್ವೀಕರಿಸಲು ಕೂಡಾ ತಯಾರಿಲ್ಲ.

ಆದರೆ ಇದು ಆಶ್ಚರ್ಯಕರವಾಗಿ ಕಂಡುಬರುವುದಿಲ್ಲ. ಏಕೆಂದರೆ ಆರ್‌ಎಸ್‌ಎಸ್ ಯಾವತ್ತೂ ಭಾರತದ - ಜಾತ್ಯತೀತ ಪ್ರಜಾಪ್ರಭುತ್ವದ ಗುಣವನ್ನು ಒಪ್ಪಿಕೊಂಡಿಲ್ಲ. ಇದನ್ನನುಸರಿಸಿ, ಗೋಲ್ವಾಲ್ಕರ್ ಒಮ್ಮೆ ಭಾರತದ ಸಂವಿಧಾನವು 'ಹಿಂದುಯೇತರ' ಎಂದು ಬಣ್ಣಿಸಿದ್ದರು. ಆಧುನಿಕ ಭಾರತದ ಜಾತ್ಯತೀತ ಪ್ರಜಾಪ್ರಭುತ್ವವನ್ನು ತಮ್ಮ ವ್ಯಾಖ್ಯಾನದ, ಯಾರೂ ಒಪ್ಪಲಾಗದ 'ಹಿಂದು ರಾಷ್ಟ್ರ'ವಾಗಿ ಪರಿವರ್ತಿಸುವುದೇ ಆರ್‌ಎಸ್‌ಎಸ್‌ನ ಅಜೆಂಡಾವಾಗಿರುತ್ತದೆ.

ಇಂತಹ ಸೈದ್ಧಾಂತಿಕ ದೃಷ್ಟಿಕೋನದಿಂದ ನೋಡಲಾಗಿ, 'ಧರ್ಮದ ಭಾವನೆಗಳ' ಹೆಸರಿನಲ್ಲಿ ಕ್ರೂರ ಅಪರಾಧಗಳ ಅಪರಾಧಿಗಳನ್ನು ರಕ್ಷಿಸುವುದು ಆರ್‌ಎಸ್‌ಎಸ್‌ಗೆ ಕೇವಲ ಸರ್ವೇಸಾಮಾನ್ಯವಾಗಿದೆ. ಸ್ವತಂತ್ರ ಭಾರತವು ಹಿಂದೆಂದೂ ಕಂಡರಿಯದ ಗುಜರಾತಿನಲ್ಲಿ ನಡೆದ ಅತ್ಯಂತ ಹೀನವಾದ ಕೋಮುಗಲಭೆಗೆ ಕಾರಣೀಭೂತರಾದವರನ್ನು ರಕ್ಷಿಸಲು ಇವರು ಅತ್ಯಂತ ವ್ಯವಸ್ಥಿತವಾದ ರೀತಿಯಲ್ಲಿ ಪ್ರಯತ್ನಿಸುತ್ತಿದ್ದಾರೆ.

ಭಾರತದ ಜಾತ್ಯತೀತ ಪ್ರಜಾಪ್ರಭುತ್ವ ಸಂವಿಧಾನದ ತಿರಸ್ಕಾರವೇ, ಆರ್‌ಎಸ್‌ಎಸ್/ ಬಿಜೆಪಿಯ ಬಾಬ್ರಿ ಮಸೀದಿಯ ಧ್ವಂಸವನ್ನು ನಡೆಸಲು ಕಾರಣವಾಯಿತು. ಈ ಸಂದರ್ಭದಲ್ಲಿ ನ್ಯಾಯಾಲಯಗಳು ಮತ್ತು ದೇಶದ ಕಾನೂನು ಕೂಡಾ 'ಧಾರ್ಮಿಕ ನಂಬಿಕೆ'ಯ ವಿಷಯಗಳಲ್ಲಿ ಅಡ್ಡಿಪಡಿಸಬಾರದು ಎಂಬ ತಮ್ಮ ನಿಲುವನ್ನು ಪ್ರತಿಪಾದಿಸಿದರು. ಇದು ರಾಜಕೀಯ ಉದ್ದೇಶಗಳಿಗಾಗಿ ಧರ್ಮವನ್ನು ದುರುಪಯೋಗಡಿಸುವುದಲ್ಲದೆ ಮತ್ತೇನೂ ಅಲ್ಲ. ದೇಶದ ಕಾನೂನಿನ ನಿಂದನೆ ಮತ್ತು ತಿರಸ್ಕಾರವೇ ಆರ್‌ಎಸ್‌ಎಸ್/ ಬಿಜೆಪಿಯ ಇತ್ತೀಚಿಗಿನ ನಿಲುವಿನಲ್ಲಿ ಮತ್ತೊಮ್ಮೆ ಪ್ರತಿಬಿಂಬಿತವಾಗುತ್ತಿದೆ.

ಆರ್‌ಎಸ್‌ಎಸ್ / ಬಿಜೆಪಿಯ ಈ ನಿಲುವು ಕ್ರೂರವಾದ ಕೊಲೆಯ ಆಪಾದಿತರನ್ನು ರಕ್ಷಿಸುವಲ್ಲಿ ಪ್ರಮುಖವಾಗುತ್ತದೆ. ಈ ಮಟ್ಟದ ಅಪರಾಧವು ತನಿಖೆಯಿಲ್ಲದಂತಾಗಬೇಕೆ? ದೇಶದ ಕಾನೂನು, ತನ್ನ ನೆಲೆಯಲ್ಲಿ ನ್ಯಾಯವನ್ನು ಎತ್ತಿಹಿಡಿಯಬಾರದೇ? ಈ ಪ್ರಶ್ನೆಗಳಿಗೆ ಪ್ರತಿಕೂಲವಾಗಿ ಉತ್ತರಿಸುತ್ತಾ, ಆರ್‌ಎಸ್‌ಎಸ್/ ಬಿಜೆಪಿಯು ತಮ್ಮನ್ನು ತಾವೇ ದೇಶದ ಕಾನೂನು ಮತ್ತು ನ್ಯಾಯಾಂಗ ವ್ಯವಸ್ಥೆಯ ವಿರುದ್ಧ ನಿಲ್ಲಿಸುತ್ತಿದ್ದಾರೆ. ಅವರು ಮತ್ತೊಮ್ಮೆ ತಮ್ಮ ನಿಜ ಬಣ್ಣಗಳೊಂದಿಗೆ ಕಂಗೊಳಿಸುತ್ತಿದ್ದಾರೆ. ತಮ್ಮ ಕೋಮುವಾದಿ ಫ್ಯಾಸಿಸ್ಟ್ ಅಜೆಂಡಾವನ್ನು ಮುಂದುವರಿಸುವ ಮೂಲಕ ಅವರು, ಭಾರತದ ಜಾತ್ಯತೀತ ಪ್ರಜಾಸತ್ತೆಯನ್ನು ನಾಶಪಡಿಸಲು ಕಂಕಣಬದ್ಧರಾಗಿರುತ್ತಾರೆ.



ಭಾರತದ ಉಳಿವಿಗಾಗಿ, ಸಾಧ್ಯವಾದಷ್ಟು ಮಟ್ಟಿಗೆ ಈ ಶಕ್ತಿಗಳನ್ನು, ಸರ್ಕಾರದ ಹತೋಟಿ ಮತ್ತು ಆಡಳಿತದಿಂದ ದೂರವಿಡಬೇಕು. ಕಾನೂನಿನ ದೃಷ್ಟಿಯಲ್ಲಿ ಪ್ರತಿಯೊಬ್ಬರೂ ಸಮಾನರು ಎಂಬ ನಿಜವಾದ ನ್ಯಾಯದ ಜಾಗತಿಕ ತತ್ವವನ್ನು ನಿರ್ದಾಕ್ಷಿಣ್ಯವಾಗಿ ಜಾರಿಗೊಳಿಸಬೇಕು. ದೇಶದ ಕಾನೂನು ತನ್ನ ನಿಜ ಸ್ಥಿತಿಯನ್ನು ಪಡೆದುಕೊಳ್ಳುವಂತೆ ಸಹಕರಿಸಬೇಕು. ಯಾವುದೇ ಹಸ್ತಕ್ಷೇಪ ಅಥವಾ ಒತ್ತಡವನ್ನು ಸಹಿಸಬಾರದು.

ಮಹಿಳಾ ಚಳುವಳಿಗೆ ಸ್ಪಷ್ಟ ದಿಕ್ಕು ತೋರಿದ ಸಮ್ಮೇಳನ

ಪುಟ 7 ರಿಂದ

ತಂದ 'ಒಂದು ಮಗು' ಪಾಲಿಸಿ ಮತ್ತು ಬೆಳೆದ ಪುತ್ರ ಸಂತಾನದ ಪಿಡುಗಿನಿಂದಾಗಿ ಹೆಚ್ಚಿದ ಲಿಂಗಾನುಪಾತದ ಅಂತರವನ್ನು ಗಂಭೀರವಾಗಿ ಪರಿಗಣಿಸಿ 'ಒಂದು ಮಗು' ಕಡ್ಡಾಯವನ್ನು ತೆಗೆದು ಹಾಕಿದ ಸರ್ಕಾರ ಹೆಣ್ಣು ಶಿಶುವಿನ ಪಾಲಕರಿಗೆ ಹಲವು ಪ್ರೋತ್ಸಾಹಕ ಯೋಜನೆಗಳನ್ನು ಜಾರಿಗೆ ತಂದಿದೆ. 2010ರ ವೇಳೆಗೆ ಲಿಂಗಾನುಪಾತವನ್ನು ಸರಿಪಡಿಸುವ ಭರವಸೆ ಆ ಸರ್ಕಾರದ್ದು. ಭಾರತದಲ್ಲಿಯೂ ಐ.ಸಿ.ಡಿ.ಎಸ್. ಯೋಜನೆಯಲ್ಲಿ 'ಬಾಲಿಕಾ ಸಮೃದ್ಧಿ ಯೋಜನೆ' ಎಂಬ ಹೆಸರಿನ ಪ್ರೋತ್ಸಾಹಕ ಯೋಜನೆ ಇದ್ದರೂ ಅದನ್ನು ಪಡೆಯಲು ಅನುಸರಿಸಬೇಕಾದ ಕಷ್ಟಕರ ವಿಧಾನಗಳಿಂದಾಗಿ ಜನಪ್ರಿಯವಾಗಲಿಲ್ಲ. ಸ್ತ್ರೀ ಭ್ರೂಣ ಪರೀಕ್ಷಾ ನಿಷೇಧ ಕಾನೂನು ಜಾರಿಯಲ್ಲಿದ್ದರೂ ಇದುವರೆಗೂ ಕ್ಲಿನಿಕ್‌ಗಳು ನೋಂದಣಿಯಾಗಿಲ್ಲವೆಂಬ ಅಪರಾಧಗಳು ಪತ್ತೆಯಾಗಿವೆಯೇ ಹೊರತು ಭ್ರೂಣ ಪರೀಕ್ಷೆ ಮತ್ತು ಗರ್ಭಪಾತ ನಡೆಸಿದ ಅಪರಾಧಕ್ಕೆ ಯಾರಿಗೂ ಶಿಕ್ಷೆಯಾಗಿಲ್ಲ. ಆದರೆ ಪ್ರತಿನಿತ್ಯ ಭೂಮಿಗೆ ಕಣ್ಣು ತೆರೆಯುವ ಮುನ್ನವೇ ಜೀವ ಕಳೆದುಕೊಳ್ಳುತ್ತಿರುವ ಸ್ತ್ರೀಭ್ರೂಣಗಳ ಸಂಖ್ಯೆ ಲಕ್ಷಾಂತರ ಎಂಬುದು ನಿರ್ವಿವಾದವಾದ ವಿಷಯ. ಸಂಘ ಪರಿವಾರ ನಿರ್ದೇಶಿತ ಮನುವಾದೀ ಸೂತ್ರಗಳ ಪರಿಪಾಲಕರಾದ ಬಿ.ಜೆ.ಪಿ. ಮತ್ತದರ ಮಿತ್ರ ಕೂಟದ ಆಳ್ವಿಕೆಯ ಕಾಲದಲ್ಲಿ ಅದು ಬಿತ್ತಿದ ಪಾರಂಪರಿಕ ಪುತ್ರ ಸಂತಾನ ವೈಭವೀಕರಣ ಉರಿಯುವ ಬೆಂಕಿಗೆ ತುಪ್ಪ ಸುರಿದಂತಾಯಿತು. ಸ್ತ್ರೀ ಭ್ರೂಣ ಹತ್ಯೆಯ ಕುರಿತು ಚರ್ಚಿಸುವಾಗೆಲ್ಲ ಪ್ರಕಟವಾಗುವ ಅಂಶ 20 ವರ್ಷಗಳ ನಂತರ ಕೊಡಬೇಕಾದ ವರದಕ್ಷಿಣೆಯ ಕುರಿತು ಪ್ರಸ್ತಾಪವಾಗುತ್ತದೆ. ವರದಕ್ಷಿಣೆ - ಇಂದು ಹೊಸ ಆಯಾಮಗಳನ್ನು ಪಡೆಯುತ್ತಿದ್ದು ಹಿಂದೆ ಇದ್ದಂತೆ ಮದುವೆಯ ಸಂದರ್ಭಕ್ಕೆ ಸೀಮಿತವಾಗಿ ಉಳಿಯದೇ - ಪ್ರತಿಹಂತದ, ಪ್ರತಿ ನಿತ್ಯದ ಬೇಡಿಕೆಗಳಾಗಿ ರೂಪುಗೊಳ್ಳುತ್ತಿವೆ.

ಸಮ್ಮೇಳನ ಗುರುತಿಸಿದ ಹಲವು ವಿಷಯಗಳಲ್ಲಿ ಇನ್ನೊಂದು ಪ್ರಮುಖ ಅಂಶವೆಂದರೆ - **ವಲಸೆ ಸಮಸ್ಯೆ** : ಜಾಗತೀಕರಣ ನೀತಿಯಿಂದಾಗಿ ಒಂದೆಡೆ, ಪ್ರಾಕೃತಿಕ ವಿಕೋಪವಾದ ಭೀಕರ ಬರಗಾಲ, ಇನ್ನೊಂದೆಡೆ ಮಹಿಳೆಯರಿಗೆ ನೀಡಿದ ಶಾಪ-ವಲಸೆ ಸಮಸ್ಯೆ. ವಿಶ್ವವ್ಯಾಪಾರ ಸಂಸ್ಥೆಗೆ ಮಣಿ ಹಾಕಿದ ನೀತಿಯಿಂದಾಗಿ ದೇಶೀಯ ಕೃಷಿ ಕ್ಷೇತ್ರ ತೀವ್ರ ಬಿಕ್ಕಟ್ಟಿಗೆ ಸಿಲುಕಿದೆ. ಅಂತೆಯೇ ತೀವ್ರ ಬರಗಾಲದಿಂದ ಜನ ತತ್ತರಿಸುತ್ತಿರುವಾಗ - ಜನರಿಗೆ ನೀಡಬೇಕಾದ ಪ್ರಾಮಾಣಿಕ ಸಹಾಯ ಹಸ್ತಕ್ಕೆ ಸರ್ಕಾರಗಳು ಮುಂದಾಗಲಿಲ್ಲ. ಪರಿಣಾಮ ಇಡೀ ಗ್ರಾಮವೇ ಕೆಲವೊಮ್ಮೆ ಕುಟುಂಬದ ಪುರುಷರು ಕೆಲಸ ಅರಸಿ ಹೀಗೆ ಊರು ಬಿಟ್ಟು ವಲಸೆಯಾಗಬೇಕಾದ ಒತ್ತಡ ಗ್ರಾಮೀಣ ಜನತೆಯ ಮೇಲೆರಗಿತು. ಹೀಗೆ ಬಂದ ಕೋಟಿಗ್ಗಲೇ ವಲಸಿಗರ ಕುರಿತು ಯಾವ ಅಂಕಿಸಂಖ್ಯೆಗಳೂ ಲಭ್ಯವಿಲ್ಲ. ವಲಸಿಗರಾದ ಕಾರಣ ನಾಗರಿಕ ಸಮುದಾಯಕ್ಕೆ ಸಿಗುವ - ಓಟು, ರೇಷನ್ ಕಾರ್ಡ್, ವಸತಿ, ಶೌಚಾಲಯ, ಶಿಕ್ಷಣ, ಆರೋಗ್ಯಗಳಂತಹ ಯಾವ ಮೂಲಭೂತ ಸೌಕರ್ಯಗಳು ಸಿಗದ ಪರಿಸ್ಥಿತಿ ಇದೆ. ಅದೇ ವೇಳೆಗೆ ಕೆಲಸ ಅರಸಿ ಬಂದು ನಗರಗಳ ಬೀದಿಗಳಲ್ಲಿ ಬದುಕುವ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳಗಳು, ಕನಿಷ್ಠ ಕೂಲಿಗಿಂತ ಎಷ್ಟೋ ಪಟ್ಟು ಕಡಿಮೆ ಕೂಲಿಗೆ ಕೆಲಸ ಮಾಡಬೇಕಾದ ಪರಿಸ್ಥಿತಿಗಳು ಹೆಚ್ಚುತ್ತಿವೆ. ಗ್ರಾಮಗಳಲ್ಲಿಯೇ ನೆಲೆಸಿ ದುರ್ಭರ ಜೀವನವನ್ನು ನಡೆಸುತ್ತಿರುವ ದಲಿತ, ಬಡ ಮಹಿಳೆಯರ ಮೇಲೆ ಜಮೀನ್ದಾರರ ದೌರ್ಜನ್ಯಗಳು ಮೇರೆ ಮೀರುತ್ತಿರುವ ದಾರುಣ ಘಟನೆಗಳು ಸಮ್ಮೇಳನದಲ್ಲಿ ಬಿಚ್ಚಿಕೊಂಡವು. ಆದರೆ ಈ ಸಮಸ್ಯೆಗಳ ಕುರಿತು ರಾಷ್ಟ್ರೀಯ ಆರ್ಥಿಕ ನೀತಿಗಳಲ್ಲಿ ಚರ್ಚೆಗಳೇ ಆಗದಿರುವುದನ್ನು ಸಮ್ಮೇಳನ ಗಂಭೀರವಾಗಿ ಗುರುತಿಸಿತು.

ಅಂತೆಯೇ ಆಹಾರ ಮತ್ತು ಕೆಲಸದ ಹಕ್ಕಿನ ಸಮಸ್ಯೆಗೂ ವಲಸೆ ಸಮಸ್ಯೆಗೂ ಇರುವ ನೇರ ಅಂತರ್ ಸಂಬಂಧಗಳನ್ನು ಗುರುತಿಸಿ ಸರ್ಕಾರ.

1. ಜನರು ಹಸಿವಿನಿಂದ ಸಾಯುತ್ತಿರುವಾಗ ಗೋದಾಮುಗಳಲ್ಲಿ ಧಾನ್ಯಗಳನ್ನಿಟ್ಟು ಹುಳು ಹಿಡಿಸಿ, ಅದರ ರಕ್ಷಣೆಗೆ ಕೋಟ್ಯಾಂತರ ರೂಪಾಯಿ ಜನರ ತೆರಿಗೆ ಹಣ ವ್ಯಯಿಸುವ ಬದಲು ಸಾರ್ವಜನಿಕ ವಿತರಣಾ ವ್ಯವಸ್ಥೆ ಮೂಲಕ ಎಲ್ಲರಿಗೂ ಪಡಿತರ ನೀಡಬೇಕು.
2. ಯು.ಪಿ.ಎ. ಸರ್ಕಾರ ತನ್ನ ಕನಿಷ್ಠ ಸಾಮಾನ್ಯ ಕಾರ್ಯಕ್ರಮದಲ್ಲಿ ಪ್ರಕಟಿಸಿದಂತೆ ಕನಿಷ್ಠ ನೂರು ದಿನಗಳ 'ರಾಷ್ಟ್ರೀಯ ಉದ್ಯೋಗ ಖಾತರಿ ಕಾಯ್ದೆ'ಯನ್ನು ಜಾರಿಗೆ ತರಬೇಕು. ಹಾಗೆ ತರುವಾಗ ಕುಟುಂಬದ ಒಬ್ಬರಿಗ ಎನ್ನುವ ಬದಲು ಎಲ್ಲ ವಯಸ್ಕರಿಗೆ ಎಂದೂ ಮತ್ತು ಯೋಜನಾ ಆಯೋಗದ ನಿರ್ದೇಶನದಂತೆ ಶೇ. 40 ಮಹಿಳೆಯರಿಗೆ ಕಡ್ಡಾಯವಾಗಿ ಮೀಸಲಿಡುವ ಅಂಶಗಳನ್ನು ಅಳವಡಿಸಿಕೊಳ್ಳಬೇಕು. [illegible]



ಕುರಿತಂತೆ ಯಾವುದೇ ಗೊಂದಲವಿಲ್ಲದೇ ಕೇಂದ್ರ ಸರ್ಕಾರವೇ ವಹಿಸಿಕೊಳ್ಳಬೇಕು. ಈಗಿನ ಅತ್ಯಂತ ಬಡ 150 ಜಿಲ್ಲೆಗಳೆಂಬ ಅಂಶವನ್ನು ತೆಗೆದು ಎಲ್ಲ ರಾಜ್ಯಗಳಿಗೂ ವಿಸ್ತರಿಸಲು ತಕ್ಷಣ ಸರ್ಕಾರ ಮುಂದಾಗಬೇಕು. ಈ ಅಂಶಗಳನ್ನು ಒತ್ತಾಯಿಸಿ 'ಡಿಸೆಂಬರ್ 10 ವಿಶ್ವ ಮಾನವ ಹಕ್ಕುಗಳ ದಿನವನ್ನು 'ರಾಷ್ಟ್ರೀಯ ಉದ್ಯೋಗ ಖಾತರಿ ವಿಧೇ[illegible] ಜಾರಿಗೆ ಒತ್ತಾಯಿಸುವ ದಿನವನ್ನಾಗಿ ರಾಷ್ಟ್ರ[illegible] ಮಟ್ಟದಲ್ಲಿ ಆಚರಿಸಲು ಸಮ್ಮೇಳನ ಕರೆ ನೀಡಿದೆ.

ದೇಶದಲ್ಲಿ ಕೋಮುವಾದಕ್ಕೆ ಚರಮ ಗೀ[illegible] ಬರೆಯುವ-ಜನರ ಬದುಕಿಗೆ ಹೊಸ ಹಾ[illegible] ಬರೆಯುವ, ಎಲ್ಲ ದೌರ್ಜನ್ಯ, ದಬ್ಬಾಳಿಕೆಗಳನ್ನು ಮೆಟ್ಟಿನಿಲುವ ಛಲ, ಉತ್ಸಾಹದೊಂದಿಗೆ [illegible]

ಬೆಳ್ಳಿಹಬ್ಬಕ್ಕೆ ಯುವಜನ ಚಳುವಳಿಯ ಪಾದಾರ್ಪಣೆ

ಪ್ರಧಾನಿಗೆ ಆರು ಅಂಶಗಳ ಬೇಡಿಕೆ ಮಂಡನೆ

ರವ-ರವ ಸಪ್ಪಳದೊಂದಿಗೆ ರೆಕ್ಕೆ ಬಿಚ್ಚಿದ 25 ಪಾರಿವಾಳಗಳು ಬಾನಿಗೆ ಜಿಗಿದವು, ಹಸಿರು ಮುತ್ತಿದ್ದ ಮೈದಾನ ದಗಲವು ಸುತ್ತಿ ಎಲ್ಲೆಯಿರದ ಬಾನಲ್ಲಿ ಮರೆಯಾದವು. ಇಡೀ ಭಾರತವೆ ಮೈದಳೆದಂತೆ ರಾಷ್ಟ್ರದ ಉದ್ದಗಲದಿಂದ ಆಗಮಿಸಿದ್ದ ಸಹಸ್ರಾರು ಯುವಜನರ ಮನದಳದ ಧನಿಯಾದ 'ರೆಕ್ಕೆ ಬಿಚ್ಚಿ ಪಾರಿವಾಳಗಳೆ ಯುದ್ಧನಾಡಿನಲ್ಲಿ....' ಎಂಬುದರ ಧ್ಯೋತಕವಗಿ ನವದೆಹಲಿಯ ತಲಕೋಟಾರಾ ಮೈದಾನದಲ್ಲಿ ನಿರ್ಮಿಸಲಾಗಿದ್ದ ಡಿವೈಎಫ್ಐ ಬೆಳ್ಳಿಹಬ್ಬದ ಬೃಹತ್ ರ್ಯಾಲಿಯ ವೇದಿಕೆಯಿಂದ ಹರಿ ಬಿಡಲಾದ ಪಾರಿವಾಳಗಳಿವು.

ಸರಿಯಾಗಿ ನವೆಂಬರ್ 3 ರಂದೇ 24 ವರ್ಷಗಳ ಹಿಂದೆ ಪಂಜಾಬ್‌ನ ಲೂದಿಯಾನಾದಲ್ಲಿ ನಡೆದ ಪ್ರಥಮ ಸಮ್ಮೇಳನದಲ್ಲಿ ಡಿವೈಎಫ್ಐ ಆರಂಭವಾಗಿತ್ತು. ತನ್ನ ಬೆಳ್ಳಿಹಬ್ಬದ ಉದ್ಘಾಟನಾ ಬಹಿರಂಗ ಸಭೆ ನವೆಂಬರ್ 3 ರಂದು ನವದೆಹಲಿಯಲ್ಲಿ ನಡೆಯಿತು. ಸಭೆಗೆ ಮುನ್ನ ಅಂಬೇಡ್ಕರ್ ಭವನ್‌ದಿಂದ ನವದೆಹಲಿಯ ಜನನಿಬಿಡ ರಸ್ತೆಗಳ ಮೂಲಕ ಸಾಗಿದ ಬೃಹತ್ ರ್ಯಾಲಿ ತಲಕೋಟಾರಾ ಮೈದಾನದ ಬಹಿರಂಗ ಸಭೆಯಲ್ಲಿ ಸೇರಿತು. ರಾಷ್ಟ್ರದ ವಿವಿಧ ರಾಜ್ಯಗಳಿಂದ ನವೆಂಬರ್ 2 ರ ಮುಂಜಾನೆಯ ನವದೆಹಲಿಗೆ ಬರಲಾರಂಭಿಸಿದ್ದ ಯುವಜನರು, ನವೆಂಬರ್ 3ರ ಮಧ್ಯಾಹ್ನದವರೆಗೆ ಬರುತ್ತಲೆ ಇದ್ದರು.

ಸಂತೋಷ್ ಟ್ರೋಫಿ ಗೆದ್ದ ತಂಡದ ನಾಯಕ ಇಗ್ನೆಶಿಯಸ್ ಸಿಲ್ವೆಸ್ಟರ್, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಅಧ್ಯಕ್ಷೆ ಸುಭಾಶಿನಿ ಅಲಿ, ಪ್ರಧಾನ ಕಾರ್ಯದಶಿರ ಬೃಂದಾ ಕಾರಟ್‌ರವನ್ನು ಸನ್ಮಾನಿಸಲಾಯಿತು.

ಬಹಿರಂಗ ಸಭೆಯ ಅಧ್ಯಕ್ಷತೆ ವಹಿಸಿದ್ದ ಡಿವೈಎಫ್ಐ ಅಖಿಲ ಭಾರತ ಅಧ್ಯಕ್ಷರಾಗ ಕೆ.ಎನ್.ಬಾಲಗೋಪಾಲ್ ಡಿವೈಎಫ್ಐ ನಡೆಸಿದ ಧೀರೋದ್ಧಾತ ಹೋರಾಟ, ಗೈದ ಬಲಿದಾನ, ರಾಷ್ಟ್ರದ ಅತಿ ದೊಡ್ಡ ಯುವಜನ ಸಂಘಟನೆಯಾಗಿ ಮಾರ್ಪಡುವಲ್ಲಿ-12 ಲಕ್ಷದಿಂದ 1 ಕೋಟಿ 30 ಲಕ್ಷ ಸದಸ್ಯತ್ವ ಹೊಂದಲು ಸಾಧ್ಯವಾದ ಬಗೆಯನ್ನು ವಿವರಿಸಿದರು.

ಕೆ.ಎನ್.ಉಮೇಶ್

ಡಿವೈಎಫ್ಐ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿಗಳಾದ ಹಾನನ್ ಮೊಲ್ಲಾ ಕೋಮುವಾದಿ-ಜಾತಿವಾದಿ ಶಕ್ತಿಗಳ ಅಪಾಯವನ್ನು ವಿವರಿಸುತ್ತಾ, ಡಿವೈಎಫ್ಐ ಹೇಗೆ ರಾಷ್ಟ್ರೀಯ ಐಕ್ಯತೆಗಾಗಿ ದುಡಿಯುತ್ತಿರುವ ನೈಜ ಯುವಜನ ಸಂಘಟನೆಯಾಗಿ ಜಾತಿ, ಮತ, ಭಾಷೆ, ಪ್ರಾಂತದ ಎಲ್ಲೆಗಳನ್ನು ಮೀರಿ ನಿಂತಿದೆ ಎಂಬುದನ್ನು ವಿವರಿಸಿದರು.

ಸಂಸ್ಥಾಪಕ ಸಹ ಕಾರ್ಯದರ್ಶಿಗಳಾದ ಸುನೀತ್ ಚೋಪ್ರಾ, ಯುವಜನರ ಮುಂದಿನ ಜ್ವಲಂತ ಸವಾಲುಗಳನ್ನು ವಿವರಿಸುತ್ತಾ ಪ್ರಗತಿಪರ - ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯಾದ ಡಿವೈಎಫ್ಐ ಮಾತ್ರವೇ ಯುವಜನರನ್ನು ಸಕಾರಾತ್ಮಕ ದಿಕ್ಕಿನಲ್ಲಿ ಮುನ್ನಡೆಸಬಹುದೆಂದರು.

ಹೋರಾಟ, ತ್ಯಾಗ ಮತ್ತು ಪ್ರಗತಿಯ ಘೋಷಣೆಗಳ ದ್ಯೋತಕವಾಗಿ ಹೇಗೆ ಚಳುವಳಿಯ 25 ವರ್ಷಗಳು ನಡೆಯುಬಂದಿವೆ ಎಂಬುದ್ನು ಡಿವೈಎಫ್ಐ ಪ್ರಧಾನ ಕಾರ್ಯದರ್ಶಿ ತಪನ್ ಸಿನ್ಹಾ ವಿವರಿಸಿದರು. ಬೆಳ್ಳಿ ಹಬ್ಬದ ಅಂಗವಾಗಿ ಹಮ್ಮಿಕೊಳ್ಳಲಾಗುವ ರಾಷ್ಟ್ರೀಯ ಯುವಜನ ಉತ್ಸವ, ಅಂತರರಾಷ್ಟ್ರೀಯ ವಿಚಾರ ಸಂಕಿರಣ, ರಾಷ್ಟ್ರಮಟ್ಟದ ಫುಟ್‌ಬಾಲ್ ಪಂದ್ಯಾವಳಿ, ಕ್ರಿಕೆಟ್, ಅಥ್ಲೆಟಿಕ್ಸ್ ಮತ್ತಿತರ ಸ್ಪರ್ಧೆಗಳ ಆಯೋಜನೆಗಳನ್ನು ಪ್ರಕಟಿಸಿದರು. ಅಂತೆಯೇ ಪ್ರಪಂಚದ ಅತಿ ದೊಡ್ಡ ಸಂಖ್ಯೆಯ ರಕ್ತ ದಾನಿಗಳನೊಳಗೊಂಡಿರುವ ಸಂಘಟನೆಯಾದ ಡಿವೈಎಫ್ಐ ತನ್ನ ಬೆಳ್ಳಿ ಹಬ್ಬದ ವರ್ಷದಲ್ಲಿ 5 ಲಕ್ಷ ಯೂನಿಟ್‌ಗಳ ರಕ್ತದಾನ ಸಂಘಟಿಸುವ ಅಂಶವನ್ನು ಪ್ರಕಟಿಸಿದರು.

ಮಾಜಿ ವಿದ್ಯಾರ್ಥಿ-ಯುವಜನ ಮುಖಂಡರು ಹಾಗು ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿಯವರು ಪ್ರಧಾನ ಭಾಷಣಕಾರರಾಗಿ ಮಾತನಾಡುತ್ತಾ ಶೋಷಣ ಮುಕ್ತ ಸಮಾಜದ ನಿರ್ಮಾಣದ ಹೊಣೆಗಾರಿಕೆಯನ್ನು ಯುಜನತೆ ಹೊರಬೇಕೆಂದರು. ರಾಷ್ಟ್ರದ ಸಮಗ್ರತೆ ಹಾಗು ಜನತೆಯ ಐಕ್ಯತೆಯ ರಕ್ಷಣೆಗಾಗಿ ಅಪ್ರತಿಮ ತ್ಯಾಗ ಬಲಿದಾನ ಮಾಡಿರುವ ಡಿವೈಎಫ್ಐ ಕೇಡರ್‌ಗಳು ನೀಡಿದ ಘೋಷಣೆಯಾದ 'ದೇಹ ಚಿದ್ರವದರು ದೇಶ ಚಿದ್ರವಾಗಲು ಬಿಡುವುದಿಲ್ಲ' ಎಂಬ ಅಂಶವನ್ನು ಶ್ಲಾಘಿಸಿದರು.

ಕೇಂದ್ರದ ಸಂಯುಕ್ತ ಪ್ರಗತಿಪರ ಮೈತ್ರಿಕೂಟದ ಸರ್ಕಾರದ ಬಗ್ಗೆ ಮಾತನಾಡುತ್ತ ಎಡ ಪಕ್ಷಗಳಿಂದಾಗಿ ಹಿಂದಿನ ಯಾವುದೇ ಸರ್ಕಾರಗಳು ಉರುಳಿಲ್ಲ, ಪ್ರಸಕ್ತ ಸರ್ಕಾರ ಎಲ್ಲಿಯವರೆಗೆ ಜನತೆಯ ಹಿತಾಸಕ್ತಿಗಳಿಗನುಗುಣವಾಗಿ ನಡೆಯುತ್ತದೆಯೋ ಅಲ್ಲಿಯವರೆಗೆ ಎಡ ಪಕ್ಷಗಳ ಬೆಂಬಲವಿರುತ್ತದೆಂದರು.

ಗೆಲುವು ನಮ್ಮದು ಹಾಡಿನೊಂದಿಗೆ ಸಭೆ ಅಂತ್ಯವಾಯಿತು. ಕೊನೆಯಲ್ಲಿ 25 ಆಕರ್ಷಕ ಬಾನ ಬಿರುಸುಗಳ ಪ್ರದರ್ಶನವನ್ನು ವ್ಯವಸ್ಥೆಗೊಳಿಸಲಾಗಿತ್ತು.



ಸೀತಾರಾಂ ಯೆಚೂರಿಯವರೊಂದಿಗೆ ಮುಖಂಡರು

ಪ್ರಧಾನಿಗಳಿಗೆ ಡಿವೈಎಫ್ಐ ಮನವಿ

ರಾಷ್ಟ್ರಾದ್ಯಂತ ಸಂಗ್ರಹಿಸಲಾಗಿದ್ದ 2.5 ಕೋಟಿ ಸಹಿಯೊಂದಿಗೆ 6 ಅಂಶಗಳ ಬೇಡಿಕೆಗಳ ಮನವಿಯನ್ನು ಪ್ರಧಾನಮಂತ್ರಿಗಳಿಗೆ ಡಿವೈಎಫ್ಐ ಅಖಿಲಭಾರತ ನಿಯೋಗವು ನವೆಂಬರ್ 2 ರಮದು ಅರ್ಪಿಸಿತು. 6 ಅಂಶಗಳ ಬೇಡಿಕೆಗಳು :

1. ನೇಮಕಾತಿಗಳ ಮೇಲಿನ ನಿರ್ಬಂಧ ತೆರವುಗೊಳಿಸಬೇಕು, ರದ್ದುಗೊಳಿಸಲಾದ ಖಾಲಿ ಹುದ್ದೆಗಳ ಮರುಸ್ಥಾಪನೆಯಾಗಬೇಕು. ಎಲ್ಲಾ ಖಾಲಿ ಹುದ್ದೆಗಳ ಭರ್ತಿ ಮಾಡಬೇಕು.

ದೆಹಲಿಯಲ್ಲಿ ಯುವಜನರ ಬೃಹತ್ ರ್ಯಾಲಿ



2. ಸರ್ವರಿಗು ಶಿಕ್ಷಣ ಹಾಗು ಉದ್ಯೋಗ ಖಾತ್ರಿ ಪಡಿಸಬೇಕು
3. ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕನಾಗಿಸಬೇಕು.
4. ರಾಷ್ಟ್ರೀಯ ಯುವಜನ ಮತ್ತು ಕ್ರೀಡಾ ನೀತಿ ರೂಪಿಸಬೇಕು.
5. ಭೂಸುಧಾರಣೆ ಜಾರಿಗೊಳಿಸಬೇಕು
6. ಸಾರ್ವಜನಿಕ ಉದ್ದಿಮೆಗಳ ಕಳಚಿಹಾಕುವಿಕೆ ನಿಲ್ಲಿಸಬೇಕು.

ಅರ್ಧ ಗಂಟೆಗೆ ಹೆಚ್ಚು ನಿಯೋಗದ ಮಾತುಗಳನ್ನು ಆಲಿಸಿದ ಪ್ರಧಾನಿ ಮನಮೋಹನ್ ಸಿಂಗ್‌ರವರು, ರಾಷ್ಟ್ರೀಯ ಯುವಜನ ಹಾಗು ಕ್ರೀಡಾ ನೀತಿಗಳ ಕುರಿತು ಸಂಬಂಧಿತರೆಲ್ಲರ ಸಭೆ ಕರೆದು ಚರ್ಚಿಸಿ ಮುಂದಾಗುವುದಾಗಿ ತಿಳಿಸಿದರು. ಅಂತೆಯೆ ಉದ್ಯೋಗ ಭರವಸೆ ಕಾಯ್ದೆ ಜಾರಿಗೊಳಿಸಲು ಕ್ರಮವಹಿಸುವುದಾಗಿ ತಿಳಿಸಿದರು.

ದೆಹಲಿ ಚಲೋದಲ್ಲಿ
ರಾಜ್ಯದ ಸಾವಿರ ಯುವಜನರು

ರಾಜ್ಯದ 19 ಜಿಲ್ಲೆಗಳಿಂದ ಸುಮಾರು 1000 ಯುವಜನತೆ ದೆಹಲಿ ಚಲೋನಲ್ಲಿ ಭಾಗವಹಿಸಿದ್ದರು. ಡಿವೈಎಫ್ಐ ಕಾರ್ಯಕರ್ತರು, ಸಾಕ್ಷರತಾ ಪ್ರೇರಕರು ಮತ್ತು ಕೃಪಾಂಕ ನೌಕರರು ಇದರಲ್ಲಿ ಭಾಗವಹಿಸಿದ್ದರು. ಇದರಲ್ಲಿ 150 ಕ್ಕೂ ಹೆಚ್ಚು ಯುವತಿಯರು ಭಾಗವಹಿಸಿದ್ದರು. ರಾಜ್ಯದಿಂದ ಹೊರಟ ಯುವಜನತೆಗೆ ಮೆಜೆಸ್ಟಿಕ್ ರೈಲ್ವೆ ನಿಲ್ದಾಣದ ಬಳಿ ಏರ್ಪಡಿಸಲಾಗಿದ್ದ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಡಿವೈಎಫ್ಐ ಮಾಜಿ ಮುಖಂಡರಾದ ಎಸ್.ವೈ.ಗುರುಶಾಂತ್ ಮಾತನಾಡುತ್ತಾ ದೆಹಲಿ ಚಲೋದ ಐತಿಹಾಸಿಕ ಮಹತ್ವನ್ನು ವಿವರಿಸಿದರು. ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್, ಅಧ್ಯಕ್ಷರಾದ ಕೆ.ಎನ್.ಉಮೇಶ್ ಮಾತನಾಡಿದರು. ಎಸ್‌ಎಫ್ಐ ರಾಜ್ಯ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಗ್ರಾಮೀಣ ಕೃಪಾಂಕ ನೌಕರರ ಕ್ರಿಯಾ ಸಮಿತಿ ರಾಜ್ಯ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಹುಬ್ಬಳ್ಳಿ ರೈಲ್ವೆ ನಿಲ್ದಾಣದಲ್ಲಿ ಗದಗ, ಹಾವೇರಿ, ಉತ್ತರ ಕನ್ನಡ, ಉಡುಪಿ ಜಿಲ್ಲೆಗಳ ಸುಮಾರು 250ಕ್ಕೂ ಹೆಚ್ಚು ಕಾರ್ಯಕರ್ತರನ್ನು ರೈಲನ್ನು ಹತ್ತಲು ಬಿಡದೆ ರೈಲ್ವೆ ಅಧಿಕಾರಿಗಳು ತಡೆದಿದ್ದಾರೆ. ಆದಾಗ್ಯೂ 63 ಸಂಗಾತಿಗಳು ಬೇರೆ ಬೇರೆ ರೈಲುಗಳನ್ನು ಹಿಡಿದು ಕೊನೆಗು ದೆಹಲಿ ತಲುಪಿದರು.

"ದೆಹಲಿಯಲ್ಲಿ ರಾಜ್ಯದ ಸಾಕ್ಷರತಾ ಪ್ರೇರಕರ ಧರಣಿ"

ಕರ್ನಾಟಕ ರಾಜ್ಯದ ಸಾವಿರಾರು ಸಾಕ್ಷರತಾ ಪ್ರೇರಕರು ಹಾಗೂ ಡಿವೈಎಫ್ಐ ಕಾರ್ಯಕರ್ತರು ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನಾ ಧರಣಿಯನ್ನು ನಡೆಸಿ, ಕೇಂದ್ರ ಮಾನವ ಸಂಪನ್ಮೂಲ ಸಚಿವರಾದ ಅರ್ಜುನ್‌ಸಿಂಗ್ ಅವರಿಗೆ ಮನವಿ ಸಲ್ಲಿಸಿದರು. ರಾಜ್ಯದ ಸುಮಾರು 32,000 ಸಾಕ್ಷರತಾ ಪ್ರೇರಕರಿಗೆ ವಿವಿಧ ಜಿಲ್ಲೆಗಳಲ್ಲಿ ವಿವಿಧ ತಿಂಗಳುಗಳ ಬಾಕಿಯಿರುವ ಗೌರವಧನ ಬಿಡುಗಡೆ ಮಾಡಬೇಕು, ವಾರದ ರಜೆ-ಹೆರಿಗೆ ರಜೆ ನೀಡಬೇಕು, ಗೌರವಧನ ಹೆಚ್ಚಿಸಬೇಕು, ಸ್ವಸಹಾಯ ಸಂಘಗಳ ರಚನೆಗೆ ಭತ್ಯೆ ನೀಡಬೇಕು, ಸ್ವಸಹಾಯ ಸಂಘಗಳಿಗೆ ಸುತ್ತು ನಿಧಿ ಒದಗಿಸಬೇಕು, ಆವರ್ತಕ ಹಾಗೂ ಅನಾವರ್ತಕ ಅನುದಾನದ ಪ್ರತ್ಯೇಕ ಆಡಿಟ್ ನಡೆಸಬೇಕು. ಮುಂತಾದ ಬೇಡಿಕೆಗಳ ಮನವಿ ಪತ್ರವನ್ನು ಕೇಂದ್ರ ಸಚಿವರಿಗೆ ಸಲ್ಲಿಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ, ಸಾವಿರಾರು ಸಾಕ್ಷರತಾ ಪ್ರೇರಕರು ಕರ್ನಾಟಕ ರಾಜ್ಯ ಸಾಕ್ಷರತಾ ಪ್ರೇರಕರ ಸಂಘ ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್ಐ) ಕರ್ನಾಟಕ ರಾಜ್ಯ ಸಮಿತಿಗಳ ನೇತೃತ್ವದಲ್ಲಿ ದೆಹಲಿಯ ಕೆಂಪು ಕೋಟೆಯಿಂದ ಜಂತರ್ ಮಂತರ್‌ವರೆಗೆ ಬೃಹತ್ ಮೆರವಣಿಗೆ ನಡೆಸಿ ಧರಣಿ ನಡೆಸಿದರು.

ಧರಣಿ ನಿರತರನ್ನು ಉದ್ದೇಶಿಸಿ, ಡಿವೈಎಫ್ಐ ಅಖಿಲ ಭಾರತ ಅಧ್ಯಕ್ಷರಾದ ಕೆ.ಎನ್.ಬಾಲಗೋಪಾಲ್, ಸಹ ಕಾರ್ಯದರ್ಶಿ ಪ್ರದೀಪ್ ಕುಮಾರ್, ದೆಹಲಿಯ ರಾಜ್ಯ ಕಾರ್ಯದರ್ಶಿ ಸಿದ್ದೇಶ್ವರ್ ಶುಲ್ಕ, ತ್ರಿಪುರಾ, ಆಸ್ಸಾಂ ರಾಜ್ಯಗಳ ಮುಖಂಡರು ಬೆಂಬಲ ಸೂಚಿಸಿ ಮಾತನಾಡಿದರು. ಡಿವೈಎಫ್ಐ ಕರ್ನಾಟಕ ರಾಜ್ಯ ಅಧ್ಯಕ್ಷರಾದ ಕೆ.ಎನ್.ಉಮೇಶ್, ರಾಜ್ಯ ಸಾಕ್ಷರತಾ ಪ್ರೇರಕರ ಸಂಘದ ಪ್ರಧಾನ ಕಾರ್ಯದರ್ಶಿ ಶಿವಶರಣಪ್ಪ ಸಂತಾಜಿ, ಖಜಾಂಚಿ ಜಾಕೀರ್ ಹುಸೇನ್ ಖಾದಿ ಮಾತನಾಡಿದರು. ಪ್ರತಿಭಟನೆಯ ನೇತೃತ್ವವನ್ನು ಡಿವೈಎಫ್ಐ ಮುಖಂಡರಾದ ಭರತ್‌ರಾಜ್, ಮುಲ್ಲಾ, ಸುಬ್ಬಣ್ಣ, ರಮೇಶ್, ಸತ್ಯಬಾಬು ಹಾಗೂ ಪ್ರೇರಕರ ಸಂಘದ ಮುಖಂಡರಾದ ವೆಂಕೊಬ, ನವಕೋಟಿ, ಗಣೇಶ್, ಸಾವಿತ್ರಿ, ರವೀಂದ್ರ, ಬಸವರಾಜ್ ಸ್ವಾಮಿ, ಕುಸುಕುಮಾರ್, ಮಂಜುನಾಥ್ ಮುಂತಾದವರು ವಹಿಸಿದ್ದರು.

ಉಡುಪಿ : ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಯನ್ನು ವಿರೋಧಿಸಿ ಉಡುಪಿ ಸಿಪಿಐ(ಎಂ) ತಾಲ್ಲೂಕು ಸಮಿತಿ ನೇತೃತ್ವದಲ್ಲಿ 10.11.2004 ರಂದು ಪ್ರತಿಭಟನಾ ಮೆರವಣಿಗೆ ಮತ್ತು ತಹಸೀಲ್ದಾರರಿಗೆ ಮನವಿ ಸಲ್ಲಿಸುವ ಕಾರ್ಯಕ್ರಮ ನಡೆಯಿತು.

ರಮೇಶ್ ಮೆಂಡನ್

ವಿಶ್ವ ಬ್ಯಾಂಕ್ ಅಧ್ಯಕ್ಷರ ಪ್ರಗತಿಪರತೆ ?



ಕುರುಡು ಕಾಂಚಾಣ


ಜಿ.ಎಸ್.ಮಣಿ

ವಿಶ್ವ ಬ್ಯಾಂಕು ಮತ್ತು ಐಎಂಎಫ್‌ಗಳು ಬಡತನದ ಬಗ್ಗೆ ಮಾತನಾಡುವುದೇನೂ ಹೊಸತಲ್ಲ. ಅದರಲ್ಲೂ ಅವು ಇತ್ತೀಚಿನ ವರ್ಷಗಳಲ್ಲಿ ಜಾಗತಿಕ ಬಡತನದ ಬಗ್ಗೆ ತಮ್ಮದೇ ವಿಶ್ಲೇಷಣೆ, ಕಳಕಳಿ(?)ಗಳನ್ನು ವ್ಯಕ್ತಪಡಿಸಿವೆ. ಅವರ ಈ ಕಾಳಜಿ, ಕಳಕಳಿಗಳು ಯಾವ ತಳಹದಿಯಿಂದ ಬಂದವು ಎಂಬುದು ಬೇರೆ ವಿಷಯ. ಆದರೆ ಅವು ಇಂತಹ ಹೇಳಿಕೆಗಳನ್ನು ನೀಡಿರುವುದು ನಿಜ. ಇರಲಿ.

ಈಗ ವಿಶ್ವಬ್ಯಾಂಕ್‌ನ ಅಧ್ಯಕ್ಷ ಜೇಮ್ಸ್ ವೊಲ್ಫೊನ್ಸನ್ ಭಾರತದ ಎಡಪಕ್ಷಗಳ ಕಾಳಜಿಯ ಅನುಮೋದನೆ ಮಾಡಿದ್ದಾನೆ. ಎಡಪಕ್ಷಗಳ ಕಾಳಜಿ ಸರಿಯಾದದ್ದು ಬಡವರ ಹಿತಾಸಕ್ತಿಗಳನ್ನು ಗಣನೆಗೆ ತೆಗೆದುಕೊಳ್ಳುವ ವಿಷಯದಲ್ಲಿ ಎಡಪಕ್ಷಗಳ ಜೊತೆಗೆ ತನ್ನ ಸಹಮತವಿದೆ ಎಂದೂ ಆತ ಹೇಳಿದ್ದಾನೆ.

ನಮ್ಮ ಯೋಜನಾ ಆಯೋಗದಲ್ಲಿ ವಿಶ್ವಬ್ಯಾಂಕಿನ ಅಧಿಕಾರಿಗಳು ಇರುವುದನ್ನು ಎಡಪಕ್ಷಗಳು ವಿರೋಧಿಸಿ ಅವರು ಹೊರಹೋಗುವಂತೆ ಮಾಡಿದ್ದವು ಎಂಬ ಹಿನ್ನೆಲೆಯನ್ನು ನೆನೆಸಿಕೊಂಡರೆ ಈ ಹೇಳಿಕೆ ಇನ್ನೂ ಗಹನವಾಗಿ ಕಾಣಬಹುದು.

ಎಲ್ಲ ವಲಯಗಳನ್ನು ಖಾಸಗಿಯವರಿಗೆ ತೆರೆದಿಡುವುದರಿಂದ ನಮ್ಮ ಸಮಸ್ಯೆಗಳು ಪರಿಹಾರವಾಗುವು ದಿಲ್ಲ. ವಿಶ್ವಬ್ಯಾಂಕು



ಬಡತನವನ್ನು ನಿರ್ಮೂಲಗೊಳಿಸಬೇಕೆಂಬ ಎಡಪಕ್ಷಗಳ ಕಾಳಜಿಯನ್ನು ಅರ್ಥ ಮಾಡಿಕೊಳ್ಳುತ್ತದೆ ಎಂದು ಆತ ಹೇಳಿದ್ದಾನೆ. ಲಂಡನ್ನಿನ ಹಣಕಾಸು ದಿನಪತ್ರಿಕೆಯೊಂದಕ್ಕೆ ಆತ ನೀಡಿರುವ ಸಂದರ್ಶನದಲ್ಲಿ ಆತ ಹೀಗೆ ಹೇಳಿದ್ದಾನೆ.

ಈತ ಬಡತನದ ವಿಷಯದಲ್ಲಿ ತನ್ನದೇ ಒಂದು ವಿಶ್ಲೇಷಣೆಯನ್ನು ನೀಡಿದ್ದಾನೆ.

ದೇಶವನ್ನು ಎರಡು ವಿಭಾಗವಾಗಿ ವಿಭಜಿಸಿ ನೋಡಿದರೆ ವಿಭಾಗ 1 ರಲ್ಲಿ ಸಾಫ್ಟ್‌ವೇರ್ ಮತ್ತು ಇತರ ಲಾಭದಾಯಕ ಉದ್ದಿಮೆಗಳು, ಸಣ್ಣ, ಮಧ್ಯಮ ಗಾತ್ರದ ಉದ್ದಿಮೆಗಳು, ಸುಶಿಕ್ಷಿತರಿಂದ ನಡೆಸಲ್ಪಡುವ ಬ್ಯಾಂಕುಗಳು ಇತ್ಯಾದಿ ಇದೆ. ವಿಭಾಗ 2ರಲ್ಲಿ ಮೂಲಭೂತ ಅವಶ್ಯಕತೆಗಳಿಂದ ವಂಚಿತರಾದವರಿದ್ದಾರೆ. ವಿಭಾಗ 1ಕ್ಕೆ ಉದಾರೀಕರಣದ ಎಲ್ಲ ಲಾಭಗಳು ಬರುತ್ತವೆ. ಆದರೆ ವಿಭಾಗ 2 ಕ್ಕೆ ಇದರಿಂದ ಲಾಭವಿಲ್ಲ ಬದಲಿಗೆ ಹಾನಿ. ಆದ್ದರಿಂದ ಭಾರತದ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಕುಳಿತು ಈ ವಿಭಾಗ 2ರಜನತೆಗೆ ಯಾವ ತರಹದ ಅನುಕೂಲಗಳನ್ನು ಒದಗಿಸಿಕೊಡಲು ಸಾಧ್ಯ ಎಂಬುದನ್ನು ಕೂಲಂಕುಷವಾಗಿ ವಿಚಾರಣೆ ಮಾಡಿ ಅನುಷ್ಠಾನಗೊಳಿಸಬೇಕು ಎಂದು ಆತ ಹೇಳಿದ್ದಾನೆ.

ವಿಶ್ವಬ್ಯಾಂಕ್ ಅಧ್ಯಕ್ಷರ ಕಾಳಜಿ ನಿಜವೊ ಸುಳ್ಳೋ ಎಂಬುದು ಮುಖ್ಯವಲ್ಲ. ಅದರೆ ಅದೇ ವಿಶ್ವಬ್ಯಾಂಕ್ ಯಾರ ಹಿತಾಸಕ್ತಿಗಳನ್ನು ಕಾಯುತ್ತಿದೆ ಮತ್ತು ಆ ಹಿತಾಸಕ್ತಿಗಳಿಂದಾಗಿ ವಿಭಾಗ 2 ರ ಜನರ ಮೇಲೆ ಎಂತಹ ದುಷ್ಪರಿಣಾಮ ಉಂಟಾಗುತ್ತದೆ ಎಂಬುದು ಮುಖ್ಯ. ಉದಾರ ಮಾತುಗಳಿಂದಲೇ ಜಗತ್ತಿನ ಬಡತನದ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುವುದಾಗಿದ್ದರೆ ಬಡತನ ಎಂದೊ ಇನ್ನಿಲ್ಲವಾಗುತ್ತಿತ್ತು. ವಿಶ್ವಬ್ಯಾಂಕ್ ಮತ್ತು ಐಎಂಎಫ್‌ಗಳ ನೀತಿಗಳೇ ಈ ಬಡತನದ ಮೂಲಗಳು ಎಂಬುದು ಸ್ಪಷ್ಟವಾದ ಕೂಡಲೇ ಈತನ ಮಾತುಗಳ ಟೊಳ್ಳುತನವೂ ಗೊತ್ತಾಗಿಬಿಡುತ್ತದೆ.

ಆದರೆ ಎಡಪಕ್ಷಗಳ ವಿಚಾರಗಳು ಎಂದ ಕೂಡಲೇ ಟೀಕೆಗೆ ಅರ್ಹವಾದವು ಎಂಬಂತೆ ಟೀಕೆಗೆ ತೊಡಗುತ್ತಿದ್ದ ನಮ್ಮ ದೇಶದ ಬೂರ್ಜ್ವಾ ಮಾಧ್ಯಮಗಳಿಗಂತೂ ಈತ ಹೇಳಿರುವ ಮಾತುಗಳು ಕಣ್ಣು ತೆರೆಸಲು ಸಾಧ್ಯವಾದರೆ ಅದು ಈ ಮಾತುಗಳ ಸಕಾರಾತ್ಮಕ ಪರಿಣಾಮವಾಗಿರುತ್ತದೆ.

ಬ್ಯಾಂಕ್ ನೌಕರರ ವೇತನ ಹೆಚ್ಚಳ

ಬ್ಯಾಂಕ್ ನೌಕರರ ವೇತನ ಹೆಚ್ಚಳದ ಒಪ್ಪಂದಕ್ಕೆ ಸಹಿಬಿದ್ದಿದೆ. ಬ್ಯಾಂಕುಗಳ ನೌಕರರು, ಅಧಿಕಾರಿಗಳ ಸಂಯುಕ್ತ ವೇದಿಕೆ ಮತ್ತು ಭಾರತೀಯ ಬ್ಯಾಂಕಗಳ ಅಸೋಸಿಯೇಷನ್‌ನ ಜೊತೆಗೆ ಈ ಒಪ್ಪಂದ ಆಗಿದೆ.

ನವೆಂಬರ್ 2002ರಿಂದ ನೆನೆಗುದಿಗೆ ಬಿದ್ದಿದ್ದ, ನಂತರದಲ್ಲಿ ಕುಂಟುತ್ತ ಸಾಗಿದ ಮಾತುಕತೆಗಳು ಈ ಒಪ್ಪಂದದಲ್ಲಿ ಕೊನೆಗೊಂಡಿವೆ. ವೇತನ ನಿರೀಕ್ಷಿತ ಮಟ್ಟದಲ್ಲಿ ಹೆಚ್ಚಾಗದಿದ್ದರೂ ಒಪ್ಪಂದ ಆಗಿರುವುದು ಟ್ರೇಡ್ ಯೂನಿಯನ್ನುಗಳಿಗೆ ಒಂದು ಸಾಧನೆಯೇ ಸರಿ.

ಬ್ಯಾಂಕ್ ನೌಕರರ ವೇತನ ಪರಿಷ್ಕರಣೆಯ ನಂತರ ಜೀವ ವಿಮಾ ನೌಕರರ, ಭಾರತೀಯ ರಿಸರ್ವ್ ಬ್ಯಾಂಕ್ ನಬಾರ್ಡುಗಳ ನೌಕರರ ವೇತನ ಪರಿಷ್ಕರಣೆ ಕ್ರಿಯೆ ವೇಗ ಪಡೆದುಕೊಳ್ಳುತ್ತದೆ. ಆ ದೃಷ್ಟಿಯಿಂದಲೂ ಇದು ಮುಖ್ಯವಾದ ಮೈಲಿಗಲ್ಲು.

ಬ್ಯಾಂಕಿಂಗ್ ವಲಯದಲ್ಲಿ ಎರಡನೇ ಸುತ್ತಿನ ಸುಧಾರಣೆಗಳನ್ನು ತರಲು ಯು.ಪಿ.ಎ. ಸರ್ಕಾರ ಉತ್ಸುಕವಾಗಿದೆ. ಆದ್ದರಿಂದಲೇ ಈ ವೇತನ ಪರಿಷ್ಕರಣೆ ಬೇಗ ಆಗಿರುವುದು ಎಂಬ ಸಂದೇಹವೂ ಇದೆ.

ಬ್ಯಾಂಕುಗಳ ವಿಲೀನ ಮತ್ತು ವಶೀಕರಣ ಪ್ರಕ್ರಿಯೆಗಳಿಗೆ ಈಗ ಹೆಚ್ಚು ಒತ್ತು ಬಿರುವ ಲಕ್ಷಣಗಳಿವೆ. ಆ ಮೂಲಕವೂ ನೌಕರರಿಗೆ ಹೆಚ್ಚಿನ ಅನಾನುಕೂಲಗಳನ್ನು ಬಂಡವಾಳಶಾಹಿಗಳಿಗೆ ಅನುಕೂಲಗಳನ್ನು ಕೊಡುವ ಉದ್ದೇಶ ಸರ್ಕಾರಕ್ಕೆ ಇರುವಂತಿದೆ.

ಅಡುಗೆ ಅನಿಲದ ಬೆಲೆ ಏರಿಕೆಗೆ ತಡೆ

ಯುಪಿಎ ಸರ್ಕಾರ ಅಡುಗೆ ಅನಿಲದ ಬೆಲೆಯನ್ನು ಆಗಲೇ ಏರಿಸಿದ್ದಲ್ಲದೆ ಪ್ರತಿ ತಿಂಗಳು ಸಿಲಿಂಡರ್ ಒಂದಕ್ಕೆ ಐದು ರೂಪಾಯಿಗಳಂತೆ ಹೆಚ್ಚಿಸುವುದಾಗಿ ಆಗಲೇ ಘೋಷಿಸಿತ್ತು. ಎಡಪಕ್ಷಗಳ ತೀವ್ರ ಒತ್ತಡದಿಂದಾಗಿ ಈ ಪ್ರತಿ ತಿಂಗಳ ಹೆಚ್ಚಳದ ನಿರ್ಧಾರವನ್ನು ಹಿಂತೆಗೆದು ಕೊಂಡಿರುವು ದಾಗಿ ಸರ್ಕಾರ ಆಗಲೇ ಹೇಳಿಕೆ ನೀಡಿದೆ.

ಹೀಗೆಯೇ ಏರಿಸಿದ ಪೆಟ್ರೋಲ್ ಬೆಲೆಯನ್ನು ಸ್ವಲ್ಪ ಮಟ್ಟಿಗೆ ಅದು ಇಳಿಸಿಯೂ ಇದೆ.

ಎಡಪಕ್ಷಗಳ ತೀವ್ರ ಒತ್ತಡದಿಂದಾಗಿ ಜನಸಾಮಾನ್ಯರ ಜೀವದ ಮಟ್ಟ ತೀವ್ರ ಕುಸಿಯುವುದಕ್ಕೆ ತಡೆ ಬಿದ್ದಿದೆ. ಆದರೂ ಕಾಂಗ್ರೆಸ್ಸಿಗರಲ್ಲಿ ಉದಾರೀಕರಣದ ನೀತಿಗಳ ಒತ್ತಡ ಇರುವುದು ಸ್ಪಷ್ಟ. ಇದರಿಂದಾಗಿಯೇ ಅವರ ಬಿಜೆಪಿ ಧಾಳಿಯನ್ನು ಎದುರಿಸುವ ಪೂರ್ಣ ಸಾಮರ್ಥ ಕಳೆದುಕೊಂಡವರಂತೆ ಕಾಣುತ್ತಿರುವುದು.

ವೈದ್ಯರ ನೇಮಕಕ್ಕೆ ಆಗ್ರಹಿಸಿ ಪ್ರತಿಭಟನೆ

ಮಂಡ್ಯ ಜಿಲ್ಲೆಯ ಮಳವಳ್ಳಿಯ ತಾಲೂಕು ಸರ್ಕಾರಿ ಆಸ್ಪತ್ರೆಗೆ ವೈದ್ಯರನ್ನು ನೇಮಿಸುವಂತೆ ಆಗ್ರಹಿಸಿ ಡಿವೈಎಫ್‌ಐ ಮತ್ತು ಜನವಾದಿ ಮಹಿಳಾ ಸಂಘಟನೆಗಳು ನವೆಂಬರ್ 22 ರಂದು ಪ್ರತಿಭಟನೆ ನಡೆಸಿದರು. ನೂರಾರು ಸಂಖ್ಯೆಯಲ್ಲಿ ಜಮಾಯಿಸಿದ್ದ ಕಾರ್ಯಕರ್ತರು, ಆಸ್ಪತ್ರೆಯಲ್ಲಿ 7 ವೈದ್ಯರಿರಬೇಕು. ಆದರೆ ಒಬ್ಬರೇ ವೈದರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದರಿಂದ ರೋಗಿಗಳಿಗೆ ಸಮರ್ಪಕ ಚಿಕಿತ್ಸೆ ದೊರೆಯುತ್ತಿಲ್ಲ. ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ವ್ಯವಸ್ಥೆ ಇದ್ದರೂ, ವೈದ್ಯರು ಬೇರೆ ಕಡೆ ಸ್ಕ್ಯಾನಿಂಗ್ ಮಾಡಿಸುಲ ಬರೆದು ಕಳುಹಿಸುತ್ತಾರೆ.

ಇಲ್ಲಿನ ಅಂಬ್ಯುಲೆನ್ಸ್ ನಲ್ಲಿ ಕಿಲೋಮೀಟರ್ ಗೆ 4ರೂ ಬಾಡಿಗೆ ಪಡೆಯುತ್ತಿದ್ದು, ಇದನ್ನು ಕಡಿಮೆ ಮಾಡಬೇಕು ಹಾಗೂ ಖಾಲಿಯಿರುವ ಇತರ ಸಿಬ್ಬಂದಿಗಳನ್ನು ಭರ್ತಿ ಮಾಡಿಬೇಕು ಎಂದು ಆಗ್ರಹಿಸಿದ ಪ್ರತಿಭಟನಾಕಾರರು ಜನಪ್ರತಿನಿಧಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ತಹಶೀಲ್ದಾರರು ಸ್ಥಳಕ್ಕೆ ಆಗಮಿಸಿ ಆಸ್ಪತ್ರೆಗೆ ವೈದ್ಯರನ್ನು ನೇಮಿಸುವ ಬಗ್ಗೆ ಹಾಗೂ ಇತರ ಸಮಸ್ಯೆಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತನಾಡಿ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದರು. ತಹಶೀಲ್ದಾರ್‌ರ ಭರವಸೆಗೆ ಸ್ಪಂದಿಸಿದ ಪ್ರತಿಭಟನಾಕಾರರು ಪ್ರತಿಭಟನೆಯನ್ನು ಹಿಂದಕ್ಕೆ ಪಡೆದರು.

ಪ್ರತಿಭಟನೆಯ ನೇತೃತ್ವವನ್ನು ಡಿವೈಎಫ್‌ಐ ಜಿಲ್ಲಾಧ್ಯಕ್ಷ ಭರತ್‌ರಾಜ್, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾಧ್ಯಕ್ಷೆ ದೇವಿ, ಡಿವೈಎಫ್‌ಐ ತಾಲ್ಲೂಕು ಅಧ್ಯಕ್ಷ ಎಂ.ಲಿಂಗರಾಜು ವಹಿಸಿದ್ದರು. ಪ್ರತಿಭಟನೆಯಲ್ಲಿ ನೂರಾರು ಮಂದಿ ಭಾಗವಹಿಸಿದ್ದರು.

ಪರಾಗುವೆ ಎಡ ಅಧ್ಯಕ್ಷ :

ದಕ್ಷಿಣ ಅಮೆರಿಕದಲ್ಲಿ ಮುಂದುವರೆದ ಎಡ-ಪರ್ಯಾಯ

ಉತ್ತರ ಅಮೆರಿಕದಲ್ಲಿ ಬುಶ್ ವಿಜಯ ಜಗತ್ತಿನ ಶಾಂತಿಪ್ರಿಯ ಸಮಾನತೆ-ಸಮೃದ್ಧಿ ಕನಸು ಕಾಣುವ ಜನತೆಗೆ ನಿರಾಸೆ ತಂದಿರಬಹುದು. ಆದರೆ ದಕ್ಷಿಣ ಅಮೆರಿಕದ ರಾಜಕೀಯ ಬೆಳವಣಿಗೆಗಳು ಈ ಬಗ್ಗೆ ಹೆಚ್ಚೆಚ್ಚು ಭರವಸೆ - ಸಂತಸ ತರುವಂಥವು. ದಕ್ಷಿಣ ಅಮೆರಿಕದಲ್ಲಿ ಎಡ-ಜನಪರ ಸರ್ಕಾರಗಳು ಅಧಿಕಾರ ವಹಿಸಿಕೊಳ್ಳುವ ಎಡ-ಪಯಣ ವೆನೆಜುವೆಲಾದಲ್ಲಿ ನಾಲ್ಕು ವರ್ಷಗಳ ಹಿಂದೆ ಆರಂಭವಾಗಿತ್ತು. ಆ ಮೇಲೆ ಪ್ರತಿಯೊಂದು ಪ್ರಮುಖ ದೇಶಗಳ ಚುನಾವಣೆಗೆ ಎಡ-ಜನಪರ ಸರ್ಕಾರಗಳ ಅಧಿಕಾರಕ್ಕೆ ಬಂದಿವೆ. ಬ್ರೆಜಿಲ್, ಅರ್ಜೆಂಟಿನಾ ನಂತರ ಈಗ ಪರಾಗುವೆ ಸರದಿ.

ಪರಾಗುವೆಯ 170 ವರ್ಷಗಳ ಪ್ರಜಾಸತ್ತೆಯ ಚರಿತ್ರೆಯಲ್ಲಿ ಮೊದಲ ಬಾರಿಗೆ ಎಡ ಮತ್ತು ಜನಪರ ಅಧ್ಯಕ್ಷ ಪ್ರಚಂಡ ಬಹುಮತದಿಂದ ಚುನಾಯಿತರಾಗಿದ್ದಾರೆ. ಮೊದಲ ಸುತ್ತಿನಲ್ಲೇ ಶೇಕಡಾ 50 ಕ್ಕಿಂತ ಹೆಚ್ಚು ಮತಗಳಿಸಿ ಅವರು ಚುನಾಯಿತರಾಗಿದ್ದಾರೆ. ಉತ್ತರ ಅಮೆರಿಕದ 'ಕತ್ತೆ-ಆನೆ' ರಾಜಕೀಯ ಮಾದರಿ, ದಕ್ಷಿಣ-ಅಮೆರಿಕದ ಹಲವು ಪ್ರದೇಶಗಳಲ್ಲಿ ಜಾರಿಯಲ್ಲಿತ್ತು. ಭ್ರಷ್ಟ ಆಳುವ ವರ್ಗಗಳನ್ನು ಪ್ರತಿನಿಧಿಸುವ ಎರಡು ಪಕ್ಷಗಳು ರಾಜಕೀಯವನ್ನು ಪೂರ್ಣ ಆವರಿಸಿದ್ದವು. ಆಳುವ ವರ್ಗಗಳ 'ಎ'ಟೀಮ್ ಮತ್ತು 'ಬಿ' ಟೀಂ ನಂತಿದ್ದ ಇವು ಪ್ರಜಾಸತ್ತೆಯ ಅಣಕ ಮಾಡುತ್ತಿದ್ದವು. ಅತ್ಯಂತ ಕ್ರೂರ ಜನ-ವಿರೋಧಿ ಆರ್ಥಿಕ-ಸಾಮಾಜಿಕ ನೀತಿಗಳ ಬಗ್ಗೆ 'ಸಹಮತ' ಹೊಂದಿದ್ದ ಈ ಎರಡು ಪಕ್ಷಗಳು, ತೋರಿಕೆಗೆ ಕೆಲವು ವ್ಯತ್ಯಾಸಗಳ ಬಗ್ಗೆ ಬಡಿದಾಡುತ್ತಿದ್ದವು. ಈ ಕಪಟ ನಾಟಕ ಒಡೆದು ಮೂರನೇ ಪರ್ಯಾಯ ಬಂದಿದೆ. ಕಳೆದ ಎರಡು - ಮೂರು ಚುನಾವಣೆಗಳಲ್ಲಿ ಈಗ ಚುನಾಯಿತರಾದ ಅಧ್ಯಕ್ಷರು ಎಡ-ಅಭ್ಯರ್ಥಿಯಾಗಿ ಈ ಮೂರನೇ ಪರ್ಯಾಯ ಭದ್ರ ಬುನಾದಿ ಹಾಕಿದ್ದರು.

ಇದಕ್ಕಿಂತಲೂ ಗಮನಾರ್ಹ ಬೆಳವಣಿಗೆ - ಚುನಾವಣೆ ಜತೆ ನಡೆದ ಜನಮತ ಸಂಗ್ರಹ. ನೀರು ರಾಷ್ಟ್ರೀಯ ಸಂಪನ್ಮೂಲವಾಗಿ ಉಳಿಯಬೇಕು. ಕುಡಿಯುವ ನೀರು ಮತ್ತು ಶೌಚಾಲಯ ಸೇವೆ ಪ್ರತಿಯೊಬ್ಬ ನಾಗರಿಕ ಮೂಲಭೂತ ಹಕ್ಕು - ಎಂದು ಜನಮತ ಸಂಗ್ರಹದಲ್ಲಿ ಮೂರನೇ ಎರಡು ಬಹುಮತದಿಂದ ಜನ ನಿರ್ಧರಿಸಿದ್ದಾರೆ. ಇದು ಜಗತ್ತಿನಲ್ಲೇ ಅತ್ಯಂತ ಕ್ರಾಂತಿಕಾರಿ ಜನ-ಪರ ಮುನ್ನಡೆ. ಜನತಾ ಪ್ರಜಾಪ್ರಭುತ್ವದ ಮುನ್ನಡೆಯಲ್ಲೊಂದು ಮೈಲಿಗಲ್ಲು.

ಜಗತ್ತಿನ ಕ್ರಾಂತಿಕಾರಿ ಚಳುವಳಿಯ ಕೇಂದ್ರಬಿಂದು ದಕ್ಷಿಣ ಅಮೆರಿಕವಾಗಿದೆ. ಇಡೀ ಖಂಡದಲ್ಲಿ ಜನಪರ ರಾಜಕೀಯ ಗಟ್ಟಿಗೊಳ್ಳುತ್ತಿದ್ದು, ಜಗತ್ತಿನ ಕ್ರಾಂತಿಕಾರಿ ಬದಲಾವಣೆಯ ಹರಿಕಾರನಾಗುವತ್ತ ಮುನ್ನಡೆಯುತ್ತಿದೆ. ವೆನೆಜುವೆಲಾ ಮತ್ತು ಬ್ರೆಜಿಲ್‌ನ ಸ್ಥಳೀಯ ಚುನಾವಣೆಗಳಲ್ಲೂ ಎಡಶಕ್ತಿಗಳು ಸಾಧಿಸಿರುವ ಮುನ್ನಡೆ ಇದರ ಭಾಗ.

ಬಸವಣ್ಣ ಕೇಳು

ಮೇಲು ಕೀಳೆನ್ನುತಿಹ ಕಪಟಿಗಳ ಕಂಡು
ಸಿಡಿದೆದ್ದು ಜನಿವಾರ ಕಿತ್ತೆಸೆದೆ ಅಂದು
ಆ ನಿನ್ನ ಸಮಾನತೆ ತತ್ವಕ್ಕೆ ಮತ್ತೆ
ಜನಿವಾರ ತೊಡಿಸಲಿಕೆ ಹೊರಟಿಹರು ಗೊತ್ತೆ?

- ವಿಡಂಬಾರಿ

ಫಲುಜಾ ನರಮೇಧ - ಇರಾಕ್‌ನಲ್ಲಿ ಮಹತ್ವದ ತಿರುವು

ಫಲುಜಾ ಅಮೆರಿಕನ್ ಅಧಿಪತ್ಯಕ್ಕೆ ಇರಾಕಿ ಪ್ರತಿರೋಧದ ಪ್ರತೀಕವಾಗಿತ್ತು. ಭಾರಿ ನರಮೇಧದ ನಂತರ ಅಮೆರಿಕ ಫಲುಜಾ ಮೇಲೆ ಪುನಃ ನಿಯಂತ್ರಣ ಸಾಧಿಸಿದೆ. ಇಪ್ಪತ್ತೊಂದನೇ ಶತಮಾನದ ಅತ್ಯಂತ ದೊಡ್ಡ ಮತ್ತು ಹೇಯ ನರಮೇಧ ಹಲವು ದೃಷ್ಟಿಗಳಿಂದ ಮಹತ್ವದ ತಿರುವು. ಆ ತಿರುವಿನ ಬಗ್ಗೆ ಒಂದು ಟಿಪ್ಪಣಿ.

ಫಲುಜಾ ಇರಾಕ್‌ನ ಒಂದು ಪಟ್ಟಣ. ಫಲುಜಾ ಅಮೆರಿಕನ್ ಅಧಿಪತ್ಯಕ್ಕೆ ಇರಾಕಿ ಪ್ರತಿರೋಧದ ಪ್ರತೀಕವಾಗಿತ್ತು. ಅದನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳದೆ ಅಮೆರಿಕನ್ನರಿಗೆ ಇರಾಕಿನಲ್ಲಿ ಭವಿಷ್ಯವೇ ಇಲ್ಲ ಎಂಬ ಸ್ಥಿತಿ ಇತ್ತು. ಇತ್ತೀಚಿನವರೆಗೆ ಫಲುಜಾ ಪೂರ್ಣವಾಗಿ ಇರಾಕಿ ಗೆರಿಲ್ಲಾಗಳ ನಿಯಂತ್ರಣದಲ್ಲಿತ್ತು. ಇರಾಕಿನ ತುಂಬ ಫಲುಜಾಗಳು ಹುಟ್ಟಿಕೊಳ್ಳುವ ಸಾಧ್ಯತೆ ಅಮೆರಿಕನ್ನರಿಗೆ ನಡುಕ ತಂದಿತ್ತು. ಈ ವರ್ಷದ ಏಪ್ರಿಲ್‌ನಲ್ಲಿ ಫಲುಜಾ ಮೇಲೆ ದಾಳಿ ನಡೆಸಿ 600ಕ್ಕೂ ಹೆಚ್ಚು ನಾಗರಿಕರನ್ನು ಕೊಂದರೂ, ಪಟ್ಟಣ ನಿಯಂತ್ರಣಕ್ಕೆ ಬರಲಿಲ್ಲ. ಫಲುಜಾ ಮೇಲಿನ ಏಪ್ರಿಲ್ ಧಾಳಿಯ ಬರ್ಬರತೆ ಇಡೀ ಇರಾಕನ್ನು ರೊಚ್ಚಿಗೆಬ್ಬಿಸಿ ದೇಶದಾದ್ಯಂತ ಪ್ರತಿರೋಧವನ್ನು ಗಟ್ಟಿಗೊಳಿಸಿತ್ತು. ಜನವರಿಯಲ್ಲಿ ಇರಾಕಿ ಚುನಾವಣೆಗಳನ್ನು ನಡೆಸುವ ಅಮೆರಿಕನ್ ಮತ್ತು ಅವರ ಇರಾಕಿ ಕೈಗೊಂಬೆ ಸರ್ಕಾರದ ಯೋಜನೆ ಮಣ್ಣು ಪಾಲಾಗುವ ಸಾಧ್ಯತೆ ಇತ್ತು.

ಇರಾಕಿ ಕೈಗೊಂಬೆ ಸರ್ಕಾರ ಅಮೆರಿಕದ ಅಧ್ಯಕ್ಷೀಯ ಚುನಾವಣೆ ಮುಗಿಯುವುದಕ್ಕೆ ಕಾಯುತ್ತಿತ್ತು. ಫಲುಜಾ ಮೇಲಿನ ಕಳೆದ ವಾರದ ದಾಳಿ ಮತ್ತು ನಡೆಸಿದ ನರಮೇಧ ಇಪ್ಪತ್ತೊಂದನೆ ಶತಮಾನದಲ್ಲಿ ಅತ್ಯಂತ ದೊಡ್ಡ ಮತ್ತು ಹೇಯವಾದ ನರಮೇಧ. ವಿಯೆಟ್ನಾಮ್‌ನಲ್ಲಿ ಅಮೆರಿಕ, ಚೀನಾದ ನಾನ್‌ಕಿಂಗ್‌ನಲ್ಲಿ ಜಪಾನ್, ಅಲ್ಜೀರಿಯಾದಲ್ಲಿ ಫ್ರೆಂಚರು, ಇತಿಯೋಪಿಯಾದಲ್ಲಿ ಮುಸಲೊನಿ ನಡೆಸಿದ ನರಮೇಧ ನಾಚಿಸುವಂತದ್ದು. ಇಡೀ ಪಟ್ಟಣದ ಮೇಲೆ ಸತತ, ತೀವ್ರ ಬಾಂಬ್ ದಾಳಿ, ಟ್ಯಾಂಕ್ ದಾಳಿ ನಡೆಸಲಾಯಿತು. ಇಡೀ ನಗರವನ್ನು ನಿರ್ನಾಣ ಮಾಡಿದ ಮೇಲೆ ಅಮೆರಿಕನ್ ಸೈನಿಕರು ಪಟ್ಟಣಗಳಿಗೆ ನುಗ್ಗಿದರು. ಬೀದಿ ಬದಿಯಲ್ಲಿ ಕಾಳಗ ನಡೆಯಿತು.

21ನೇ ಶತಮಾನದ ಹೇಯ ನರಮೇಧ

ಫಲುಜಾದ ಎರಡೂವರೆ ಲಕ್ಷಕ್ಕೂ ಹೆಚ್ಚು ಜನ ಓಡಿ ಹೋಗಿದ್ದಾರೆ, ಇಲ್ಲವೆ ಸತ್ತಿದ್ದಾರೆ, ಇಲ್ಲವೇ ಬಂಧನಕ್ಕೊಳಗಾಗಿದ್ದಾರೆ. ಫಲುಜಾ ಭೂತಗಳ ಪಟ್ಟಣದಂತೆ ಕಾಣುತ್ತಿದೆ. ಬಾಂಬ್ ದಾಳಿ ಆರಂಭವಾಗುತ್ತಿದ್ದಂತೆ ನಗರದಿಂದ ಓಡಿಹೋಗಲು ಪ್ರಯತ್ನಿಸಿದ ನಾಗರಿಕರನ್ನು ಸುತ್ತುವರೆದ ಅಮೆರಿಕನ್ ಸೈನ್ಯ ತಡೆದು ನಗರಕ್ಕೆ ವಾಪಸ್ಸು ಕಳುಹಿಸುತ್ತಿತ್ತು. ನಾಗರಿಕರ ಜತೆ ಗೆರಿಲ್ಲಾ ಸೈನಿಕರು ಓಡಿಹೋಗಬಹುದು ಎಂಬ ಅನುಮಾನದ ಮೇಲೆ. ಫಲುಜಾ ದಾಳಿಯಲ್ಲಿ ಸತ್ತ ನಾಗರಿಕರ ಅಂಕಿಸಂಖ್ಯೆಯಂತೂ ಗೊತ್ತಿಲ್ಲ. ಯುದ್ಧದಲ್ಲಿ ಸತ್ತ, ಗಾಯಗೊಂಡ ನಾಗರಿಕರ ಅಂಕಿ ಸಂಖ್ಯೆ ಇಡುವ ಅಭ್ಯಾಸ ಅಮೆರಿಕನ್ ಸೈನ್ಯಕ್ಕಿಲ್ಲ. ಆದರೆ ಈ ಯುದ್ಧದಲ್ಲಿ ಸತ್ತ ಅಮೆರಿಕ, ಗೆರಿಲ್ಲಾ ಸೈನಿಕರ ಸಂಖ್ಯೆಯನ್ನು ಅದು ಕೊಡುತ್ತದೆ. ಆ ಸಂಖ್ಯೆಯಿಂದಲೇ ನಾಗರಿಕರ ಸಾವು-ನೋವುಗಳ ಬಗ್ಗೆ ಊಹಿಸಬಹುದು. 51 ಅಮೆರಿಕನ್ ಸೈನಿಕರು ಸತ್ತರು. 425 ಗಾಯಗೊಂಡರು. 1200 ಕ್ಕೂ ಹೆಚ್ಚು ಇರಾಕಿ ಗೆರಿಲ್ಲಾಗಳು ಸತ್ತಿದ್ದಾರೆ. ಇದು ಈವರೆಗೆ ಇರಾಕಿನಲ್ಲಿ ಒಂದೇ ಯುದ್ಧದಲ್ಲಿ ಸಾವು-ನೋವುಗಳಲ್ಲಿ ಅತಿ ದೊಡ್ಡದು.

ಫಲುಜಾ ದಾಳಿಯಲ್ಲಿ ಅಮೆರಿಕನ್ ಪಡೆಗಳ ಬರ್ಬರತೆ ತಾರಕಕ್ಕೇರಿತ್ತು. ಅತ್ಯಂತ ತೀವ್ರ ಸೆನ್ಸಾರ್‌ಶಿಪ್ ನಡುವೆಯೂ ಹೊರಬರುತ್ತಿರುವ ವರದಿಗಳು ದಂಗುಬಡಿಸುವಂತಹವು. ಫಲುಜಾ ದಾಳಿ ಆರಂಭಿಸಿದ್ದೇ ಅಲ್ಲಿನ ಜನರು-ಆಸ್ಪತ್ರೆಯ ಮೇಲೆಯ ದಾಳಿಯಿಂದ. ಆಸ್ಪತ್ರೆಗೆ ನುಗ್ಗಿದ ಅಮೆರಿಕನ್ ಸೈನಿಕರು ಅಲ್ಲಿನ ಡಾಕ್ಟರು, ನರ್ಸುಗಳ ಕಣ್ಣು ಪಟ್ಟಿ ಕಟ್ಟಿ,ಕೈ ಹಿಂದೆ ಕಟ್ಟಿ ನೆಲದ ಮೇಲೆ ಮಲಗಿಸಿದರು. ಆಸ್ಪತ್ರೆಯಲ್ಲಿ ಗೆರಿಲ್ಲಾಗಳಿಗೆ ಶುಶ್ರೂಷೆ ನೀಡುತ್ತಿದ್ದುದೇ ಇದಕ್ಕೆ ಕಾರಣ. ಇದು ಅಮೆರಿಕನ್ ಸಮಜಾಯಿಷಿ. ಮಸೀದಿಗಳ ಮೇಲೆ ಅಮೆರಿಕನ್ ಸೈನಿಕರು ವಿಶೇಷವಾಗಿ ದಾಳಿಗಳನ್ನು ನಡೆಸಿದರು. ಮಸೀದಿಗಳಲ್ಲಿ ಇದ್ದವರೆಲ್ಲಾ ಗೆರಿಲ್ಲಾ ಸೈನಿಕರು ಎಂಬ ಅನಿಸಿಕೆ ಅಮೆರಿಕನ್ನರಿಗೆ. ಮಸೀದಿಗಳಲ್ಲಿ ಇದ್ದವರೆನ್ನೆಲ್ಲಾ ಗುಂಡಿಟ್ಟುಕೊಂದರು. ಮಸೀದಿ ಒಂದರಲ್ಲಿ ಬಿದ್ದಿದ್ದ ಇರಾಕ್ ಗಾಯಾಳುಗಳನ್ನು ಅಮೆರಿಕನ್ ಸೈನಿಕನೊಬ್ಬ ಗುಂಡಿಟ್ಟು ಕೊಂದ ವಿಡಿಯೋ - ಫಲುಜಾ ನರಮೇಧದ ಪ್ರತೀಕವಾಗಿಬಿಟ್ಟಿದೆ. ಸಾವಿರಾರು ಜನ ಬಾಂಬ್, ಶೆಲ್ ದಾಳಿಯಲ್ಲಿ ನಿರ್ನಾಣವಾದ ಕಟ್ಟಡಗಳ ಅಡಿಯಲ್ಲಿ ಸಿಕ್ಕಿ ಸತ್ತರು. ಇಡೀ ಪಟ್ಟಣದಲ್ಲಿ ನೀರು, ವಿದ್ಯುತ್ ಮತ್ತು ಆಹಾರ ಸರಬರಾಜು ಇಲ್ಲವೇ ಇಲ್ಲ - ಹಲವು ದಿನಗಳವರೆಗೆ. ಕದನ ಪೂರ್ತಿ ಮುಗಿಯುವವರೆಗೆ ಅಮೆರಿಕನ್ ಸೈನ್ಯ ರೆಡ್ ಕ್ರೆಸೆಂಟ್ ಆಗಲಿ ಇತರ ಯಾವುದೇ ಪರಿಹಾರ ಕಾರ್ಯಕರ್ತರನ್ನು ಪಟ್ಟಣದ ಒಳಕ್ಕೆ ಬಿಟ್ಟಿರಲಿಲ್ಲ.

ಇಕ್ಕಟ್ಟು - ಟೊಳ್ಳು ವಿಜಯ

ಫಲುಜಾದ ಮೇಲೆ ನಿಯಂತ್ರಣ ಸಾಧಿಸಿದ ಅಮೆರಿಕನ್ನರು ಈಗ ಇಕ್ಕಟ್ಟಿನಲ್ಲಿದ್ದಾರೆ. ಫಲುಜಾದ ಮೇಲೆ ನಿಯಂತ್ರಣ ಮುಂದುವರೆಸಬೇಕಾದರೆ ದೊಡ್ಡ ಸಂಖ್ಯೆಯಲ್ಲಿ ಅಮೆರಿಕನ್ ಸೈನ್ಯ ಮುಂದುವರೆಯಬೇಕು. ಅವರು ಸೈನ್ಯದ ಸಂಖ್ಯೆ ಕಡಿಮೆ ಮಾಡಿದರೆ ಅಥವಾ ಪಟ್ಟಣವನ್ನು ಬಿಟ್ಟು ಸೈನ್ಯ ಹೋದರೆ, ನಾಗರಿಕರು ಪಟ್ಟಣಕ್ಕೆ ವಾಪಸಾಗುವಾಗ ಗೆರಿಲ್ಲಾಗಳು ವಾಪಸ್ಸಾಗುತ್ತಾರೆ. ಫಲುಜಾದಲ್ಲಿ ಇರುವ ಸೈನ್ಯ ಹಾಗೆ ಮುಂದುವರೆದರೆ ಇರಾಕಿನ ತುಂಬಾ ಹುಟ್ಟಿಕೊಳ್ಳುತ್ತಿರುವ 'ಫಲುಜಾ'ಗಳ ಮೇಲೆ ನಿಯಂತ್ರಣ ಸಾಧಿಸಲು ಸೈನ್ಯ ಸಾಕಾಗುವುದಿಲ್ಲ. ಇಂತಹ ಕೆಲಸಗಳಿಗೆ ತರಬೇತಾಗಿದ್ದ ಇರಾಕಿ ಪೊಲೀಸರು ಮತ್ತು ನೇಶನಲ್ ಗಾರ್ಡ್‌ಗೆ ಈ ಕೆಲಸ ಒಪ್ಪಿಸುವುದು ಸಾಧ್ಯವಾಗುತ್ತಿಲ್ಲ. ಪೊಲೀಸು ಮತ್ತು ನೇಶನಲ್ ಗಾರ್ಡ್‌ಗಳಲ್ಲಿ ಗೆರಿಲ್ಲಾಗಳು ಮತ್ತು ಅವರ ಬೆಂಬಲಿಗರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಫಲುಜಾ ಸೇರಿದಂತೆ ಹಲವು ಕಡೆ ಇರಾಕಿ ಪೊಲೀಸು ಮತ್ತು ನೇಶನಲ್ ಗಾರ್ಡ್, ಗೆರಿಲ್ಲಾಗಳಿಗೆ ಹೋರಾಟಗಾರರು ಮತ್ತು ಅಸ್ತ್ರಗಳನ್ನು ಪೂರೈಸುವ ಮೂಲವಾಗಿಬಿಟ್ಟಿದೆ!

ಫಲುಜಾದಲ್ಲಿ ಅಮೆರಿಕನ್ನರ ವಿಜಯ ಪೂರ್ತಿ ಟೊಳ್ಳು ಎಂಬುದು ಕೆಲವೇ ದಿನಗಳಲ್ಲಿ ಬಯಲಾಗಿದೆ. ಫಲುಜಾ ಅಮೆರಿಕನ್ನರ ನಿಯಂತ್ರಣಕ್ಕೆ ಬಂದಿದೆ. ಆದರೆ ಇಡೀ ದೇಶದಾದ್ಯಂತ ಪ್ರತಿರೋಧ ಇನ್ನಷ್ಟು ತೀವ್ರವಾಗಿದೆ. ಫಲುಜಾ ವಿಜಯದ ಮೂರನೇ ದಿನವೇ, ದೇಶದಾದ್ಯಂತ 130 ಗೆರಿಲ್ಲಾ ದಾಳಿಗಳ ಬಗ್ಗೆ ವರದಿಯಂತೆ, ಅಮೆರಿಕದ ಫಲುಜಾ ವಿಜಯ ಸಾಧಿಸುತ್ತಿದ್ದಂತೆ ಮೊಸುಲ್ ಇನ್ನೊಂದು 'ಫಲುಜಾ' ಆಗಿಬಿಟ್ಟಿದೆ. ಮೊಸುಲ್ ಇರಾಕ್‌ನ ಮೂರನೇ ಅತಿದೊಡ್ಡ ಪಟ್ಟಣ. ಮೊಸುಲ್ ಪೂರ್ತಿಯಾಗಿ ಗೆರಿಲ್ಲಾಗಳ ನಿಯಂತ್ರಣಕ್ಕೆ ಬಂದು, ಅಮೆರಿಕನ್ನರನ್ನು ನಡುಗಿಸಿದೆ. ಇಲ್ಲೂ ಪರಿಸ್ಥಿತಿ ನಿಯಂತ್ರಣಕ್ಕೆ ತರುವುದರಲ್ಲಿ ಇರಾಕಿ ಸೈನ್ಯ ಮತ್ತು ನೇಶನಲ್ ಗಾರ್ಡ್ ವಿಫಲರಾಗಿದ್ದಾರೆ. ಇವರಲ್ಲಿ ಮುಕ್ಕಾಲು ಭಾಗ ಮಾಯವಾಗಿದ್ದಾರೆ. ಓಡಿ ಹೋಗಿದ್ದಾರೆ ಇಲ್ಲವೇ ಗೆರಿಲ್ಲಾಗಳ ಜತೆ ಸೇರಿದ್ದಾರೆ. ರಮದಿ, ಸಮರಾ, ಬಾಕುಬಾ, ಬಾಗ್ದಾದನಲ್ಲೂ ಇದೇ ಪರಿಸ್ಥಿತಿ ಇದೆ. ಇಲ್ಲೆಲ್ಲ ಅಮೆರಿಕನ್ ಪಡೆಗಳು ಪ್ರವೇಶಿಸಿದಲ್ಲಿ ಪಟ್ಟಣಗಳ ಮೇಲೆ ಅಮೆರಿಕನ್ನರಿಗೆ ಯಾವುದೇ ನಿಯಂತ್ರಣ ಇರುವುದಿಲ್ಲ ಎಂಬ ಸ್ಥಿತಿ ಇದೆ.

ಇರಾಕ್‌ನಲ್ಲಿ ಚುನಾವಣೆ ನಡೆಸಲು ಬೇಕಾದ 'ಅನುಕೂಲ ಪರಿಸ್ಥಿತಿ' ಮತ್ತು ನಿಯಂತ್ರಣ ಸ್ಥಾಪಿಸಬೇಕಾದರೆ ಇನ್ನೂ 25-30 'ಫಲುಜಾ'ಗಳನ್ನು ಅಮೆರಿಕನ್ ಸೈನ್ಯ ಪುನಾರವರ್ತಿಸಬೇಕು. ಇದಕ್ಕೆ ಅಮೆರಿಕನ್ ಸೈನ್ಯ ಸಿದ್ಧತೆ ಮಾಡಿಕೊಳ್ಳುತ್ತಿದೆ. ಚುನಾವಣೆ ನಡೆಸಬೇಕಾದರೆ ಇನ್ನಷ್ಟು ವ್ಯಾಪಕ ನರಮೇಧ ನಡೆಸಲೇಬೇಕಾದ ವಿಚಿತ್ರ ಸ್ಥಿತಿಯಲ್ಲಿ ಅಮೆರಿಕನ್ ಸರ್ಕಾರ ಇದೆ. ಒಬ್ಬ ಇರಾಕಿ ನಾಗರಿಕ ಯುರೋಪಿನ ಪತ್ರಿಕೆಗೆ ಹೇಳಿದಂತೆ 'ಇವೆಲ್ಲ ನಮಗೆ ಸ್ವಾತಂತ್ರ್ಯ ನೀಡಲಿಕ್ಕಂತೆ, ನಮ್ಮ ಪ್ರಾಣಗಳಿಗೆ ಸ್ವಾತಂತ್ರ್ಯ ನೀಡುತ್ತಿದ್ದಾರೆ'.


ಸದಾ ಹತ್ತಿ ಉರಿಯುತ್ತಿರುವ ಫಲುಜಾ

ಮಹತ್ವದ ತಿರುವು


ಈವರೆಗೆ ಅಮೆರಿಕನ್ ಸೈನ್ಯ ಗೆರಿಲ್ಲಾ ಪ್ರತಿರೋಧ ನಾಶ ಮಾಡಲು, ನಿಯಂತ್ರಣ ಸಾಧಿಸಲು - ಇಡೀ ಪಟ್ಟಣವನ್ನೇ ನಾಶ ಮಾಡುವ ಅತಿರೇಕಕ್ಕೆ ಹೋಗುತ್ತಿರಲಿಲ್ಲ. ಇಷ್ಟರವರೆಗೆ ಅದು ಸಾಧ್ಯವಾಗಿತ್ತು ಕೂಡಾ. ನಜಾಫನಲ್ಲಿ, ಫಲುಜಾದಲ್ಲಿ ಈವರೆಗೆ ಆ ತಂತ್ರವಿಲ್ಲದೆ ಮುಂದುವರೆಯುವುದು ಸಾಧ್ಯವಿತ್ತು. ಆದರೆ ಈಗ 25-30 ಪಟ್ಟಣಗಳಲ್ಲಿ 'ಫಲುಜಾ ಮಾದರಿ'ಯ ದಾಳಿ ಒಂದೇ ತಂತ್ರ ಉಳಿದಿರುವುದು - ನಿಯಂತ್ರಣ ಸಾಧಿಸಲು. ಇದು ಇರಾಕಿ ಯುದ್ಧದಲ್ಲಿ ಮಹತ್ವದ ತಿರುವು.

ಈವರೆಗೆ ಇರಾಕಿ ಯುದ್ಧದಲ್ಲಿ ಸತ್ತ ಇರಾಕಿ ನಾಗರಿಕರ ಅಂಕಿ-ಸಂಖ್ಯೆ ಗೊತ್ತಿರಲಿಲ್ಲ. ಇತ್ತೀಚೆಗೆ ಅಮೆರಿಕದ ಜಾನ್ ಹಾಪ್ಕಿನ್ಸ್ ಆಸ್ಪತ್ರೆಯ ಅಧ್ಯಯನ ಒಂದರ ಪ್ರಕಾರ ಇರಾಕಿ ಅತಿಕ್ರಮಣದ ನಂತರ ಸುಮಾರು ಒಂದು ಲಕ್ಷ ಇರಾಕಿ ನಾಗರಿಕರು ಸತ್ತಿದ್ದಾರೆ. ಇರಾಕಿ ನಾಗರಿಕರ ಸಾವು ಮುಖ್ಯವಾಗಿ ಪಟ್ಟಣಗಳಲ್ಲಿ ಬಾಂಬ್ ದಾಳಿಯಲ್ಲಿ ಆಗಿರುವುದು - ಎನ್ನುತ್ತದೆ ಅಧ್ಯಯನ.

ಆದರೆ ಇರಾಕಿ ಗೆರಿಲ್ಲಾಗಳೂ ಚುನಾವಣೆ ಜನವರಿಯಲ್ಲಿ ಆಗಗೊಡದಂತೆ ತೀವ್ರ ಪ್ರತಿರೋಧ ಒಡ್ಡುತ್ತಿದ್ದಾರೆ. ಗೆರಿಲ್ಲಾ ಪ್ರತಿರೋಧ ಹೆಚ್ಚು ವ್ಯಾಪಕವಾಗಿದೆ, ತೀವ್ರವಾಗುತ್ತಿದೆ. ಸದ್ದಾಂನ ಬಾತ್ ಪಕ್ಷಕ್ಕೆ ಸೇರಿದವರು. ರಾಷ್ಟ್ರೀಯವಾದಿಗಳು ಮತ್ತು ಮೂಲಭೂತವಾದಿಗಳೆಲ್ಲ ಈ ಗೆರಿಲ್ಲಾ ಹೋರಾಟದಲ್ಲಿ ಸೇರಿದ್ದಾರೆ. ಗೆರಿಲ್ಲಾ ಹೋರಾಟಕ್ಕೆ ಕೇಂದ್ರ, ಒಳ್ಳೆಯ ಸಂಘಟನೆ ಇಲ್ಲದಿದ್ದರೂ ಅದರ ಹೋರಾಟದ ಬಿರುಸಿನ ಮೇಲೆ ಏನೂ ಪರಿಣಾಮವಾಗಿಲ್ಲ. ಅಮೆರಿಕನ್ನರು ಇನ್ನಷ್ಟು ಫಲುಜಾ ವಿಜಯದ ಹೊಸ ಅವತರಣಿಕೆಗಳನ್ನು ಮಾಡುತ್ತಾ ಹೋದಂತೆ, ಹೊಸ ಗೆರಿಲ್ಲಾ ಹೋರಾಟಗಾರರು ಹುಟ್ಟಿಕೊಳ್ಳುತ್ತಾ ಹೋಗುತ್ತಾರೆ. ಇರಾಕಿ ಕಮ್ಯುನಿಸ್ಟ್ ಪಕ್ಷ ಈ ಗೆರಿಲ್ಲಾ ಹೋರಾಟದಲ್ಲಿಲ್ಲ ಎನ್ನುವುದೇ ಇರಾಕಿನ ಅತ್ಯಂತ ದೊಡ್ಡ ದುರಂತ. ಕುರ್ದಿಶ್ ಗುಂಪುಗಳ ಜತೆ, ಇರಾಕಿ ಕಮ್ಯುನಿಸ್ಟ್ ಪಾರ್ಟಿ ಸಹ ಚುನಾವಣೆಗಳಲ್ಲಿ ಪಾಲ್ಗೊಳ್ಳುವ ಸೂಚನೆ ಇದೆ.


ಇರಾಕಿನಲ್ಲಿ ಅಮೆರಿಕದ ಕೈಗೊಂಬೆ ಸರ್ಕಾರವೊಂದು ಅಮೆರಿಕದ ತೈಲ ಮತ್ತು ಹಿತಾಸಕ್ತಿಗಳನ್ನು ಕಾಪಾಡುತ್ತಾ, ಪಶ್ಚಿಮ ಏಶ್ಯಾದಲ್ಲಿ ಅಮೆರಿಕದ ರಾಜಕೀಯ ವ್ಯೂಹದ ಭಾಗವಾಗಿ ಶಾಂತಿಯುತವಾಗಿ ಆಳುವುದು ಬುಶ್ ಗ್ಯಾಂಗ್‌ನ ಕನಸ್ಸಾಗಿತ್ತು. ಅದು ನನಸಾಗುವ ಯಾವುದೇ ಲಕ್ಷಣಗಳಿಲ್ಲ. ಮತ್ತು ಇಂತಹುದೇ 'ಮಾದರಿ'ಯನ್ನು ಇತರ ಅರಬ್ ದೇಶಗಳಲ್ಲಿ ಪುನರಾವರ್ತಿಸುವ ಯೋಜನೆಯಂತೂ ದೂರವೇ ಉಳಿಯಿತು. ಫಲುಜಾರ ಜತೆಗೆ ಬುಶ್ ಗ್ಯಾಂಗ್‌ನ ಈ ಕನಸೂ ಭಗ್ನವಾಗಿದೆ.

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





ಆರೋಗ್ಯ ರಕ್ಷಣೆಯ ಆರ್ಥಿಕತೆ ಮತ್ತು ರಾಜಕಾರಣ



ಅರ್ಥಶಾಸ್ತ್ರದಲ್ಲಿ ನೊಬೆಲ್ ಪುರಸ್ಕಾರ ವಿಜೇತ ಅಮರ್ತ್ಯ ಸೇನ್ ಅವರು 1999 ವಿಶ್ವ ಆರೋಗ್ಯ ಸಭೆಯಲ್ಲಿ ಮಾಡಿದ ಆಶಯ ಭಾಷಣ

ನಾನು ಚರ್ಚಿಸಬೇಕೆಂದಿರುವ ವಿಷಯ - 'ಆರೋಗ್ಯ ಹಾಗೂ ಅಭಿವೃದ್ಧಿಗೆ ಇರುವ ಸಂಬಂಧ'. ಇದೊಂದು ಜಟಿಲ ಸಮಸ್ಯೆ ಒಂದು ದೃಷ್ಟಿಯಲ್ಲಿ ನೋಡಿದರೆ ಈ ಪ್ರಶ್ನೆಗೆ ಸುಲಭ ಉತ್ತರ ಹೊಳೆಯುತ್ತದೆ. ಜನರ ಆರೋಗ್ಯ ಸುಧಾರಣೆಯೇ ಪ್ರಗತಿಯ ಪ್ರಧಾನ ಧ್ಯೇಯ ಎಂಬುದನ್ನು ಸಾರ್ವತ್ರಿಕವಾಗಿ ಜಗತ್ತಿನಾದ್ಯಂತ, ಎಲ್ಲರೂ ಒಪ್ಪಿಕೊಳ್ಳಲೇಬೇಕಾದ ವಿಷಯ, ಆದರೆ ಈ ಪ್ರಾಥಮಿಕ ಜ್ಞಾನ ನಮ್ಮನ್ನು ಹೆಚ್ಚು ದೂರ ಒಯ್ಯಲಾರದು. ನಾವು ಇನ್ನೂ ಅನೇಕ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು. ಪ್ರಗತಿಯ ಧ್ಯೇಯಗಳ ಪೈಕಿ ಆರೋಗ್ಯ ಎಷ್ಟು ಮಹತ್ವದ್ದು? ವಾರ್ಷಿಕ ತಲಾ ಆದಾಯ ಹೆಚ್ಚಿಸುವ ಮೂಲಕ ಆರ್ಥಿಕ ಪ್ರಗತಿ ಸಾಧಿಸಿದ್ದೇ ಆದರೆ, ಜನಾರೋಗ್ಯವನ್ನು ಸಾಧಿಸಲು ಆರ್ಥಿಕ ಬೆಳವಣಿಗೆ ಸಾಕೇ ಅಂದರೆ ತಲಾ ವಾರ್ಷಿಕ ಆದಾಯವನ್ನು ಹೆಚ್ಚಿಸಿದಾಗ ಆರೋಗ್ಯವು ವಿಶೇಷವಾಗಿ ಉತ್ತಮವಾಗುವುದೇ? ಅಥವಾ ಆರ್ಥಿಕ ಬೆಳವಣಿಗೆಗಿಂತ ಭಿನ್ನವಾದ ಗುರಿ ಆರೋಗ್ಯ ಸುಧಾರಣೆಯದ್ದೇ? ಅಭಿವೃದ್ಧಿಯು ಎಲ್ಲ ಒಳ್ಳೆಯ ವಿಷಯಗಳನ್ನು ಒಳಗೊಂಡಿದೆಯೇ ಅಥವಾ ಅಲ್ಲಿಯೂ ಆದ್ಯತೆ ನೀಡಲು ಅಗತ್ಯವಾದುದಕ್ಕೆ ಹುಡುಕಾಡಬೇಕೆ? ಆರೋಗ್ಯ ಮತ್ತೂ ಆರೋಗ್ಯಪಾಲನೆಯ ವಿಷಯದಲ್ಲಿ ನಮ್ಮ ಕಾಳಜಿಯಾದ ಸಮಾನತೆ ಎಷ್ಟರಮಟ್ಟಿಗೆ ಬಿಂಬಿತವಾಗಿದೆ?

ಸಮೃದ್ಧಿಗೂ, ಆರೋಗ್ಯ, ದೀರ್ಘಾಯುಷ್ಯ ಹಾಗೂ ಇತರ ಸಾಧನೆಗೂ ಸಂಬಂಧವಿದೆ ಎನ್ನಬಹುದು. ಆದರೆ ಇನ್ನೊಂದು ರೀತಿ ನೋಡಿದರೆ ಈ ಸಂಬಂಧ ಬಲವಾದುದೇನಲ್ಲ ಹಾಗೂ ಆ ಸಂಬಂಧವು ಇನ್ನೂ ಕೆಲವು ವಿಷಯಗಳ ಮೇಲೆ ಅವಲಂಬಿಸಿದೆ. ಇಲ್ಲಿ ಮುಖ್ಯ ವಿಷಯ ಅಜರಾಮರರಾಗುವುದಲ್ಲ, ನೋವು ಬಾಧೆಗಳಿಲ್ಲದೆ ಸ್ವಚ್ಛಂದ ಬಾಳನ್ನು ಆಜೀವ ಪರ್ಯಂತ ನಡೆಸುವುದು.

ಸಂಪತ್ತು ನಮಗೆ ಸುದೀರ್ಘ, ಆರೋಗ್ಯಕರ ಹಾಗೂ ಸುಖಿ ಜೀವನ ನಡೆಸಲು ಅನುವು ಮಾಡಿಕೊಡುತ್ತಿದೆ. ಸಂಪತ್ತಲ್ಲದೆ, ಇನ್ನೂ ಅನೇಕ ವಿಷಯಗಳು ನಮ್ಮ ಮೇಲೆ ಪರಿಣಾಮ ಬೀರುವ ಕಾರಣ ಕೇವಲ ಸಂಪತ್ತಿನಿಂದಲೇ ಆರೋಗ್ಯ ವರ್ಧಿಸದು. ಆದ್ದರಿಂದ ಅಭಿವೃದ್ಧಿ ಎಂಬುದು ಸಂಪತ್ತು ಗಳಿಕೆ, ಒಟ್ಟಾರೆ ರಾಷ್ಟ್ರೀಯ ಉತ್ಪನ್ನ ಹಾಗೂ ಆದಾಯಕ್ಕೆ ಸಂಬಂಧಪಟ್ಟ ವಿಷಯಗಳು ಬೀರುವ ಪ್ರಭಾವವನ್ನು ಮೀರಿದ್ದು.

ಅಮೇರಿಕಾ ಪ್ರಜೆಗಳಾಗಿರುವ ಆಫ್ರಿಕನ್ನರ ಸಾಪೇಕ್ಷ ಹಾಗೂ ನಿರಪೇಕ್ಷ ವಂಚನೆ

ಶ್ರೀಮಂತ ದೇಶದ ಕೆಲವು ಗುಂಪುಗಳು ಮೂರನೇ ದೇಶದ ಜನರಿಗಿಂತ ಹೆಚ್ಚು ವಂಚಿತರಾಗಿದ್ದಾರೆ ಎಂಬುದು ಗಮನಾರ್ಹ ಅಂಶ. ಉದಾಹರಣೆಗೆ ಅಮೇರಿಕದ ಪ್ರಜೆಗಳಾದ ಆಫ್ರಿಕನ್ನರು ಮೂರನೇ ಜಗತ್ತಿನ ಜನರಿಗಿಂತಲೂ (ಚೀನ, ಭಾರತದ ಕೇರಳಾ, ಶ್ರೀಲಂಕಾ, ಜಮೈಕಾ, ಕೋಸ್ಟಾರಿಕಾ) ಹೆಚ್ಚು ಜೀವಿಸಲು ಅಸಮರ್ಥರಾಗಿದ್ದಾರೆ. ಅಮೇರಿಕಾ ಪ್ರಜೆಗಳಾದ ಆಫ್ರಿಕನ್ನರ ತಲಾ ಆದಾಯ ಬಿಳಿ ಅಮೇರಿಕನ್ನರಿಗಿಂತಲೂ ಕಡಿಮೆ ಇದ್ದರೂ ಚೀನ ಅಥವಾ ಕೇರಳ ಜನರ ಆದಾಯಕ್ಕಿಂತ (ಜೀವನ ವೆಚ್ಚದ ವ್ಯತ್ಯಾಸಕ್ಕೆ ಸರಿಪಡಿಸಿದ ನಂತರವೂ) ಹೆಚ್ಚು. ಈ ಸನ್ನಿವೇಶದಲ್ಲಿ ಅಮೇರಿಕಾವಾಸಿ ಆಫ್ರಿಕನ್ನರ ಹಾಗೂ ಬಡ ಚೀನಿಯರ ಹಾಗೂ ಕೇರಳ ಜನರ ಆಯುಸ್ಸಿನ ಹೋಲಿಕೆ ಕುತೂಹಲಕರವಾಗಿದೆ. ಅದರಲ್ಲೂ, ಅಮೇರಿಕ ವಾಸಿ ಆಫ್ರಿಕನ್ನರ ಮಕ್ಕಳ ಮರಣ ಸಂಖ್ಯೆ ಭಾರತ ಅಥವಾ ಚೀನಾದ ಮಕ್ಕಳ ಸಾವಿನ ಸಂಖ್ಯೆಗಿಂತ ಕಡಿಮೆ ಇದ್ದರೂ ಕ್ರಮೇಣ ಪ್ರೌಢರನ್ನು ಪರಿಗಣಿಸಿದಾಗ ಆ ಚಿತ್ರ ಬದಲಾಗುತ್ತದೆ

ಚೀನಾದ ಹಾಗೂ ಕೇರಳದ ಗಂಡಸರು ಅಮೇರಿಕದ ಕಪ್ಪು ಜನರಿಗಿಂತ ದೀರ್ಘಾಯುಷಿಗಳು. ಅಮೇರಿಕಾ ವಾಸಿ ಆಫ್ರಿಕಾದ ಮಹಿಳೆ ಬಡ ಚೀನಾದ ಮಹಿಳೆಯಷ್ಟೇ ಆಯುಸ್ಸು ಹೊಂದಿದ್ದರೂ ಕೇರಳದ ಮಹಿಳೆಗಿಂತ ಅಲ್ಪಾಯುಷಿ. ಅಮೇರಿಕಾ ನಿವಾಸಿ ಆಫ್ರಿಕನ್ನರನ್ನು ಅಮೇರಿಕದ ಬಿಳಿ ಜನಾಂಗಕ್ಕೆ ಹೋಲಿಸಿದ್ದಲ್ಲಿ, ತಲಾ ಆದಾಯದಲ್ಲಿ ವಂಚಿತರಾಗಿದ್ದಾರೆ, ಕೇರಳದ ಮಹಿಳೆ ಮತ್ತು ಪುರುಷರಿಗೆ, ಚೀನಾದ ಪುರುಷರಿಗೆ ಹೋಲಿಸಿದಲ್ಲಿ ಆಯುಷ್ಯವರ್ಧನದಲ್ಲಿ ವಂಚಿತರಾಗಿದ್ದಾರೆ. ಈ ವ್ಯತ್ಯಾಸದ ಮೇಲೆ ಅನಿಶ್ಚಿತತೆಯ ಪರಿಣಾಮ ಅಂದರೆ ತಲಾ ಆದಾಯದಿಂದ ಜೀವನಮಟ್ಟ, ತಲಾ ಆದಾಯದಿಂದ ಆಯುಸ್ಸು, ಸಾಮಾಜಿಕ ವ್ಯವಸ್ಥೆ, ವೈದ್ಯಕೀಯ ಸೌಲಭ್ಯಗಳು, ಜನಾರೋಗ್ಯ ರಕ್ಷಣೆ, ಪ್ರಾಥಮಿಕ ಶಿಕ್ಷಣ, ನ್ಯಾಯ ಹಾಗೂ ಸುವ್ಯವಸ್ಥೆ, ಹಿಂಸೆಯ ಮುಂದುವರಿಗೆ ಮುಂತಾದವುಗಳು ಪ್ರಭಾವ ಬೀರುತ್ತವೆ.

ಈ ವೈರುಧ್ಯವು ದೊಡ್ಡ ಗುಂಪಾದ ಕೊಲಂಬಿಯಾದ ಅಮೇರಿಕಾವಾಸಿ ಆಫ್ರಿಕನ್ನರಲ್ಲೂ ಕಂಡುಬರುತ್ತದೆ. ಕೊಲಂಬಿಯಾ ಜಿಲ್ಲೆಯ ಸೇಂಟ್ ಲೂಯಿಸ್ ನಗರ, ನ್ಯೂಯಾರ್ಕ್ ಅಥವಾ ಸ್ಯಾನ್ ಫ್ರಾನ್ಸಿಸ್ಕೋದ ಅಮೇರಿಕವಾಸಿ ಆಫ್ರಿಕನ್ ಪುರುಷನು ಚೀನಾದ ಅಥವಾ ಕೇರಳದ ಪುರುಷರಿಗಿಂತ ಅಲ್ಪಾಯುಷಿಗಳು. ಬೆಳವಣಿಗೆ ಹಾಗೂ ವಿಕಾಸದ ಅಧ್ಯಯನದಲ್ಲಿ ತಲಾ ಆದಾಯವನ್ನು ಗಣನೆಗೆ ತೆಗೆದು ಕೊಳ್ಳಲಾಗುತ್ತದೆ.



ಅಮೇರಿಕ ವಾಸಿ ಆಫ್ರಿಕನ್ನರು ಚೀನಾದ ಅಥವಾ ಭಾರತದ ಜನರಿಗೆ ಹೋಲಿಸಿದಲ್ಲಿ ಶ್ರೀಮಂತರಾಗಿದ್ದರೂ ಅಲ್ಪಾಯುಷಿ ಗಳು ಇವು ಎದ್ದು ಕಾಣುವ ಉದಾಹರಣೆಗಳು. ದೀರ್ಘ ಆಯಸ್ಸು ತಲಾ ಆದಾಯದ ಮೇಲೆ ಅವಲಂಬಿಸುತ್ತಿದೆಯೇ?

ಇದು ದೇಶದೊಳಗೆ ವ್ಯಕ್ತಿಗಳಲ್ಲಿ ಹಾಗೂ ಸಮುದಾಯಗಳಲ್ಲಿ ಕಂಡುಬರುವ ಸತ್ಯ. ಅಂದರೆ ಈ ಸಂದರ್ಭದಲ್ಲಿ ಅದು ಒಂದು ಅಸಂಗತಿಯೇ? ಇಲ್ಲಿ ಅಸಂಗತತೆಯೇನೂ ಇಲ್ಲ. ತಲಾ ಆದಾಯ ಹೆಚ್ಚಿದ್ದಲ್ಲಿ ಅಕಾಲ ಮರಣ ಹಾಗೂ ಅನಾರೋಗ್ಯವನ್ನು ತಡೆಯುಗಟ್ಟಬಹುದಾಗಿದೆ. ಆದಾಯ ಖಚಿತವಾದ ಪ್ರಭಾವ ಬೀರುತ್ತದೆ. ಆದರೂ ಇತರೇ ವ್ಯತ್ಯಾಸಗಳಾದ ಅಂದರೆ ವೈದ್ಯಕೀಯ ಸೌಲಭ್ಯ, ಜನಾರೋಗ್ಯ ರಕ್ಷಣೆ, ಶಿಕ್ಷಣ ಸೌಲಭ್ಯ ಇರದಿದ್ದಲ್ಲಿ, ಶ್ರೀಮಂತನ ಆಯಸ್ಸು ರಾಷ್ಟ್ರೀಯ ಉತ್ಪನ್ನದ ಮೇಲೆ ಅವಲಂಬಿಸುತ್ತದೆ. ಈ ಎರಡು ವ್ಯತ್ಯಯನೀಯ ಅಂಶಗಳನ್ನು ಸಂಖ್ಯಾಶಾಸ್ತ್ರಕ್ಕೆ ಸಂಬಂಧಿಸಿದ ಪ್ರಯೋಗದಲ್ಲಿ ಅಳವಡಿಸಿಕೊಂಡಾಗ, ತಲಾ ಒಟ್ಟಾರೆ ರಾಷ್ಟ್ರೀಯ ಉತ್ಪನ್ನದ ಅನಿಶ್ಚಿತತೆಯ ಪ್ರಭಾವದ ಹೆಚ್ಚಿನ ವಿವರಣೆಯನ್ನು ದೊರಕಿಸಿಕೊಳ್ಳಬಹುದು. ಬಡತನ ಹಾಗೂ ಜನಾರೋಗ್ಯಕ್ಕೆ ಖರ್ಚು ಬದಲಾಯಿಸಲು ಸಾಧ್ಯವಾದ ಅಂಶಗಳಾಗಿದ್ದರಿಂದ, ಒಟ್ಟಾರೆ ತಲಾ ರಾಷ್ಟ್ರೀಯ ಉತ್ಪನ್ನ ಹಾಗೂ ಆಯು ನಿರೀಕ್ಷಣೆ ನಡುವಿನ ಸಂಖ್ಯಾಶಾಸ್ತ್ರಗಳ ಸಂಬಂಧಗಳು ಮಾಯವಾಗುತ್ತವೆ. ಇದರರ್ಥ ಆಯುನಿರೀಕ್ಷಣೆ ಹೆಚ್ಚಳ, ತಲಾ ಒಟ್ಟಾರೆ ರಾಷ್ಟ್ರೀಯ ಉತ್ಪನ್ನದ ಹೆಚ್ಚಳದಿಂದ ಆಗುತ್ತದೆ ಎಂದಲ್ಲ. ಅದು ಜನಾರೋಗ್ಯಕ್ಕೆ ಮಾಡುವ ಖರ್ಚು ಹಾಗೂ ಬಡತನ ನಿರ್ಮೂಲನೆಯಿಂದ ಆಗಲು ಸಾಧ್ಯ. ಇದು ಆರ್ಥಿಕ ಬೆಳವಣಿಗೆಯ ಪ್ರತಿಫಲವನ್ನು ಅವಲಂಬಿಸುತ್ತದೆ.

ಕನಿಷ್ಠ ಶಿಕ್ಷಣ, ಅಗತ್ಯ ಆರೋಗ್ಯ, ಪ್ರಾಯೋಜಿಕ ಭೂಸುಧಾರಣೆಯನ್ನು ಕೂಡಲೆ ಪೂರ್ಣಗೊಳಿಸುವುದು ಮುಂತಾದವುಗಳನ್ನೊಳಗೊಂಡ ಅನೇಕ ಐತಿಹಾಸಿಕ ಕಾರಣಗಳಿಂದಾಗಿ, ಭಾರತ, ಬ್ರೆಝಿಲ್, ಪಾಕಿಸ್ತಾನಕ್ಕಿಂತ ಪೂರ್ವ ಹಾಗೂ ದಕ್ಷಿಣ ಪೂರ್ವದೇಶಗಳಲ್ಲಿ ವ್ಯಾಪಕ ಆರ್ಥಿಕ ಭಾಗವಹಿಸುವಿಕೆ ಸಾಧ್ಯವಾಯಿತು. ಭಾರತ ಬ್ರೆಝಿಲ್ ಹಾಗೂ ಪಾಕಿಸ್ತಾನದಲ್ಲಿ ಸಾಮಾಜಿಕ ಅವಕಾಶವನ್ನು ಕಲ್ಪಿಸುವುದು ನಿಧಾನವಾಗಿ ಸಾಗಿದೆ. ಇದರಿಂದಾಗಿ ಆರ್ಥಿಕ ಬೆಳವಣಿಗೆಗೆ ಅಡೆತಡೆಯಾಗಿದೆ. ಕಡಿಮೆಯಾಗಬಹುದು ಹಾಗೂ ಬಡಜನರ ಆಯಸ್ಸು ಶ್ರೀಮಂತರಿಗಿಂತ ಹೆಚ್ಚಿಗೆ ಇರಬಹುದಾಗಿದೆ. ಒಳ್ಳೇ ಆರೋಗ್ಯ ಹಾಗೂ ಉಳಿವು ಹೆಚ್ಚು ಆದಾಯ ಗಳಿಕೆಗೆ ಸಹಾಯ ಮಾಡುತ್ತದೆ.

ಅಭಿವೃದ್ಧಿಯಿಂದಾದ ಆರೋಗ್ಯ ವರ್ಧನೆ :

ದೀರ್ಘಾಯುಷ್ಯ ಹಾಗೂ ತಲಾ ಆದಾಯದ ಸಂಬಂಧದ ಬಗ್ಗೆ ಒಮ್ಮತ ಇಲ್ಲದಿದ್ದರೂ, ದೇಶದ ಮಟ್ಟದಲ್ಲಿ ಆದಾಯ ಹಾಗೂ ಆಯುಷ್ಯದ ಸಂಬಂಧವನ್ನು ಸಾಧಿಸಬಹುದಾಗಿದೆ. ಈ ಸಾರ್ವತ್ರೀಕರಣದಿಂದ ಕೆಲವರು ಆರ್ಥಿಕ ವಿಷಯಗಳು ಆರೋಗ್ಯ ಹಾಗೂ ಆಯುಷ್ಯವನ್ನು ಸುಧಾರಿಸುತ್ತವೆ ಎಂಬ ಸುಲಭ ತೀರ್ಮಾನಕ್ಕೆ ಬರುತ್ತಾರೆ.

ದೇಶದೊಳಗಿನ ಅಂಕಿ ಸಂಖ್ಯೆ ಒಂದನ್ನೂ ನೋಡಿದಲ್ಲಿ ಅದು ಸರಿ ಎನಿಸಬಹುದು. ಆದರೆ ಆರ್ಥಿಕ ವಿಷಯಗಳು ಆರೋಗ್ಯ ಹಾಗೂ ಆಯುಷ್ಯವನ್ನು ಸುಧಾರಿಸುತ್ತವೆ ಅನ್ನುವುದನ್ನು ಸಮರ್ಥಿಸಲು ಇನ್ನೂ ಹೆಚ್ಚು ವಿಷಯಗಳನ್ನು ಗಮನಕ್ಕೆ ತೆಗೆದು ಕೊಳ್ಳಬೇಕಾಗುತ್ತದೆ. ಈ ಸಂದರ್ಭದಲ್ಲಿ ಸುಧೀರ್ ಅಹಮದ್ ಹಾಗೂ ಮಾರ್ಟಿನ್ ರೆಸೆಲಿಯಾನ್ ಅವರ ಕೆಲವು ಅಂಕಿಸಂಖ್ಯೆಗಳ ವಿಶ್ಲೇಷಣೆ ಆಶ್ಚರ್ಯ ಉಂಟುಮಾಡುತ್ತವೆ. ದೇಶದೊಳಗಿನ ಅಂಕಿಸಂಖ್ಯೆಗಳನ್ನು ಹೋಲಿಸಿದಾಗ ಆಯುನಿರೀಕ್ಷಣೆ ಹಾಗೂ ತಲಾ ಒಟ್ಟಾರೆ ರಾಷ್ಟ್ರೀಯ ಉತ್ಪನ್ನಗಳ ನಡುವೆ ನಿರ್ದಿಷ್ಟವಾದ ಸಂಬಂಧವಿದೆ. ಆದರೆ ಈ ಸಂಬಂಧ ಮುಖ್ಯವಾಗಿ ಬಡಜನರ ಆದಾಯ ಹಾಗೂ ಜನಾರೋಗ್ಯದ ಮೇಲೆ ಖರ್ಚಾದ ಒಟ್ಟಾರೆ ಸಾಮಾಜಿಕ ಅವಕಾಶ ಹೆಚ್ಚಿಸುವುದರಿಂದ, ಆರ್ಥಿಕ ಅಭಿವೃದ್ಧಿಯು ಸಾಧ್ಯವಾಗಿದೆ ಹಾಗೂ ಆಯುನಿರೀಕ್ಷಣೆ ಹೆಚ್ಚು ಮಾಡಿ ಮರಣಸಂಖ್ಯೆ ಕಡಿಮೆ ಮಾಡಿ ಅನುಕೂಲ ಪರಿಸ್ಥಿತಿಯನ್ನು ಕಲ್ಪಿಸಲಾಗಿದೆ. ಕೆಲವು ಹೆಚ್ಚು ಬೆಳವಣಿಗೆಯ ದೇಶಗಳಾದ ಬ್ರೆಝಿಲ್‌ನಲ್ಲಿ ಈ ಹೋಲಿಕೆ ತೀವ್ರವಾಗಿದೆ. ಈ ದೇಶಗಳಲ್ಲಿ ತೀರ ಸಾಮಾಜಿಕ ಅಸಮಾನ್ಯತೆ, ನಿರುದ್ಯೋಗ, ಜನಾರೋಗ್ಯ ಸಾಧನೆಯಲ್ಲಿ ಅಲಕ್ಷ್ಯ ಕಂಡುಬಂದರೂ, ಈ ದೇಶಗಳು ತಲಾ ಒಟ್ಟಾರೆ ರಾಷ್ಟ್ರೀಯ ಆದಾಯದ ಬೆಳವಣಿಗೆಯನ್ನು ಹೊಂದಿವೆ. ಹೆಚ್ಚು ಆರ್ಥಿಕ ಬೆಳವಣಿಗೆಯುಳ್ಳ ದೇಶಗಳ ಜನಾಯುಷ್ಯದ ಹೆಚ್ಚಳ ನಿಧಾನವಾಗಿ ಸಾಗಿದೆ. ಬೆಳವಣಿಗೆ ಆಧಾರಿತ ಪದ್ಧತಿಯು, ವೇಗವಾದ ಆರ್ಥಿಕ ಬೆಳವಣಿಗೆಯೊಂದಿಗೆ ಬೆಳೆಯುತ್ತಿದೆ ಹಾಗೂ ಅದರ ಯಶಸ್ಸು ಬೆಳವಣಿಗೆಯ ಗತಿ, ವ್ಯಾಪಕ ಆಧಾರವುಳ್ಳ ಆರ್ಥಿಕತೆ ಹಾಗೂ ಅಧಿಕ ಆರ್ಥಿಕ ಸಂಪತ್ತಿನ ಸರಿಯಾದ ಉಪಯೋಗದ ಮೇಲೆ ಅವಲಂಬಿಸುತ್ತದೆ.

ಸಾರ್ವಜನಿಕ ಸರಬರಾಜು, ಕಡಿಮೆ ಆದಾಯ, ಸಂಬಂಧಿತ ದೆಲೆ :

ಮಾರ್ಗದರ್ಶಿತೆ ಆಧಾರ ಕ್ರಿಯೆ ತಲಾ ನಿಜ ಆದಾಯದ ಕೌತುಕ ಉಂಟುಮಾಡುವ ಹೆಚ್ಚಳದ ಮೇಲೆ ಅವಲಂಬಿಸದೆ, ಸಾವು ತಡೆಗಟ್ಟುವ ಹಾಗೂ ಜೀವನಮಟ್ಟ ಹೆಚ್ಚಿಸುವ ಸಾಮಾಜಿಕ ಸೇವೆಯನ್ನು ಅವಲಂಬಿಸಿದೆ.

ಉದಾಹರಣೆಗೆ ನಾವು ತಲಾ ಒಟ್ಟಾರೆ ರಾಷ್ಟ್ರೀಯ ಉತ್ಪಾದನೆ ಹಾಗೂ ಹುಟ್ಟಿದ ಸಮಯದಲ್ಲಿನ ಆಯುನಿರೀಕ್ಷಣೆಯನ್ನು ಆರು ದೇಶಗಳಲ್ಲಿ (ಚೀನಾ, ಶ್ರೀಲಂಕಾ, ನಮೀಬಿಯಾ, ಬ್ರೆಝಿಲ್, ಸೌಥ್ ಆಫ್ರಿಕಾ, ಗ್ರಾಬನ್ ಹಾಗೂ ಭಾರತದ 30 ದಶಲಕ್ಷ ಜನರಿರುವ ಕೇರಳ ರಾಜ್ಯ) ನೋಡೋಣ. ಕಡಿಮೆ ಆದಾಯವಿದ್ದರೂ ಕೇರಳ, ಚೀನಾ ಹಾಗೂ ಶ್ರೀಲಂಕಾದ ಜನರ ಆಯುನಿರೀಕ್ಷಣೆ ಶ್ರೀಮಂತ ರಾಷ್ಟ್ರಗಳಾದ ಬ್ರೆಝಿಲ್, ದಕ್ಷಿಣ ಆಫ್ರಿಕಾ ಹಾಗೂ ನಮೀಬಿಯಾ ಹಾಗೂ ಗ್ರಾಬನ್‌ಗೆ ಹೋಲಿಸಿದಾಗ ಅಸಮಾನತೆಯ ಮಾರ್ಗದರ್ಶಿ ಸಹಿತ ವಿರುದ್ಧ ದಿಕ್ಕಿನಲ್ಲಿದೆ. ಆಯು ನಿರೀಕ್ಷಣೆಯ ಬದಲಾವಣೆಗಳು ಅನೇಕ ಸಾಮಾಜಿಕ ಅವಕಾಶಗಳ ಮೇಲೆ ಅವಲಂಬಿಸಿದರೂ, ಬೆಳವಣಿಗೆಯನ್ನು ಸಂಪೂರ್ಣ ಅರ್ಥಮಾಡಿಕೊಳ್ಳಲು ಆದಾಯ ಕೇಂದ್ರಿತ ದೃಷ್ಟಿಯನ್ನು ಕೂಡಲೆ ಬಲಪಡಿಸಿದಾಗ ಮಾತ್ರ ಬೆಳವಣಿಗೆಯ ವಿಧಾನ ಅರ್ಥವಾಗಲು ಸಾಧ್ಯ, ಬಡರಾಷ್ಟ್ರದ ಜನರು ಮೇಲಿಂದಮೇಲೆ ಪ್ರತಿಕೂಲತೆಗೆ ಈಡಾಗಿ ಅನಾನುಕೂಲತೆಗಳನ್ನು ಅನುಭವಿಸಿದ್ದಾರೆ. ಆದರೂ ಆರೋಗ್ಯ ಹಾಗೂ ಉಳಿವಿನ ವಿಷಯಕ್ಕೆ ಬಂದರೆ, ಈ ಬಡರಾಷ್ಟ್ರಗಳಲ್ಲಿ ವೈದ್ಯಕೀಯ ಸೌಲಭ್ಯ ಹಾಗೂ ಆರೋಗ್ಯ ರಕ್ಷಣೆ ಇಲ್ಲದಿರುವುದು ಮುಖ್ಯ ವಿಷಯನಾಗುತ್ತದೆ.

(ಮುಂದುವರಿಯುವುದು)

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 1ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಚಿಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India (Marxist)